START

MICROFILMED
BY
NATIONAL ARCHIVES
OF INDIA
NEW DELHI 1975

REEL NO

KARNATAKA STATE ARCHIVES

SRINIVASA RAO MANGALAVEDE COLLECTION

Old Newspapers

KANNADA NAVAJIVANA

Published from Bagalakote

KANNADIGA

Published from Bagalakote

KANNADIGA

Published from Dharawada

ಕರ್ನಾಟಕ ರಾಜ್ಯಪತ್ರಾಗಾರ
ಶ್ರೀನಿವಾಸರಾವ್ ಮಂಗಳವೇಢಿಕರಲಕ್ಷ್ಮಿನ
ರಸಳಯ ಕಾಲದ ವೃತ್ತಿ ವರ್ತಿಕೆಗಳು
ಕನ್ನಡ ನಾಡಿನ
ಬಾಗಲಕೋಟೆಯಿಂದ ಪ್ರಕಟಿತ
ಕನ್ನಡಿಗ
ಬಾಗಲಕೋಟೆಯಿಂದ ಪ್ರಕಟಿತ
ಕನ್ನಡಿಗ
ಧಾರವಾಡದಿಂದ ಪ್ರಕಟಿತ

N O T E

The Karnataka State Archives is obliged to Sri Srinivasa Rao Mangalavede for granting it permission to take microfilm copies of old-time newspapers with him. The newspapers included in the present collection played an important part in India's freedom struggle. Sri Srinivasa Rao Mangalavede was himself, for the most part, the editor of Kannada Navajivana and Kannadiga published from Bagalakote, and he holds a high place among the freedom fighters of Karnataka. Kannadiga of Dharwar was edited by Sri Alur Venkata Rao, another great name among Karnataka's freedom fighters, and a mentor of Sri Mangalavede.

ವಿಜ್ಞಾಪನೆ

ಕರ್ನಾಟಕ ರಾಜ್ಯಪತ್ರಾಗಾರವು ಶ್ರೀಮಾನ್ ಶ್ರೀ ವಿವಾದರಾವ್ ಮಂಗಳ ವೇಡ್ಡೆಯವರಿಗೆ ತಮ್ಮಲಿರುವ ಹಳೆಯ ಕಾಲದ ವೃತ್ತ ಪತ್ರಿಕೆಗಳ ಫೋಟೋ ಪ್ರತಿಗಳನ್ನು ತೆಗೆದುಕೊಳ್ಳಲು ಅನುಮತಿ ಕೊಟ್ಟಿದ್ದಕ್ಕೆ ಬಹಿರಂಗವಾಗಿ ಧನ್ಯವಾದಗಳು. ಇಲ್ಲಿ ಸಂಗ್ರಹಿಸಿರುವ ಪತ್ರಿಕೆಗಳಿಗೆ ದ್ವಿತೀಯ ಪತ್ರಿಕಾ ಸಂಗ್ರಹಾಲಯದ ಫೋಟೋರಾಟದಲ್ಲಿ ಅಗ್ರಸ್ಥಾನ ವಿದೆ. ಶ್ರೀಮಾನ್ ಮಂಗಳ ವೇಡ್ಡೆಯವರು ಸ್ವತಃ ಫೋಟೊಗಲಕೋರರಾಗಿರುವುದರಿಂದ ಪ್ರಕಟಿಸಲಾದ ಕನ್ನಡ ನವ ಜೀವನ ಮತ್ತು ಕನ್ನಡಿಗ ಪತ್ರಿಕೆಗಳ ಸಂಪಾದಕರಾಗಿದ್ದರು. ಅಲ್ಲದೆ ಅವರು ದ್ವಿತೀಯ ಪತ್ರಿಕಾ ಗ್ರಾಮ ವೀರರಲ್ಲಿ ಅಗ್ರಗಣ್ಯರು. ಧಾರವಾಡದಿಂದ ಪ್ರಕಟಿಸಲಾದ ಕನ್ನಡಿಗ ದಿನಪತ್ರಿಕೆಯ ಸಂಪಾದಕರು ಶ್ರೀ ಊರು ವೆಂಕಟರಾಯರು. ಇವರು ಇಷ್ಟೇ ಅಲ್ಲದೆ ನಿಷ್ಣಾತರು. ಮಂಗಳ ವೇಡ್ಡೆಯವರಿಗೆ ದ್ವಿತೀಯ ಪತ್ರಿಕಾ ಪದ್ಧತಿಯ ಮಾರ್ಗದರ್ಶಕರು.

C O N T E N T S

KANNADA NAVAJIVANA Weekly. Published from Bagalakote	24 Nov. 1921 to 23 Nov. 1922
KANNADIGA Daily. Published from Bagalakote	22 March 1930 to 26 July 1930 9 December 1930 to 17 March 1931 20 March to 16 April 1931
KANNADIGA Biweekly. Published from Bagalakote	2 April to 27 July 1930
KANNADIGA Weekly. Published from Bagalakote	25 March 1925 to 18 March 1928 23 Nov. 1930 to 1 March 1931
KANNADIGA Daily. Published from Dharwad	24 August to 24 Nov. 1933

ವಿಷಯಾನುಕ್ರಮಣಿಕೆ.

ಕನ್ನಡ ನವ ಜೀವನ ವಾರಪತ್ರಿಕೆ. ಬಾಗಲಕೋಟೆ ಯಿಂದ ಪ್ರಕಟಿತ.	೨೪-೧೧-೧೯೨೧ ರಿಂದ ೨೩-೧೧-೧೯೨೨
ಕನ್ನಡ ದಿನಪತ್ರಿಕೆ. ಬಾಗಲಕೋಟೆ ಯಿಂದ ಪ್ರಕಟಿತ.	೨೨-೩-೧೯೨೦ ರಿಂದ ೨೬-೩-೧೯೨೦ ೯-೧೨-೧೯೨೦ ರಿಂದ ೧೩-೩-೧೯೨೧ ೨೦-೩-೧೯೨೧ ರಿಂದ ೧೬-೪-೧೯೨೧
ಕನ್ನಡಿಗ ವಾರಕ್ಕೆ ಎರಡುಸಲ. ಬಾಗಲ ಕೋಟೆಯಿಂದ ಪ್ರಕಟಿತ	೨-೪-೧೯೨೦ ರಿಂದ ೨೨-೩-೧೯೨೦
ಕನ್ನಡಿಗ ವಾರಪತ್ರಿಕೆ. ಬಾಗಲಕೋಟೆ ಯಿಂದ ಪ್ರಕಟಿತ	೨೫-೩-೧೯೨೫ ರಿಂದ ೧೮-೩-೧೯೨೬ ೨೩-೧೧-೧೯೨೦ ರಿಂದ ೧-೩-೧೯೨೧
ಕನ್ನಡಿಗ ದಿನಪತ್ರಿಕೆ. ಧಾರವಾಡದಿಂದ ಪ್ರಕಟಿತ.	೨೪-೮-೧೯೨೨ ರಿಂದ ೨೪-೧೦-೧೯೨೨

KANNADIGA

WEEKLY

YEAR. 3. Nos. 1-47.

FROM 3-4-1927

TO 18-3-1928.

ಕನ್ನಡಿಗ

ವಾರಪತ್ರಿಕೆ

ವರ್ಷ. 3. ಸಂಖ್ಯೆ 1 ರಿಂದ 47

3-4-1927 ರಿಂದ 18-3-1928 ಗೆ.

ಕಿರ್ಲೋಸ್ಕರ ನೇಗಿಲು ನಂ ೯



ಉಪಯೋಗ:— ನಮ್ಮ ಯಾವತ್ತೂ ನೇಗಿಲುಗಳಲ್ಲಿ ಈ ನೇಗಿಲು ಮಿಗಿಲಾದದ್ದು. ಯಾವಿಯ ಭೂಮಿ, ಪಡ ಭೂಮಿಗಳನ್ನು ಸಾಗುವಳಿ ಮಾಡಲಿಕ್ಕೂ ಕಾಲುವೆಗಳಿಂದ ತೊಯ್ಯುವ ಭೂಮಿಗೂ ಇದರ ಉಪಯೋಗ ಒಳ್ಳೆ. ಇದ ನಮ್ಮ ನೇಗಿಲು ನಂ ೧೦೦ ನೆಯದಂತೆ ವಿಕ್ಕ ಉಪಯೋಗಕ್ಕೂ ಬರುವದು. **ರಚನೆ**:— ಇದರ ಕುಳಗಳು ಹಾಗೂ ಸವೆಯುವ ಭಾಗಗಳು ಸವೆಯದಂತೆ 'ಚಿಲಿಂಗ ಪ್ರೊಸೆಸ್ಸಿನಿಂದ' ಗಟ್ಟಿಮುಟ್ಟು ಮಾಡಲ್ಪಟ್ಟಿರುತ್ತವೆ. ಮೇಳಿಗಳು ಕವಣಿ ಸುತ್ತವೆ. ಇದಕ್ಕೆ ತಿರುಗುವ ಕುಳ ವಿರುತ್ತದೆ. **ಎತ್ತು ಯುವ ಶಕ್ತಿ**:— ೬ ರಿಂದ ೮ ಎತ್ತುಗಳು ಬೇಕು. **ಸಾಲಿನ ಆಳಗಲ**:— ೮ ರಿಂದ ೧೦ ಇಂಚು ಆಳ; ೧೨ ರಿಂದ ೧೪ ಇಂಚು ಅಗಲ. **ತೂಕ**:—ಸರಾಸರಿ ೨೦೦ ಪೌಂಡು ಸವಸ್ತರ ಸಂಗತಿಯಬಗ್ಗೆ ಇದರ ಹಸ್ತಪತ್ರಿಕೆಯನ್ನು ನೋಡಿರಿ. **ಬೆಲೆ** ೫೫ ರೂಪಾಯಿ.

ಕಿರ್ಲೋಸ್ಕರ ಬಂಧು. ಲಿಮಿಟೆಡ್ ಕಿರ್ಲೋಸ್ಕರವಾಡಿ. ಜಿ. ಸಾತಾರಾ.

Little's Oriental Balm.

ನೋವುಬಾಧೆಗಳ ನಿವಾರಣಾರ್ಥ!

ನಿಮ್ಮ ಬಾಧೆಗಳ ನಿವಾರಣಾರ್ಥವಾಗಿ ಅತ್ಯುತ್ತಮವಾದ ಹಾಗೂ ಒಳ್ಳೇ ಶುದ್ಧವಾದ ರಾಮಬಾಣ ಉಪಾಯವು ಬೇಕಾಗಿದ್ದರೆ, **ಈ ಹೆಸರನ್ನು ಲಕ್ಷದಲ್ಲಿ** ಇಡಿರಿ.

ಕೆಳಗಿನ ವ್ಯಾಧಿಗಳ ನಿವಾರಣಕ್ಕಾಗಿ ಹಿಂದುಸ್ಥಾನದ ದಿವ್ಯೌಷಧಿ.

ತಲೆಶೂಲಿ, ಸಂಧಿವಾತ, ಎಲ್ಲತರದ ಕಸ, ನರ ತೊಡಕು, ಹರಿವಾತ ಟೊಂಕನೋವು, ಅರ್ಧಾಂಗವಾಯು ಉಳುಕು (ಪಳದದ್ದು)

೪೨ ವರ್ಷಗಳಿಂದ ಈ ಔಷಧವು ಜಗಪ್ರಸಿದ್ಧವಾಗಿದೆ.

ಸ್ವಲ್ಪದರಿಂದಲೇ ಗುಣ ಬರುವದು--ಒಂದೇ ಕಣದಿಂದ ಅದ್ಭುತ ಗುಣವು ಉಂಟಾಗದಿದ್ದಲ್ಲಿ ಅಥವಾ ಗುಳ್ಳೆ ಏಳುವದಿಲ್ಲ.

ತಾವು ಸುಖವಾಗಿ ಉಪಶಮನವಾಗುವದು.

ಮತ್ತು ನೆಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲ.

ಎಲ್ಲ ಔಷಧಿ ವ್ಯಾಪಾರಿಗಳ ಲ್ಲಿಯೂ ದೊರೆಯುತ್ತೆ.

Buy a bottle

TO-DAY!

* ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ ನಂ ಬಿ ೧೯೪೭ ವಾ. ಚಂದಾ ೧—೧೩—೦ ಮಾತ್ರ

ಕನ್ನಡ ಜಯಕರ್ನಾಟಕ.

(ಇಷ್ಟದಲ್ಲಿ ಕನ್ನಡ ಪದಕೋದನವು ಸಮಾಪ್ತಿಸ್ಪವಾಗಿದೆ)

ಯಥಾ ಧರಣಿ ದ್ವಯಂ ತಥಾ ಧಾನ್ಯಂ ಸ್ವಯಂ ॥ — ಸತ್ಯ

ಸಂಪಾದಕರು—ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ನಿತಿ ಫಾಲ್ಗುಣ ಶ.ದ್ಧ ೬ ಶಕೆ ೧೮೪೯ ಕಾ. ೨೬ ಫೆ-೧೯೨೮ Date 26—2—1928. | ಸಂಚಿಕೆ ೧೫

ಕನ್ನಡ ಬಂಧುಗಳೇ ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ ಬೇರೆ ಬೇರೆ, ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿವಿಸರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಇಂಡುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವುಳಿದ ಕಡೆ ಎಷ್ಟಿಯೂ ಇಷ್ಟು ಅಡಿಸಿ ಫೀಗೆ ಬೊರೆಯಪದಿಲ್ಲೆಂಬುವದನ್ನು ಲಕ್ಷಿಸಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪು! ಹೆಚ್ಚಿನ ಮಾಹಿತಿಗಾಗಿ ತೀಪ್ರವೆ ಬರೆದ ಕೊಳ್ಳಿರಿ !

ವಿಳಾಸ—ಕುಲಕರ್ಣಿ ಮೋಟಾರ ಸ್ಕೂಲ.

ಮತ್ತು ಮೆಕ್ಯಾನಿಕಲ್ ವರ್ಕಶಾಪ ಕಲ ಶನಿವಾರ ಪೇರ ಲಾಯಿಡ್‌ಬ್ರಿಜ್ಜಿದ ಹತ್ತರ ಪುಣೆ ಶಹರ

ಸಹಕಾರ ಸಂಘ

ಈ ಸಹಕಾರ ಸಂಘಗಳಿಗೆ ಬೇಕಾಗುವ ಸಮಾನೆಗಳನ್ನು ಒಟ್ಟಾಗಿಸಿ ನಮ್ಮಲ್ಲಿ ಮಾರಲಿಕ್ಕೆ ಇಟ್ಟಿರುವೆವು- ವಾವತಿ ಮಂಡಳಿಗಳಿಕ್ಕೆ ಮಾಡುವ ಅರ್ಜಿ ಸಾಲ ಬೇಡುವ ಅರ್ಜಿ ಮುನ್ನತ ಬೇಡುವ ಅರ್ಜಿ ಮೊದಲಾದ ಎಲ್ಲ ನಮೂನೆಗಳೂ ಇವೆ.

ವ್ಯವಸ್ಥಾಪಕ—ವಿದ್ಯಾರಣ್ಯ ಮುದ್ರಾ ಮಂದಿರ
ಬಾಗಲಕೋಟೆ.

ಮಯೂರ ಸಿಖಾ

ದುರ್ಲಭವಾದ ವನಸ್ಪತಿಯು. ೨೦ ತೋಲೆ ೧ ರು ವೈದ್ಯರಿಗೂ, ವ್ಯಾಪಾರಸ್ಥರಿಗೂ, ಅನೇಕ ಉಪಯೋಗವಾದ ವನಸ್ಪತಿಗಳು ದೊರಕುವವು

ವೈದ್ಯ—ವಾದಿರಾಜ ಜಹಗೀರದಾರ
ಮು. ಇಲಳ್ಳಿ (ವಿಜಾಪೂರ)

ಅತ್ಯಲ್ಪವಿವೆ
ಕೇವಲ ಉಚಿತ

ಉಚಿತ
ಕೇವಲ ಉಚಿತ



" ತಾರಾ " ಲೀವರ್ ರಜಿಸ್ಟರ್ಡ್ ಪೊಕೆಟ್ ವೊಚ್ ೧೬ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ " ಸಿ " ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು " ತಾರಾ " ಲೀವರ್ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್‌ಗೋಲ್ಡಿನ ಪೊಕೆಟ್ ವೊಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕು ಪಿ. ಬಿ [illegible] ಮದ್ರಾಸ

" ಸಿರಿಗನ್ನಡಂ ಗೆಲ್ಗೆ "

ಬಾಗಲಕೋಟೆಯ

ವಾಸುದೇವ ಅಮೇಚೂರ

ನಾಟಕ ಸಭೆಯವರು

ರವಿವಾರ ವಾರ್ಜಿಳನೇ ತಾ|| ದಿನ

ಬಾಗಲಕೋಟೆಯ ಶಿವಾನಂದ ನಾಟಕ ಶಾಲೆಯಲ್ಲಿ

ಕರ್ನಾಟಕ ವಾಙ್ಮಯ ಸಾಮ್ರಾಟ್ ಸ್ವ.

ಕೆರೂರ ವಾಸುದೇವಾಚಾರ್ಯರಿಂದ

ವಿರಚಿತವಾದ

'ಪತಿವಶೀಕರಣ.'

(ಅಂಕ ೧-೫)

ಎಂಬ ನಾಟಕವನ್ನು ರಂಗಭೂಮಿಯ ಮೇಲೆ ಆಡುವರು. ಈ ನಾಟಕವು ಸಾಮಾಜಿಕವಿದ್ದು ಹಾಸ್ಯರಸಪ್ರಧಾನವಾಗಿದೆ. ಶ್ರೀ. ವಾಸುದೇವಾಚಾರ್ಯರ ಪ್ರತಿಭೆ, ಭಾಷಾಸೌಂದರ್ಯ, ನಾಟ್ಯ ರಜನಾ ಚಾತುರ್ಯಾದಿಗಳನ್ನು ಪ್ರತ್ಯಕ್ಷವಾಗಿಕಂಡು ಆನಂದ ಪಡೆಯಲಿಚ್ಛೆ ಯುಳ್ಳವರು ಅವಶ್ಯವಾಗಿ ಆದಿನ ನಾಟಕಕ್ಕೆ ಬರತಕ್ಕದ್ದು. ಹಾಗೂ ಹಾಸ್ಯರಸದ ಸವಿಯನ್ನು ಸವಿದು ಹಿರಿ ಹಿರಿ ಹಿಗ್ಗಬೇಕು.

ಸ್ವಹಸ್ತ, ಪರಹಸ್ತಗಳಿಂದ ಈ ಅಮೇಚೂರ ಸಭೆಯ ವರಿಗೆ ಪ್ರೋತ್ಸಾಹಿಸುವ ಸರ್ವಭಾವು ಬಾಗಲಕೋಟೆಯ ರಸಿಕರ ಮೇಲೆಯೇ ಇದೆಂಬುದನ್ನು ಯಾವಾ ಮರೆಯಬಾರದಾಗಿ ವಿನ್ನಹವಿದೆ.

ಟಿಕೀಟಿನ ದರ ಇತ್ಯಾದಿ ವಿಶೇಷ ಸಂಗತಿಗಳನ್ನು ಹಸ್ತ ಪತ್ರಿಕೆಗಳಲ್ಲಿ ಕುಂಕೊಳ್ಳಲಿಹುದು.

ಸನ್ಮಾನಿತ ಕಾರ್ಯಾದರ್ಶಿ.

ದಿ ಏಶಿಯಾಟಿಕ್ ಗೌರ್ನಮೆಂಟಿ ಸೆಕ್ಯೂರಿಟಿ
ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೮ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೬ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಾಹಸ್ತರಿಗೆ ಬಡ್ಡಿ ನುತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೬೫೫ ವ್ಹಿ ವೀರಸ್ವಾಮಿ ಮದಲಿಯಾರ ಸಾರಟರ ಆಲ್ ಎಮ್. ಎಸ್. ಎಮ್. ಡಿವ್ಹಿಜನ್ ವ್ಹೆಪರಿ ಮದ್ರಾಸ ರೂ.೧೦೦೦

(೨) ಎಲ್. ಬಿ ಸಿ. ನಂ. ೧೦೩೮೮ ಆ. ಸಿ. ಎಮ್. ರಾಮಚಂದ್ರ ನಾಯಿಡು ಎಫ್ ಆರ್ ಎಚ್. ಎಸ್. (ಲಂಡನ) ಇನ್ಸ್ಪೆಕ್ಟರ ಸಿಲ್ಕ ವರ್ಕ್ಸ ಸಂಗ್ರೆಡ್ಡಿ ಸೋಷ್ಯ ಹೈದರಾಬಾದ (ದಕ್ಷಿಣ) ೧೦೦೦

(೩) ಎಲ್ ಬಿ. ಸಿ. ನಂ. ೧೯೧೩ ಗೋಪೀನಾಥ ನಾಗದಾಸ ಪ್ರೊ ಬಂಥ ಮರ್ಚಂಟ ಲಾ, ನವಾಬಪೂರ ರೋಡ ಡಾಕಾ ಈಸ್ಟರಿಗಾಲ ೧೦೦೦

(೪) ಬಾಂಡ ನಂಬರು ೧೩೬೪೨ ಶಹಾ ಚುನಿಲಾಲ ದೇವಿಚಂದಜಿ ಬಗ್ರಾವಾಲಾ, ಸರಾಫ ಸಿರೋಹಿ ರಾಜಪುತಾನಾ ರೂ. ೧೦೦೦

(೫) ಬಾಂಡ ನಂಬರು ೧೩೬೩೮ ಗಣೇಶ ಬಳವಂತ ವಾಡೆಕರ, ಟೀಚರ ಸ್ಕೂಲ ಕೊಲ್ಹಾಪೂರ ರೂ ೧೦೦೦

ಬಿ. ಸ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಪುಕ್ಕಟಿ! ಪುಕ್ಕಟಿ!! ಪುಕ್ಕಟಿ!!!

ಬಹು ರುಚಿಕರವಾದ ಪುಸ್ತಕ

ವೀರವರ್ಮ ರಾಜಾ

ಮತ್ತು

ಮಾಲಿನಿ.

ಪುಕ್ಕಟಿಯಾಗಿಯೂ ಅಂಚೆವೆಚ್ಚ ವಿಲ್ಲದೆಯೂ ಕಳಿಸಲ್ಪಡುವದು.

ಒಂದು ಕಾರ್ಡನ್ನು ಬರೆಯಿರಿ.

ವಿಳಾಸ:—

ಆತಂಕ ನಿಗ್ರಹ ಫಾರ್ಮಸಿ

೩೬, ಬ್ರಾಡವೇ ಮದ್ರಾಸ

ಕನ್ನಡಿಗ.

ಬಾಗಲಕೋಟೆ- ಕನ್ನಡಿಗ ಫಾಲ್ಗುಣ ಶು.ದ್ಧ ೬ ಶಕೆ ೧೮೮೯ರ್ಲ

ಸಂಪಾದಕರ ಭೂವಿ

ಓಂ

ಸನ್ನ ಮುನಸಿನ ಮೇಣನವಾಡಿ ಕಟ್ಟುವೆನಾನು ।
ನಿನ್ನ ಬೆಸನವಮಾಡಿದಂಥ ಪುಳ್ಳಿಲ ದೊಮ್ಮೆ।
ಕನ್ನಡಾವರು ನಿನ್ನ ಮೇಣಬುತ್ತಿಯು ಸೊಂದು ನಿನ್ನಯಾಕಾಶದೀ ।
ನನ್ನ ದೇಹವ ನಿನ್ನ ವೀರಶಾಸನಕಾಗಿ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ಕನ್ನಡಾಂಬವ ನಿನ್ನ ಗಂಧವನು ವೀರಬಹ ಗಂಧವಹನೆಂದು ತಿಳಿಸಿ
—ಅಂಡಯ್ಯಾ ತಸಯ ದತ್ತ

ದಿವಂಗತರಾದ ರಾ. ಬಾ ಎಚ್ ಕೃಷ್ಣಶಾಸ್ತ್ರಿಗಳು

ಕನ್ನಡ ನಾಡಿನ ಇತಿಹಾಸ ಸಂಶೋಧನ ಕಾರ್ಯದಲ್ಲಿ, ಅ ಯಂಡ ಪರಿಶ್ರಮ ಮಾಡಿದ ಮಯನೀಯರುಗಳಲ್ಲಿ ಒಬ್ಬರಾದ ರಾ. ಬಾ. ಎಚ್ ಕೃಷ್ಣಶಾಸ್ತ್ರಿಗಳು, ಕಳೆದ ವಳೆನೇ ತಿ ರಿಂಬಿನ ದಿವ ೆ ಪರಲೋಕವಾಸಿಗಳಾದರೆಂಬ ಸುದ್ದಿಯನ್ನು ತಿಳುಹಿಸಲು, ನ ಮಗೆ ಅತ್ಯಂತ ವಿಷಾದವಾಗುತ್ತದೆ. ರಾ. ಬಾ. ರವ ಮೈ ೂರ ಸೀಮೆಯಲ್ಲಿಯ ಕಡೂರ ಜಿಲ್ಲೆಯಲ್ಲಿರುವ ಹೊಸಕೊಪ್ಪ ಯಲ್ಲಿ ೧೮೭೦ ರಲ್ಲಿ ಹುಟ್ಟಿದರು ಪಾಶ್ಚಿಮಿಕ ವಿದ್ಯಾ-ಭ್ಯಾಸವ ನಂತರ ಇಂಗ್ಲೀಷನನ್ನು ಕಲಿತು, ಮದ್ರಾಸ ಯುನಿವರ್ಸಿಟಿಯು ಂ ಪದವಿಯನ್ನು ಸಂಪಾದಿಸಿದರು. ೧೮೯೧ ನೇ ಇಸ್ವಿಯ ಮದ್ರಾಸ ವಿಭಾಗಕ್ಕೆ ಹೊಂದಿದ ಪುರಾಣ ವಸ್ತು ಸಂಶೋ ನ ಖಾತೆಯಲ್ಲಿ, ಉದ್ಯೋಗಕ್ಕೆ ಸೇರಿ ಅವಿಶ್ರಾಂತ ಪರಿಶ್ರಮ ಮಾಡಿದ್ದರಿಂದ ಅಲ್ಲಿಯ ಪಾಶ್ಚಾತ್ಯ ಪೌರ್ವಾತ್ಯ ಪಂಡಿತರಿ ರಿಗೂ, ಜನಪದೀ ಪ್ರಿಯರಾದರು. ಮುಂದೆ ೧೯೦೬ರಲ್ಲಿ, "ಗ್ಯಾ ಜೆಟೆಡ್ ಅಫಿಸರ"ರಾಗಿ, ೧೯೧೭ರಲ್ಲಿ "ಎಪಿಗ್ರಾಫಿಯಾ ಇಂಡಿ ಕಾ" ಎಂಬ ಪುರಾಣ ವಸ್ತು ಸಂಶೋಧಕ ವಿಷಯಗಳನ್ನೊಳ ೊಂಡ, ಇಂಗ್ಲೀಷ ಮಾಸ ಪ್ರಸ್ತಕದ ಸಂಪಾದಕತ್ವಕ್ಕೆ ಸರಕಾ ರದಿಂದ ನೇಮಿಸಲ್ಪಟ್ಟರು. ಈ ಮಾಸಿಕಕ್ಕೆ ಪ್ರಿ ॥ ಥಮಸ್ ॥ ಸ್ನೆನ್‌ಕೋನೊ ಇವರು ಹೆಸರಿಗೆ ಸಂಪಾದಕರಾಗಿದ್ದರೂ, ಅದ್ಯ ಭಾಗವೆಲ್ಲ ರಾ. ಬಾ ಕೃಷ್ಣಶಾಸ್ತ್ರಿಗಳ ಶ್ರೇಯಸ್ಸೇ ಆಗಿತ್ತು. ಮುಂದೆ ೧೯೨೦ರಲ್ಲಿ ಡಾ ಫ್ಲೀಟರವರು ಬರ್ತಾನಿಯ ಮ್ಯೂ ಸರಕಾರಿದವರ, ಇವರನ್ನೇ ಎಪಿಗ್ರಾಫಿಸ್ಟರನ್ನಾಗಿ ನೇಮಿ , ಆ ಮಾಸಿಕದ ಮುಖ್ಯ ಸಂಪಾದಕತ್ವವನ್ನು ಇವರಿಗೇ ಒಪ್ಪಿ ದರು. ರಾ| ಬಾ| ರವರು ಮಾತೃಭಾಷೆಯು, ತೆಲುಗಾದ್ದರೂ ನ್ನಡದಲ್ಲಿ ಅಸಾಧಾರಣವಾದ ಪಾಂಡಿತ್ಯ ಉಳ್ಳವರಾಗಿದ್ದರು. ಮಿಳ ಭಾಷೆಯು ಅಭ್ಯಸನಮಾಡಿ, ಪೆಲ್ಲಕುಡಿ ತಾಮ್ರ ಶಾಸನ ಮಂತಾದ ತಮಿಳ ಶಿಲಾಲಿಪಿಗಳನ್ನು ತಮ್ಮ ಮಾಸಪತ್ರಿಕೆಯಲ್ಲಿ ಕಟಿಸಿದರು. ದಕ್ಷಿಣ ಹಿಂದುಸ್ಥಾನದ ಸಿರಾಶಾಸನಗಳೆಂಬ ಗ್ರಂ ಥ ೪-೫ ಸಂಪುಟಗಳನ್ನು ಇವರೇ ಸಂಶೋಧಿಸಿ ಪ್ರಸಿದ್ಧ ಮಾಡಿದ ರು. ಇದಂಲ್ಲಿ ತಮಿಳು ತೆಲುಗು ಲಿಪಿಗಳು ಬಹಳವಾಗಿವೆ. ಕ ನ್ನಡ ಕಡಿಮೆ! ಎಪಿಗ್ರಾಫಿಯಾದ ೬ ನೇ ಸಂಪುಟದಲ್ಲಿ ಶ್ರೀಕೂ ರ್ಮದಲ್ಲಿಯ ಶ್ರೀ ನರಹರಿ ತೀರ್ಥರ ಶಿಲಾಲಿಪಿಗಳನ್ನು ಮೊ ಲು ಪ್ರಸಿದ್ಧಮಾಡಿ ವೇಳಂಬರಾಜರ ಶಿಲಾಲಿಪಿಗಳನ್ನೂ ಆ ಮೇಲೆ ಪ್ರಕಟಿಸಿದರು. ಡಾ॥ ಫ್ಲೀಟರವರು, ಹೋಯ್ಸಳರ ಆಳಿಕೆಯ ಮಟ್ಟಿಗೆ ತಂದು ನಿಲ್ಲಿಸಿದ ಕರ್ನಾಟಕದ ಇತಿಹಾಸವನ್ನು ಮುಂದರಿಸಿ ವಿಜಯನಗರದ ರಾಯರ ಇತಿಹಾಸವನ್ನು ೊನೆಯ ವರಿಗೆ, ಅಂದರೆ ೧೬೬೫ ರ ವರಿಗೆ ವೈದು ಮಟ್ಟಿಸಿದರು. ಮ ದ್ರಾಸ ಮತ್ತು ಮುಂಬಯಿ ಇಲಾಖೆಗಳಿಗೆ ಸೇರಿದ, ಕರ್ನಾಟ ಕ ಭಾಗದಲ್ಲಿ ಶಿಲಾಲಿಪಿಗಳ ಸಂಶೋಧನವನ್ನು ಪ್ರಾರಂಭಿಸಿದ ಮಹನೀಯರು ಇವರೇ ಆಗಿದ್ದರು. ೧೯೧೫ರಲ್ಲಿ, ಕೊಲಾರದಲ್ಲಿ ಕೂಡಿದ ಕರ್ನಾಟಕ ಸಾಹಿತ್ಯ ಸಮ್ಮೇಲನಕ್ಕೆ ಅಧ್ಯಕ್ಷರಾಗಿದ್ದರು. ಕಲಕತ್ತಾ ಯುನ್ವಿವರ್ಸಿಟಿಯವರು, ಇವರನ್ನು ಪಿ, ಎಚ್ ಡಿ ಪರೀಕ್ಷೆಗೆ ಪರೀಕ್ಷಕರನ್ನಾಗಿ ನೇಮಿಸಿದ್ದರು. ಸರಕಾರೀ ಕೆಲ ಸದಿಂದ ನಿವೃತ್ತಿ ಹೊಂದಿದ ಒಳಿಕ, ಮೈಸೂರಿನ ಸಾರ್ವಜನಿಕ ಕಾರ್ಯಗಳಲ್ಲಿ ಬಹುಮಟ್ಟಿಗೆ ಶಕ್ತರರಾಗಿದ್ದರು. ಕಳೆದ ೨-೩ ತಿಂಗಳುಗಳಿಂದ, ಶರೀರದಲ್ಲಿ ಅಸ್ವಸ್ಥತೆಯುಂಟಾದ ಮೂಲಕ, ಆಸ್ಪತ್ರೆಯಲ್ಲಿ ಉಪಚಾರಕ್ಕೆಂದು ಹೋಗಿ ನಿಂತವರು.. ಮೇಲೆ ಹೇಳಿದಂತೆ ಇದೇ ತಿಂಗಳ ೭ನೇ ತಾರೀಖಿನ ದಿವಸ, ಅಕಸ್ಮಾತ್ತಾಗಿ ಕಾಲಾಧೀನರಾದರು. ಕರ್ನಾಟಕ ಇತಿಹಾಸ ಸಂಶೋ ಧನ ಕಾರ್ಯವನ್ನು ಪ್ರೇಮದಿಂದ ಕೈಕೊಂಡ ತೀರಕಿಸು ಸದ್ಗೃಹಸ್ಥರಲ್ಲೊಬ್ಬರಾದ ರಾ. ಬಾ. ಕೃಷ್ಣಶಾಸ್ತ್ರಿಗಳ ನಿರ್ಯಾ ಣದಿಂದ ನಮ್ಮ ನಾಡಿಗೆ ಅತಿ ದೊಡ್ಡದಾದ ಹಾನಿಯಾಯಿತೆಂದು ಖೇದವಾಗಿದೆ. ಈ ಶಜಿತ್ವಕ್ಕೆ ಜವಾಬ್ದಾರಿಯಿಲ್ಲ ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ಬೇಡ ತ್ತೇವೆ.

ಬಾಗಲಕೋಟೆಯ ನಗರ ರಚನೆಯ ಬೆ (ಜನೆಯೆಂ ದರೆ ಅದೊಂದು ಒಳ್ಳೇ ಆಶ್ಚರ್ಯದ ವಿಷಯವಾದಂತಾಗಿದೆ. ಈ ಯೋಜನೆಯಿಂದ ಪಟ್ಟಣವು ವಿ.ತಿಮೀರಿ ಬೆಳೆಯುವದೆಂದು ಭಾವಿಸಿ, ಮುನಸೀಪಾಲ್ಟಿಯವರು ತಾವೂ ಮೋಸಹೋಗಿ, ಈಗ್ಗೆ ಪಟ್ಟಣಿಗರನ್ನೂ ಮೋಸದಲ್ಲಿ ಹಾಕಬೇಕೆಂದಿರುವದು ಒಂದು ಅದ್ಭುತ ವಾದ ಮಾಂತ್ರಿಕ ಯುಕ್ತಿಯೇ ಆಗಿದೆ. ಮೊದಲಿಗೆ ಯಾವದೇ ಧೃಡಳಿ ಕಲ್ಪನೆಯಿಂದ ಈ ಕಾರ್ಯದಲ್ಲಿ ಅವರು ಪ್ರವೃತ್ತರಾಗಿ ದ್ದರೂ, ಈಗಲಾದರೂ ತಮ್ಮ ತಪ್ಪು ಗ್ರಹಿಕೆಯ ಪರಮಾವಧಿಯ ಅಳತೆಯನ್ನು ಕಂಡುಹಿಡಿದು, ಕಣ್ಣಿರೆಯಿತಕ್ಕದ್ದು. ಮುನಸೀ ಪಾಲ್ಟಿಯ ಈ ಯೋಜನೆಯ ಹುಚ್ಚನ್ನು ವಾಚಕರಿಗೆಲ್ಲ ಅನ ಲೋಕಿಸಬೇಕು. ೬೩ ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಈ ರಚನೆಗಾಗಿ ಮೊದಲು ಅಲ್ಲಲ್ಲಿ ಬೀದಿಗಳನ್ನು ಹಾಕಬೇಕೆಂದು ಮುನಸೀಪಾಲ್ಟಿಯವರು ನಿರ್ಧರಿಸಿದ್ದಾರೆ! ಇದು ಎಷ್ಟರ ಮಟ್ಟಿಗೆ ಸಯುಕ್ತವಾಗಿದೆಯೋ ತೋರಿದಲು ನೋಡುವಾ. ಬಾಗಲಕೋಟೆಯ ಜನಸಂಖ್ಯೆ ೨೦ ಸಾವಿರ ಈಗ್ಗೆ ೨೦ ವರ್ಷಗಳ ಇತಿಹಾಸವನ್ನು ನೋಡಿದರೂ ಊರು ಅಷ್ಟು ವಿಸ್ತಾರಹೊಂದಿಲ್ಲವೆಂಬುದ ಸ್ಪಷ್ಟವಾ ಗಿಕಾಣುತ್ತಲಿದೆ. ಆದರೆ ಉಳಿದ ಪಟ್ಟಣಗಳ ಸ್ಥಿತಿಪಾಗಿಲ್ಲ ಗದಗು, ವಿಜಾಪುರ, ಧಾರವಾಡ, ಹುಬ್ಬಳ್ಳಿಗಳನ್ನು ನೋಡಿದರೆ ಈ ೨೦ ವರ್ಷಗಳಲ್ಲಿ ವಿಸ್ತಾರವು ಬಹಳೇ ಆಗಿದೆಂಬ ಪ್ರಥಮದರ್ಶನದ ಲ್ಲಿಯೇ ಗೊತ್ತಾಗುವದು. ಆದರೆ ಬಾಗಲಕೋಟೆಯ ಸ್ಥಿತಿಯು ಹಾಗಿಲ್ಲ. ವೆಂಕಟೇಶರು ಕಲಿಗೆ ಮಾತ್ರ ಬಾಸು ಕೊಂಡು ಳಿದ

ದಿದೆ. ಸ್ಟೇಶನ್ನಿದದಾರಿಯಲ್ಲಿ ಗಿರಣಿಗಳಿದ್ದದರಿಂದ ಊರು ದೊಡ್ಡ ದಿದ್ದಂತೆ ಕಾಣುಬಹುದು. ಆದರೆ ಅದೇನು ಜನವಸತಿಯು ಲೆಕ್ಕಕ್ಕೆ ಉಪಯೋಗವಾಗತಕ್ಕದ್ದಲ್ಲ. ಇನ್ನು ಖಾನೇಸುಮಾರಿಯ ಲೆಕ್ಕ ದಿಂದ ನೋಡಿದರೂ, ಬಾಗಲಕೋಟೆಯು ಜನಸಂಖ್ಯೆಯು ಬೆಳೆದಿಲ್ಲ ವೆಂಬುದು ತಾನೇ ತಿಳಿದು ಬರುವದು ಪಟ್ಟಣದ ಬೆಳವಣಿಗೆಯು ಇತಿಹಾಸವು ಹೀಗಿದ್ದರೂ, ಬಾಗಲಕೋಟೆಯು ಬೆಳೆಯುವವೆಂದು ಲೆಕ್ಕನೂಡಿದ್ದ ಆಲಮಟ್ಟಿ ಜಂಗಮರ ಲೆಕ್ಕವೆಂದೇ ಹೇಳಬೇಕಾ ಗುವದು.. ಏನೋ ಯುದ್ದದಲ್ಲಿ ವ್ಯಾಪಾರಕ್ಕೆ ಕೊಂಚ ಕಳೆಯೇರಿ ತಂತೆ! ಕೂಡಲೇ ಮುನಸೀಪಾಲ್ಟಿಯ ತಲೆತಿರುಕತನಕ್ಕೂ ಕಳೆ ಯೇರಬೇಕೆ? ಈಗಿದ್ದ ಊರ ಕ್ಷೇತ್ರ ಫಲದ ೩/೪ ಪಟ್ಟಿನಷ್ಟು ವಿಸ್ತೀರ್ಣವಾದ ಪ್ರದೇಶವು ನಗರದ ರಚನೆಗಾಗಿ ಕಾದಿಡಲ್ಪಟ್ಟಿದೆ. ಇಂಥ ವಿಶಾಲವಾದ ಪ್ರದೇಶಕ್ಕೆ ಜನವಸತಿ ಎಲ್ಲಿಂದ ಬಾಬೇಕು? ಘಟೋತ್ಕಚನ ಮಾಯಾ ಬಾಲುಸಾರದಂತೆ ಮುನಸೀಪಾಲ್ಟಿ ಯವರೂ 'ಕಾಟನ್ ಮಾರ್ಕೇಟ್'ಗಾಗಿ ಮಾಯಾ ಬಜಾರದ ಕಲ್ಪನೆಯನ್ನೇ ಯಾಕಾದ್ದಲದಲ್ಲಿ ತಳೆದಿದ್ದರೆಂದು ಹೇಳಬಹು

ಕನ್ನಡ ವಾಙ್ಮಯ ಸಮ್ರಾಟರಾದ

ವೈ. ಕೆರೂರ ವಾಸುದೇವಾಚಾರ್ಯರ

ಎಲ್ಲ ಭಕ್ತರಲ್ಲಿ ಬಿನ್ನಹ

ಈ ಆಚಾರ್ಯವರ್ಯರ 'ಪತಿವತೀಕರಣ' ನಾಟಕವು ಇದೇ ರವಿವಾರ ೪ ನೇ ಮಾರ್ಚ ತಾ॥ ನಲ್ಲಿ ಬಾಗಲಕೋಟೆಯ ಶಿವಾನಂದ ನಾಟಕಶಾಲೆಯಲ್ಲಿ ಪ್ರಹೋಗಿಸಲ್ಪಡುವದು. ಆಚಾರ್ಯರಲ್ಲಿ ಪ್ರೇಮ ಭಕ್ತಿಗಳುಳ್ಳ ಸ್ವಸ್ಥಳ ಪರಸ್ಥಳ ಗಳಲ್ಲಿಯ ಕನ್ನಡಿಗರು ಆ ದಿನ ಅವಶ್ಯವಾಗಿ ಬಂದು, ಕನ್ನಡ ವಾಙ್ಮಯ ಸಮ್ರಾಟರ ಈ ಕೊನೆಯಾದ ಅಪ್ರತಿಮ ಕೃತಿಯಲ್ಲಿಯ ಸವಿಯನ್ನು ಸವಿದು ಆನಂದ ಹೊಂದಬೇಕಾಗಿ ಬಿನ್ನಹವಿದೆ.

ತಾ॥ ೨೪-೩-೩೮ — ಸನ್ಮಾನಿತ ಕಾರ್ಯದರ್ಶಿ, ಶ್ರೀ ವಾಸುದೇವ ಅನುಷ್ಠಾನ ನಾಟಕ ಸಭೆ ಬಾಗಲಕೋಟೆ.

ದು. ಅಂತೆಯೇ ಮಾಯೆಯಿಂದ ನಿರ್ಮಿತವಾದ ಕಲ್ಪನೆಗಳೆಲ್ಲ ಈಗ್ಗೆ ಬಯಲಾಗಿವೆ ಹೀಗೆ ಬಯಲಾದ ಸ್ಥಿತಿಯಲ್ಲಿ ಸಹ ನಗರ ರಚನೆಯ ಹವ್ಯಾಸಕ್ಕೆ ಮುನಸೀಪಾಲ್ಟಿಯವರು ಬೀಳುತ್ತಿರುವದು ಸರ್ವಥಾ ಯೋಗ್ಯವಲ್ಲ. ಈಗಲಾದರೂ ತಪ್ಪು ತಮ್ಮ ಕಲ್ಪನೆ ಗಳ ಬಗ್ಗೆ ಸರಕಾರಕ್ಕೆ ಸ್ಪಷ್ಟವಾಗಿ ಬರೆದು ಈ ಯೋಜನೆಯನ್ನು ರದ್ದು ಪಡಿಸಿ, ಬಾಗಲಕೋಟೆಯಂಥ ಸಣ್ಣ ನಗರಕ್ಕೆ ಸಾಧ್ಯವಾ ದ ನಗರ ರಚನೆಯನ್ನು ಮಾಡಿಕೊಳ್ಳಬೇಕು. ಇತ್ತ ಸರಕಾರಕ್ಕಾ ದರೂ ನಮ್ಮದೊಂದು ಸೂಚನೆಯಿದೆ. ಮುನಸೀಪಾಲ್ಟಿಯವರು ಈಗ್ಗೆ ಬೇಡಿದ ಸಾಲಕ್ಕೆ ಸರಕಾರದವರು ಸಮ್ಮತಿಸ ಬಾರದು. ಸಮರ್ಪಕವಾದ ನಗರ ರಚನೆಯ ರದಿರುವಾಗ್ಗೆ ಮುನ ಸೀಪಾಲ್ಟಿಯ ತಲೆಯಮೇಲೆ ಹೊರಲಾರದಂಥ ಸಾಲದ ಭಾರ ವನ್ನು ಹೇರುವದು ಎಂದಿಗೂ ನ್ಯಾಯಪ್ರದವಾಗಲಾರದು,

ಬಳ್ಳಾರಿಯ ವಾತಾವರಣವಲ್ಲಿ ಮತ್ತೆ ಆಂಧ್ರ-ಕರ್ನಾಟಕದ ಕ್ಷೋಭೆಯು ಪ್ರಖರವಾಗಿ ಎದ್ದಿದೆ. ಆಂಧ್ರ ವಿಶ್ವವಿದ್ಯಾಲಯದಲ್ಲಿ ಅನ್ಯಾಯವಾಗಿ ಸೇರಿಸಿದ ಬಳ್ಳಾರಿಯನ್ನು ಹೊರಪಡಿಸಬೇಕೆಂದು ಒಂದು ಉಪಸೂಚನೆಯನ್ನು ಶ್ರೀ ನಾಗನ ಗೌಡರು ಮದ್ರಾಸ ಕೌನ್ಸಿಲದಲ್ಲಿ ತರತಕ್ಕವರಿದ್ದಾರೆ. ಆದರೆ ಇದಕ್ಕೆ ಆಂಧ್ರರು ವಿರೋಧಿಸಲು ಅತ್ಯಂತ ಆತುರರಾಗಿ ಕುಳಿತಿ ದ್ದಾರೆ. ಯಾವ ಭಾಷಾನ್ವಯ ಪ್ರಾಂತರಚನೆಯ ತತ್ವದಮೇಲೆ ತಮಗೆ ಪ್ರತ್ಯೇಕ ಪ್ರಾಂತವು ಬೇಕೆಂದು ಆಂಧ್ರರು ಈಗ್ಗೆ ೧೫-೨೦ ವರ್ಷಗಳಿಂದ ಜಳವಳ ಮಾಡುತ್ತಿರುವರೋ ಅದೇ ತತ್ವವನ್ನು ಕನ್ನಡಿಗರಿಗೆ ಸಂಬಂಧಪಟ್ಟಾಗ್ಗೆ ಅಲ್ಲಗಳೆಯುತ್ತಿರುವ ದು ಅನ್ಯಾಯದ ಪರಮಾವಧಿಯೆಂದು ಸ್ಪಷ್ಟವಾಗಿ ಹೇಳಬ ಹುದು. ಯಾವ ತತ್ವಗಳನ್ನು ಮನ್ನಿಸದೆ ಸ್ವಾರ್ಥದೃಷ್ಟಿ ಯಿಂದ ಪ್ರೇರಿತರಾಗಿ, ನೆರೆಹೊರೆಯ ತಮ್ಮ ಬಂಧುಗಳ ಪತಿತಾತ್ಸಾಗಿ ಅನ್ಯಾಯವನ್ನುಂಟುಮಾಡುವದು ಸರ್ವಥಾ ಸಮಂ ಜಸವಲ್ಲ- ರಾಷ್ಟ್ರದೃಷ್ಟಿಯಿಂದಲಂತೂ ಆಂಧ್ರರ ಈ ಕೃತಿಯು ಅತ್ಯಂತ ಹೇಯವಾದುದೆಂಬದನ್ನು ಯಾವ ಸಮಂಜಸ ಮನುಷ್ಯ ನಾದರೂ ಹೇಳಬಲ್ಲನು. ಆದರೂ ರಾಷ್ಟ್ರೀಯ ಜಳವಳದಲ್ಲಿ ಪ್ರಖ್ಯಾತಿಯನ್ನು ಪಡೆದ ಆಂಧ್ರರ ಜನಾಂಗವು ತಮ್ಮೊಂದು ದುರಾಗ್ರಹವನ್ನು ಕನ್ನಡಿಗರ ವಿಷಯವಾಗಿ ಹಿಡಿದುದನ್ನು ಕಂಡು ನಮಗೆ ಆಂಧ್ರರ ವಿಷಯದಲ್ಲಿ ಅತ್ಯಂತ ಕನಿಕರ ಉಂಟಾಗು ತ್ತದೆ. ಯಾಕಂದರೆ ತಮ್ಮ ಈ ಕೃತಿಯಿಂದ ಆಂಧ್ರರು ತಮ್ಮ

'ಕನ್ನಡಿಗ' ನು ತಡವಾದುದೇಕೆ?

ಈಗ್ಗೆ ೩/೪ ವಾರಗಳಿಂದ 'ಕನ್ನಡಿಗ' ನು ಸಕಾಲದಲ್ಲಿ ಹೊರಡದೇ ೨/೩ ದಿನ ತಡವಾಗಿಯೇ ಜನರ ಕೈ ಸೇರುತ್ತಿ ರುವದಕ್ಕೆ? ಇದಕ್ಕೆ ಅನೇಕ ಕಾರಣಗಳಿದ್ದರೂ ಎಲ್ಲವನ್ನು ವಾಚಕರಿಗೆ ನಿವೇದಿಸಿ, ಅವರನ್ನು ಬೇಸರಗೊಳಿಸಲು ನಾವು ಇಚ್ಛಿಸುವದಿಲ್ಲವಾದರೂ, ಕಂಪೋಜಟರ ಬೇನೆ ಬೇಸರಿಕೆ ಹಾಗೂ ಯಂತ್ರಗಳು ಅಕಸ್ಮಾತ್ತಾಗಿ ಕೆಟ್ಟದ್ದು, ಇವೇ ಮುಖ್ಯವಾದ ಕಾರಣಗಳೆಂಬದನ್ನು ತಿಳಿಸದಿರಲಾರೆವು. ಮುಂ ದಿನ ಸಂಚಿಕೆಯಿಂದ ಮೊದಲಿನಂತೆ ಮತ್ತೆ ಸಕಾಲದಲ್ಲಿ 'ಕನ್ನ ಡಿಗ' ನು ಹೊರಡುವನೆಂದು ಆಶ್ವಾಸನ ಕೊಡುವೆವು.

ವ್ಯವಸ್ಥಾಪಕರು

ಪೆಸರನ್ನು ಕೆಡಿಸಿಕೊಳ್ಳುವರು. ಕನ್ನಡಿಗರ ಕತೆಗೆ ನ್ಯಾಯದೇವತೆಯು ಇರುವದರಿಂದ ಈ ದಿನವಿರದಿದ್ದರೂ ನಾಳೆಯಾದರೂ ಕನ್ನಡಿಗರ ಧ್ವಜಪತಾಕೆಯು ಬಳ್ಳಾರಿಯಲ್ಲಿ ಜಯದಿಂದ ಮೆರೆದೇ ಮೆರೆಯುವದು. ಆದ್ದರಿಂದ ಆಂಧ್ರಬಂಧುಗಳು ಈಗಲಾದರೂ ಕಣ್ತೆರೆದು ನ್ಯಾಯದ ಮಾರ್ಗವನ್ನೇ ಅನುಸರಿಸಬೇಕೆಂದು ಆಗ್ರಹಪಡಿಸುತ್ತೇವೆ. ಇನ್ನು, ನಮ್ಮ ಕನ್ನಡಿಗರಿಗೊಂದು ಸೂಚನೆ ಕನ್ನಡಿಗರ ದೌರ್ಬಲ್ಯವು ಎಂಥ ರಸಾತಳಕ್ಕೆ ಮುಟ್ಟಿರುವದನ್ನು ಕನ್ನಡಿಗರೆಲ್ಲ ತಿಳಿದು ಕೊಳ್ಳಬೇಕು. ಎತ್ತ ನೋಡಿದರತ್ತ ನಿರಾಶೆಯೇ ಕನ್ನಡಿಗರಿಗೆ ಗಂಟುಬಿದ್ದಿದೆ. ಬಳ್ಳಾರಿ- ಅನಂತಪುರಗ ಳಲ್ಲಿ ಆಂಧ್ರರ ಜಲ್ಲಾಟ! ಸೇಲಂ, ಕೊಯಿಮುತ್ತೂರ ನೀಲಗಿರಿ ಗಳಲ್ಲಿ ಕನ್ನಡಿಗರನ್ನ ತಮಿಳರು ಮೂಲೆಗೊತ್ತಿ ಬಿಟ್ಟಿದ್ದಾರೆ, ಸೊಲ್ಲಾಪುರ, ಸಾತಾರೆ ಬೆಳಗಾವಿಗಳಲ್ಲಿ ಮರಾಟರು ಕನ್ನಡಿಗ ರಿನ್ನು ಒಂದೇಸವನೇ ಒತ್ತಿ ಒತ್ತಿ ಕೆಳಕ್ಕೆ ದಬ್ಬುತ್ತಲಿದ್ದಾರೆ ಇಂ ತಿಷ್ಟು ದುರ್ದಶೆಯನ್ನು ಎಲ್ಲ ಕಡೆಗೂ ನಾವು ಕಣ್ಣಾರೆ ಕಾಣುತ್ತಿ ರುವಾದರೂ, ನಮ್ಮ ಕಾರ್ಯವನ್ನು ಸುಸಂಘಟಿತವಾಗಿ ಸಾಗಿ ಸುವಷ್ಟು ಜಿಗಟು, ಉತ್ಸಾಹ ಕಾರ್ಯತತ್ಪರತೆಗಳು ನಮ್ಮಲ್ಲಿಲ್ಲ! ನಮ್ಮಲ್ಲಿ ಏಕೀಕರಣದ ಬಗ್ಗೆ ಏಕನಾಕ್ಯತೆಯಿದ್ದರೂ ಈ ಹ ಒರಹವು ನಮ್ಮವಾಲಿಗೆ ಬಂದಿದೆಯೆಂದಮೇಲೆ ನಮ್ಮಲ್ಲಿರುವ ತಮಸಾದ ದೌರ್ಬಲ್ಯವನ್ನು ನಾವು ಎಷ್ಟುಹಳಿದರೂ ಕಡಿಮೆಯೇ ಇದೆ.

ಕರ್ನಾಟಕದ
ಏಕೀಕರಣವು

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಆಂಧ್ರರ ಜಳವಳಿಯನ್ನು ಪರೀಕ್ಷಿಸುವದಕ್ಕಾಗಿ ಅವರ ವಾರ್ಷಿಕ ಪರಿಷತ್ತಿಗೆ ಮೈ. ಕಡಪಾ ರಾಘವೇಂದ್ರರಾಯರಿಂದಿಗೆ ಶ್ರೀ. ಅಲೂರ ವೆಂಕಟರಾಯರು ಸರಗುಂದ ರಾಮರಾಯರು, ಇವರೇ ಮೊದಲಾದ ಅವರ ಮಿತ್ರರು ಕೊಯಿಗಿ ಬಂದರು ಆಮೇಲೆ ಈ ಜಳವಳಿಯನ್ನು ಕರ್ನಾಟಕದಲ್ಲಿಯೂ ಪ್ರಾರಂಭ ಮಾಡಿದರು "ಕರ್ನಾಟಕ ಸಭೆ" ಯೆಂಬ ಸಂಸ್ಥೆಯೊಂದು ಕೇವಲ ಏಕೀಕರಣದ ಪ್ರಚಾರಕಾರ್ಯಾಗಿಯೇ ೧೯೧೬ ರಲ್ಲಿ ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟಿತು. ಈ ಸಭೆಯ ಮುಖಂಡತ್ವವನ್ನು ಮೈ ಕಡಪಾರಾಯರು ಸ್ವತಃ ತಾವೇ ವಹಿಸಿ, ಒಲು ಉತ್ಸಾಹದಿಂದ ಈ ಕೆಲಸವನ್ನು ಮಾಡತೊಡಗಿಸಿದರು. ಕರ್ನಾಟಕದ ಪ್ರಮುಖ ಭಾಗಗಳಲ್ಲಿ ಅವರು ವ್ಯಾಖ್ಯಾನಗಳನ್ನು ಕೊಟ್ಟುಬಂದರು. ಕರ್ನಾಟಕದ ಎಲ್ಲ ಜಾತೀಯ ಮುಖಂಡರನ್ನು ಸಂದರ್ಶಿಸಿ, ಈ ಒಗ್ಗೆ ಅವರ ಸಹಾನುಭೂತಿಯನ್ನು ಸಂಪಾದಿಸಿದರು. ಮೊಂಟೇಗೊ ಸಾಹೇಬರು ಹೊಸ ಸುಧಾರಣೆಯ ಯೋಜನೆಗಾಗಿ ಹಿಂದುಸ್ಥಾನಕ್ಕೆ ಬಂದಾಗ್ಗೆ, ಭಾಷಾನ್ವಯ ಪ್ರಾಂತರಚನೆಯ ಬಗ್ಗೆ ಆಂಧ್ರ, ಸಿಂಧ, ಓಡಿಸಾ, ತೊದಲಾದವರು ಕಳಿಸಿದಂತೆ ಕರ್ನಾಟಕವೂ ಒಂದು ವಿಜ್ಞಾಪನ ಪತ್ರಿಕೆಯನ್ನು ಮೊಂಟೇಗೊ ಸಾಹೇಬರಿಗೆ ಕಳಿಸುವ ವ್ಯವಸ್ಥೆಯನ್ನು ಕಡವಾಡಕರಾಯರು ಮಾಡಿದರು. ಮುಂದೆ ಧಾರವಾಡದಲ್ಲಿ ೧೯೧೭ ರಲ್ಲಿ ಪ್ರಚಂಡವಾದ ಪರಿಷತ್ತಿನ ಯೋಜನೆಯನ್ನು ಮಾಡಿದರು. ಇದರ ಅಧ್ಯಕ್ಷರಾಗಿದ್ದ ಸರ ವಿ. ಪಿ. ಮಾಧವರಾಯರು ಕನ್ನಡಿಗರ ಆಗಿನ ಉತ್ಸಾಹವನ್ನು ಕಂಡು ಇದೊಂದು ಪ್ರತಿಕಾಂಗ್ರೆಸ್ಸೇ ಆಗಿದೆಯೆಂದು ಉದ್ಗಾರವನ್ನು ತೆಗೆದರು!

ಹೀಗೆ ೧೯೧೭ ರಲ್ಲಿ ಏಕೀಕರಣದ ಒಗ್ಗೆ ಪ್ರಚಂಡವಾದ ವಾತಾವರಣವನ್ನುಂಟುಮಾಡಲು, ಕಡಪಾ ರಾಘವೇಂದ್ರರಾಯರೇ ಮುಖ್ಯಕಾರಣರು ಈ ಪರಿಸ್ಥಿತಿಯ ನಂತರದಲ್ಲಿ ಏಕೀಕರಣದ ಒಗ್ಗೆ ಅಲ್ಲಿಲ್ಲಿ ವ್ಯಾಖ್ಯಾನಗಳೂ ನಡೆದವು. ಅಷ್ಟರಲ್ಲಿ ನಾಗಪುರ ಕಾಂಗ್ರೆಸ್ಸಿನ ಮಹಾಪರ್ವಣಿಯು ನಿರ್ಣಾದವು ರಾಷ್ಟ್ರದಲ್ಲೆಲ್ಲ ಹುಟ್ಟಿಸಿ. ಭಾಷಾನ್ವಯ ಪ್ರಾಂತರಚನೆಯ ತತ್ವಕ್ಕನುಗುಣವಾಗಿ ಕಾಂಗ್ರೆಸ್ಸಿಂದ ಎಲ್ಲ ಪ್ರಾಂತಗಳಿಗೂ ಪ್ರತ್ಯೇಕ ಪ್ರಾಂತಿಕ ಕಾಂಗ್ರೆಸ್ಸ ಕಮಿಟಿಗಳು ಹೊರೆಯತಕ್ಕ ವಿಷಯವು ನಾಗಪುರ ಕಾಂಗ್ರೆಸ್ಸದಲ್ಲಿ ಹೊಂದಿಕೊಳ್ಳದ್ದಿದುದರಿಂದ ಕಡಪಾ ರಾಘವೇಂದ್ರರಾಯರು ಕರ್ನಾಟಕಸ್ಥೆಲ್ಲ ಸುತ್ತಿ ಏಕೀಕರಣದ ಒಗ್ಗೆ ಕನ್ನಡಿಗರನ್ನು ಜಾಗ್ರತಗೊಳಿಸಿ, ನಾಗಪುರ ಕಾಂಗ್ರೆಸ್ಸಕ್ಕೂ ಕನ್ನಡಿಗರು ಕಂಡಕಂಡವಾಗಿ ಹೊಗವ ಅವಶ್ಯಕತೆಯನ್ನು ಕನ್ನಡಿಗರಿಗೆ ಹೇಳಿದರು, ಬೆಳಗಾಮ ಜಿಲ್ಲೆಯ ಮುಖಂಡರು ವಿಶೇಷತಃ ದೇಶಭಾಂಧವರಾಗಿದ್ದ ಗಂಗಾಧರರಾಯರು ಈ ಏಕೀಕರಣದ ಕಾರ್ಯಕ್ಕೆ ತಮ್ಮ ಬೆಂಬಲವನ್ನು ಕೊಡುವರೋ ಇಲ್ಲವೋ ಎಂಬ ಒಗ್ಗೆ ಶ್ರೀ. ಕಡಪಾರಾಯರಲ್ಲಿ ಸಂಶಯ ವಿದ್ದಿತು ಹಾಗೆಯೇ ಧಾರವಾಡದ ಶ್ರೀ. ಕೌಜಲಗಿ ಶ್ರೀನಿವಾಸರಾಯರು ಯಾವಧೋನಿಧಾನವನ್ನು ಸ್ವೀಕರಿಸುವರೆಂಬುದೂ ಸ್ಪಷ್ಟವಾಗಿ ತಿಳಿಯದಾಗಿತ್ತು. ಆದರೆ ಇದು ಕೇವಲ ಕರ್ನಾಟಕ ಪ್ರಾಂತದ ಪ್ರಶ್ನೆಯಾಗಿದೆಧರಣಮಂಡಲದ ಎಲ್ಲ ಭಾಗಗಳ ದೇಶಭಾಷೆಗಳಿಗೂ ಸ್ವತಂತ್ರ ಕಮೀಟಿಗಳು ದೊರೆಯಬೇಕೆಂಬನಿರ್ಣಯವೇ ನಾಗಪುರದ ಕಾಂಗ್ರೆಸ್ಸದಲ್ಲಿದ್ದರಿಂದ ಲೂಮಹಾತ್ಮಾ ಗಾಂಧಿಯವರೇ ಆದರವುಸ್ಕೃತ್ಯಗಳಾದ್ದರಿಂದಲೂ ಅನ್ನು ವಿಚಾರ ಸಂಶಯಗಳಿಗೆ ಅಸ್ಪದವಿರಲಿಲ್ಲ. ಎಲ್ಲ ಪ್ರಾಂತಗಳಂತೆ ಕರ್ನಾಟಕಕ್ಕೂ ಸ್ವತಂತ್ರ ಪ್ರಾಂತವು ದೊರೆಯಿತು. ಇಲ್ಲಿಂದ ಕರ್ನಾಟಕದ ಹೆಸರಿನ ಭರಾಟೆಯಿಂದಲ್ಲಿ ಕೇಳಬರಹತ್ತಿತು ಆದರೆ ಅಸಹಕಾರ ಚಳುವಳಿಯು ರಾಷ್ಟ್ರದಲ್ಲಿ ಭಿಕರ ರೂಪದಿಂದ ನೆಲೆಗೊಂಡದ್ದರಿಂದ, ಏಕೀಕರಣದ ವಿಚಾರವು ಕೊಂಚ ಹಿಂದಕ್ಕೆ ಬಿದ್ದಿತು ಅಸಹಕಾರ ಚಳುವಳಿಯು ನಿಲ್ಲಿಸಲ್ಪಟ್ಟ ಮೇಲೆ ಮತ್ತೆ ಏಕೀಕರಣದ ಚಳುವಳಿಯನ್ನು ಸಾಗಿಸಬೇಕೆಂದು ವಿಚಾರಿಸಿ. ಬೆಳಗಾಮ ಕಾಂಗ್ರೆಸ್ಸಿನ ಸಮಯದಲ್ಲಿ ೧೯೨೪ ನೇ ಡಿಸೆಂಬರ್‌ನಲ್ಲಿ ಕರ್ನಾಟಕ ಏಕೀಕರಣ ಸಭೆಯು ಸ್ಥಾಪಿಸಲ್ಪಟ್ಟಿತು. ಈ ಸಭೆಯನ್ನು ಸ್ಥಾಪಿಸುವಾಗ್ಗೆ ಕರ್ನಾಟಕದ ಪ್ರತಿಯೊಂದು ಜಿಲ್ಲೆಯ ಪ್ರತಿನಿಧಿಗಳು ಒಳ್ಳೆಯ ಉತ್ಸಾಹದಿಂದ ಅಲ್ಲಿಗೆ ಬಂದಿದ್ದರು. ಅದಿನದ ಕನ್ನಡಿಗರ ಉತ್ಸಾಹವು ಅವರ್ಣನೀಯವಾಗಿದ್ದಿತು ಕಾಂಗ್ರೆಸ್ಸಿನ ಗಾಯನಶಾಲೆಯ ಮಂಟಪವು ಹಿಡಿಸಲಾರದ ಜನರು ಕಿಕ್ಕಿರಿದು ನೆರೆದಿದ್ದರಿಂದ, ಮಂಡಪದ ಹೊರಗೆ ಮತ್ತೊಂದು ಸಭೆಯನ್ನು ಸಿದ್ಧಗೊಳಿಸಿ, ಅಲ್ಲಿ ವ್ಯಾಖ್ಯಾನಗಳ ವ್ಯವಸ್ಥೆಯು ಸಹ ಮಾಡುವ ಪ್ರಸಂಗವು ಒದಗಿತ್ತು.

ಇಷ್ಟೊಂದು ಉತ್ಸಾಹದಿಂದ ಸ್ಥಾಪಿತವಾದ ಕರ್ನಾಟಕ ಏಕೀಕರಣ ಕಾರ್ಯಕ್ಕೆ ೩ ವರ್ಷಗಳ ವರೆಗೆ ತೊಂಚನಡೆದು, ಆ ಮೇಲೆ ಸಭೆಗೆ ನಿದ್ರಿತಗಲಿ ಏಕೀಕರಣ ಕಾರ್ಯವೇ ನಾಗದಂತಾಯಿತು. ಹೆಸರಿಗೆ ಮಾತ್ರ ಸಭೆಯುಳಿಗೂ ಅಸ್ತತ್ವದಲ್ಲಿದೆ ಆದರೆ ಕಾರ್ಯವೇನೂ ಜರಿಗಿಲ್ಲ ಈ ಅವಧಿಯಲ್ಲಿ ಪ್ರಾಂತಿಕ ಕಾಂಗ್ರೆಸ ಕಮೀಟಿಯವರೇ ನಾನಿರಾರು ರೂಪಾಯಿ ಹಣ ವೆಚ್ಚಮಾಡಿ ಒಳ್ಳಾರಿಯನ್ನ ಆಂಧ್ರವಿಶ್ವವಿದ್ಯಾಲಯಕ್ಕೆ ಸೇರಿಸಬಾರದೆಂಬ ಜಳವಳಿಯಲ್ಲಿ ಪ್ರಮುಖ ಭಾಗವನ್ನು ತೆಗೆದ ಕೊಂಡರು. ಆದರೆ ಆಂಧ್ರತಮಿಳರ ಪಾದಲ್ಲಿ ಕರ್ನಾಟಕದ ಭಾಗಗಳನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಎಕ್ಕೆ ತೆಗೆಸುಕೊಳ್ಳುವದು ಅತ್ಯಾವಶ್ಯಕವಾಗಿದ್ದರೂ, ಅತ್ತಕಡೆಗೆ ಪ್ರಾಂತಿಕ ಕಾಂಗ್ರೆಸ್ಸ ಕಮಿಟಿಯು ಲಕ್ಷವು ಹೊಗದಿರುವುದು ದುಃಖದ ವಿಷಯವು

ಮುಂದುವರಿಯುವದು.

ಕರ್ನಾಟಕ ಪ್ರಾಂತರಚನೆ.

ದಿಲ್ಲಿಯಲ್ಲಿ ಎಲ್ಲ ಪಕ್ಷಗಳ ಧುರೀಣರು ಒಟ್ಟುಗೂಡಿ ಸ್ವರಾಜ್ಯ ಸರಕಾರದ ರಚನೆಯನ್ನು ಜಯಪ್ರದಮಾಡುವ ಸಮಯದಲ್ಲಿಯೇ ಕರ್ನಾಟಕವು ಈ ಸಮಸ್ಯೆಯನ್ನು ಅದರೆದುರು ತಂದುದು ಜೆನ್ನಾಯಿತು. ಕರ್ನಾಟಕ ಪ್ರಾಂತರಚನೆಗೆ ೧೯೧೭ ರಿಂದ ಆಂರಭವಾದ ಚಳವಳಿಯ ಇತಿಹಾಸವು ನಿವೇದಿಸಲ್ಪಟ್ಟಂತೆ ತೋರುತ್ತಿದೆ ೧೯೧೮ ರಲ್ಲಿ ಕರ್ನಾಟಕ ಸಭೆಯು ಸ್ಥಾಪಿಸಲ್ಪಟ್ಟು ೧೯೨೦ ರಲ್ಲಿ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತೂ ಕೂಡಿ, ಅದೇ ವರ್ಷದ ಕಾಂಗ್ರೆಸ್ಸಿನಲ್ಲಿ ನಾಗಪುರದಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾತಿನಿಧ್ಯವು ಕೊಡಲ್ಪಟ್ಟಿತು. ಅಂದಿನೀದ ಕರ್ನಾಟಕ ಏಕೀಕರಣಕ್ಕಾಗಿ ಬಹಳವಾಗಿ ಪ್ರಯತ್ನಗಳು ನಡೆಯುತ್ತಲೇ ಇವೆ ಭಾಷೆಗಳಲ್ಲಿ ಕರ್ನಾಟಕವು ಹೊಂದಿದಷ್ಟು ಅನ್ಯಾಯವು ಬೇರೆ ಯಾವ ಪ್ರಕೃತ ಉಜ್ಜೀವಿತವಾಗಿರುವ ಭಾಷೆಯೂ ಹೊಂದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಅಂಧ್ರಕ್ಕೆ ಪ್ರತ್ಯೇಕ ಪ್ರಾಂತವಿಲ್ಲದಿದ್ದರೂ ಈ ತ

ದಿದೆ. ಸ್ಟೇಶನ್ನಿದಾರಿಯಲ್ಲಿ ಗಿರಣಿಗಳಿದ್ದರಿಂದ ಊರು ದೊಡ್ಡದಿದ್ದಂತೆ ಕಾಣಬಹುದು. ಆದರೆ ಅದೇನು ಜನವಸತಿಯು ಲೆಕ್ಕಕ್ಕೆ ಉಪಯೋಗವಾಗತಕ್ಕದ್ದಲ್ಲ. ಇನ್ನು ಖಾನೇಸುಮಾರಿಯ ಲೆಕ್ಕದಿಂದ ನೋಡಿದರೂ, ಬಾಗಲಕೋಟೆಯು ಜನಸಂಖ್ಯೆಯು ಬೆಳೆದಿಲ್ಲವೆಂಬುದು ತಾನೇ ತಿಳಿದು ಬರುವದು ಪಟ್ಟಣದ ಬೆಳವಣಿಗೆಯು ಇತಿಹಾಸವು ಹೀಗಿದ್ದರೂ, ಬಾಗಲಕೋಟೆಯು ಬೆಳೆಯುವವೆಂದು ಲೆಕ್ಕಮಾಡಿದ್ದ ಅಲಮಟ್ಟಿ ಜಂಗಮರ ಲೆಕ್ಕವೆಂದೇ ಹೇಳಬೇಕಾಗುವದು. ಏನೋ ಯುದ್ಧದಲ್ಲಿ ವ್ಯಾಪಾರಕ್ಕೆ ಕೊಂಚ ಕಳೆಯೇರಿತಂತೆ! ಕೂಡಲೇ ಮುನಸೀಪಾಲ್ಟಿಯ ತಲೆತಿರುಕತನಕ್ಕೆ ಕಳೆಯೇರಬೇಕೆ? ಈಗಿದ್ದ ಊರ ಕ್ಷೇತ್ರ ಫಲದ ೩/೪ ಪಟ್ಟಿನಷ್ಟು ವಿಸ್ತೀರ್ಣವಾದ ಪ್ರದೇಶವು ನಗರದ ರಚನೆಗಾಗಿ ಕಾವಿಡಲ್ಪಟ್ಟಿದೆ. ಇಂಥ ವಿಶಾಲವಾದ ಪ್ರದೇಶಕ್ಕೆ ಜನವಸತಿ ಎಲ್ಲಿಂದ ಬರಬೇಕು? ಭವಿಷ್ಯಜನ ಮಾಯೂ ಬಾರುವಾರದಂತೆ ಮುನಸೀಪಾಲ್ಟಿಯವರೂ 'ಕಾಟನ್ ಮಾರ್ಕೇಟ್'ಗಾಗಿ ಮಾಡಿದ ಬಹುದಾರದ ಕಲ್ಪನೆಯನ್ನೇ ಯೂಕಾದ್ಭಲದಲ್ಲಿ ತಳೆದಿದ್ದರೆಂದು ಹೇಳಬಹುದು. ಅಂತೆಯೇ ಮಾಯೆಯಿಂದ ನಿರ್ಮಿತವಾದ ಕಲ್ಪನೆಗಳೆಲ್ಲ ಈಗ್ಗೆ ಬಯಲಾಗಿವೆ ಹೀಗೆ ಬಯಲಾದ ಸ್ಥಿತಿಯಲ್ಲಿ ಸಹ ನಗರ ರಚನೆಯ ಹವ್ಯಾಸಕ್ಕೆ ಮುನಸೀಪಾಲ್ಟಿಯವರು ಬೀಳುತ್ತಿರುವದು ಸರ್ವಥಾ ಯೋಗ್ಯವಲ್ಲ. ಈಗಲಾದರೂ ತಪ್ಪು ತಮ್ಮ ಕಲ್ಪನೆಗಳ ಬಗ್ಗೆ ಸರಕಾರಕ್ಕೆ ಸ್ಪಷ್ಟವಾಗಿ ವರದಿ ಈ ಯೋಜನೆಯನ್ನು ರದ್ದು ಪಡಿಸಿ, ಬಾಗಲಕೋಟೆಯಂಥ ಸಣ್ಣ ನಗರಕ್ಕೆ ಸಾಮ್ಯವಾದ ನಗರ ರಚನೆಯನ್ನು ಮಾಡಿಕೊಳ್ಳಬೇಕು. ಇತ್ತ ಸರಕಾರಕ್ಕಾದರೂ ನಮ್ಮದೊಂದು ಸೂಚನೆಯಿದೆ ಮುನಸೀಪಾಲ್ಟಿಯವರು ಈಗ್ಗೆ ಎಬ್ಬಿಸಿದ ಸಾಲಕ್ಕೆ ಸರಕಾರದವರು ಸಮ್ಮತಿಸಬಾರದು. ಸಮರ್ಪಕವಾದ ನಗರ ರಚನೆಯ ವಿಚಾರವಾಗಿ ಮುನಸೀಪಾಲ್ಟಿಯ ತಲೆಯಮೇಲೆ ಹೊರಲಾರದಂಥ ಸಾಲದ ಭಾರವನ್ನು ಹೇರುವದು ಎಂದಿಗೂ ನ್ಯಾಯಪ್ರದವಾಗಲಾರದು,

ಬಳ್ಳಾರಿಯ ವಾತಾವರಣದಲ್ಲಿ ಮತ್ತೆ ಆಂಧ್ರ-ಕರ್ನಾಟಕದ ಕ್ಷೋಭೆಯು ಪ್ರಖರವಾಗಿ ಎದ್ದಿದೆ. ಆಂಧ್ರ ವಿಶ್ವವಿದ್ಯಾಲಯದಲ್ಲಿ ಅನ್ಯಾಯವಾಗಿ ಸೇರಿಸಿದ ಬಳ್ಳಾರಿಯನ್ನು ಹೊರಪಡಿಸಬೇಕೆಂದು ಒಂದು ಉಪಸೂಚನೆಯನ್ನು ಶ್ರೀ ನಾಗನ ಗೌಡರು ಮದ್ರಾಸ ಕೌನ್ಸಿಲದಲ್ಲಿ ತರತಕ್ಕವರಿದ್ದಾರೆ. ಆದರೆ ಇದಕ್ಕೆ ಆಂಧ್ರರು ವಿರೋಧಿಸಲು ಅತ್ಯಂತ ಅತುರರಾಗಿ ಕುಳಿತಿದ್ದಾರೆ ಯಾವ ಭಾಷಾನ್ವಯ ಪ್ರಾಂತರಚನೆಯು ತತ್ವದಮೇಲೆ ತಮಗೆ ಪ್ರತ್ಯೇಕ ಪ್ರಾಂತವು ಬೇಕೆಂದು ಆಂಧ್ರರು ಈಗ್ಗೆ ೧೫-೨೦ ವರ್ಷಗಳಿಂದ ಚಳವಳಿ ಮಾಡುತ್ತಿರುವರೋ ಅದೇ ತತ್ವವನ್ನು ಕನ್ನಡಿಗರಿಗೆ ಸಂಬಂಧಪಟ್ಟಾಗ್ಗೆ ಅಲ್ಲಗಳೆಯುತ್ತಿರುವದು ಅನ್ಯಾಯದ ಪರಮಾವಧಿಯೆಂದು ಸ್ಪಷ್ಟವಾಗಿ ಹೇಳಬಹುದು. ಯಾವ ತತ್ವಗಳನ್ನು ಮನ್ನಿಸದೆ ಸ್ವಾರ್ಥದೃಷ್ಟಿಯಿಂದ ಪ್ರೇರಿತರಾಗಿ, ನೆರೆಹೊರೆಯು ತಮ್ಮ ಬಂಧುಗಳ ಹರಾತ್ಮಾಗಿ ಅನ್ಯಾಯವನ್ನುಂಟುಮಾಡುವದು ಸರ್ವಥಾ ಸಮಂಜಸವಲ್ಲ. ರಾಷ್ಟ್ರೀಯದೃಷ್ಟಿಯಿಂದಲಂತೂ ಆಂಧ್ರರ ಈ ಕೃತಿಯು ಅತ್ಯಂತ ಹೇಯವಾದುದೆಂಬದನ್ನು ಯಾವ ಸಮಂಜಸ ಮನುಷ್ಯನಾದರೂ ಹೇಳಬಲ್ಲನು. ಆದರೂ ರಾಷ್ಟ್ರೀಯ ಚಳವಳಿದಲ್ಲಿ ಪ್ರಖ್ಯಾತಿಯನ್ನು ಪಡೆದ ಆಂಧ್ರರ ಜನಾಂಗವು ಈಪ್ಪೊಂದು ದುರಾಗ್ರಹವನ್ನು ಕನ್ನಡಿಗರ ವಿಷಯವಾಗಿ ಹಿಡಿದುದನ್ನು ಕಂಡು ನಮಗೆ ಆಂಧ್ರರ ವಿಷಯದಲ್ಲಿ ಅತ್ಯಂತ ಕನಿಕರ ಉಂಟಾಗುತ್ತದೆ. ಯಾಕಂದರೆ ತಮ್ಮ ಈ ಕೃತಿಯಿಂದ ಆಂಧ್ರರು ತಮ್ಮ

ಕನ್ನಡ ವಾಙ್ಮಯ ಸಮ್ರಾಟರಾದ

ವೈ. ಕೆರೂರ ವಾಸುದೇವಾಚಾರ್ಯರ

ಎಲ್ಲ ಭಕ್ತರಲ್ಲಿ ಬಿನ್ನಹ

ಈ ಆಚಾರ್ಯವರ್ಯರ 'ಪತಿವಶೀಕರಣ' ನಾಟಕವನ್ನಾತೀ ರವಿವಾರ ೪ ನೇ ಮಾರ್ಚ ತಾ॥ ಸಜ್ಜೆ ಬಾಗಲಕೋಟೆಯ ಶಿವಾನಂದ ನಾಟಕಶಾಲೆಯಲ್ಲಿ ಪ್ರಯೋಗಿಸಲ್ಪಡುವದು. ಆಚಾರ್ಯರಲ್ಲಿ ಪ್ರೇಮ ಭಕ್ತಿಗಳುಳ್ಳ ಪ್ರಜ್ಞಾಳ ಪರಜ್ಞಾಳ ಗಳೆಲ್ಲಿಯ ಕನ್ನಡಿಗರು ಆ ದಿನ ಅವಶ್ಯವಾಗಿ ಬಂದು, ಕನ್ನಡ ವಾಙ್ಮಯ ಸಮ್ರಾಟರ ಈ ಕೊನೆಯವಾದ ಅಪ್ರತಿಮ ಕೃತಿಯಲ್ಲಿಯ ಸವಿಯನ್ನು ಸವಿದು ಆನಂದ ಹೊಂದಬೇಕಾಗಿ ಬಿನ್ನಹವಿದೆ.

ತಾ॥ ೨೪-೩-೩೮ ಸನ್ಮಾನಿತ ಕಾರ್ಯದರ್ಶಿ
ಶ್ರೀ ವಾಸುದೇವ ಆಯ್ ಜೂರ
ನಾಟಕ ಸಭೆ ಬಾಗಲಕೋಟೆ.

'ಕನ್ನಡಿಗ' ನು ತಡವಾದುದೇಕೆ?

ಈಗ್ಗೆ ೩/೪ ಳ ವಾರಗಳಿಂದ 'ಕನ್ನಡಿಗ' ನು ಸಕಾಲದಲ್ಲಿ ಹೊರಡದೇ ೨/೩ ದಿನ ತಡವಾಗಿಯೇ ಜನರ ಕೈ ಸೇರುತ್ತಿರುವದಕ್ಕೆ? ಇದಕ್ಕೆ ಅನೇಕ ಕಾರಣಗಳಿದ್ದರೂ ಎಲ್ಲವನ್ನು ಸಾಜಕರಿಗೆ ನಿವೇದಿಸಿ, ಅವರನ್ನು ಬೇಸರಗೊಳಿಸಲು ನಾವು ಇಚ್ಛಿಸುವದಿಲ್ಲವಾದರೂ, ಕಂಪೋಜಟರ ಬೇನೆ ಬೇಸರಿಕೆ ಹಾಗೂ ಯಂತ್ರಗಳು ಅಕಸ್ಮಾತ್ತಾಗಿ ಕೆಟ್ಟದ್ದು, ಇವೇ ಮುಖ್ಯವಾದ ಕಾರಣಗಳೆಂಬದನ್ನು ತಿಳಿಸದಿರಲಾರೆವು. ಮುಂದಿನ ಸಂಚಿಕೆಯಿಂದ ಮೊದಲಿನಂತೆ ಮತ್ತೆ ಸಕಾಲದಲ್ಲಿ 'ಕನ್ನಡಿಗ' ನು ಹೊರಡುವನೆಂದು ಆಶ್ವಾಸನೆ ಕೊಡುವೆವು.

ವ್ಯವಸ್ಥಾಪಕರು

ಹೆಸರನ್ನು ಕೆಡಿಸಿಕೊಳ್ಳುವರು. ಕನ್ನಡಿಗರ ಕಡೆಗೆ ನ್ಯಾಯದೇವತೆಯು ಇರುವದರಿಂದ ಈ ದಿನವಿರದಿದ್ದರೂ ನಾಳೆಯಾದರೂ ಕನ್ನಡಿಗರ ಧ್ವಜಪತಾಕೆಯು ಬಳ್ಳಾರಿಯಲ್ಲಿ ಜಯದಿಂದ ಮೆರೆದೇ ಮೆರೆಯುವದು. ಆದ್ದರಿಂದ ಆಂಧ್ರಬಂಧುಗಳು ಈಗಲಾದರೂ ಕಣ್ತೆರೆದು ನ್ಯಾಯದ ಮಾರ್ಗವನ್ನೇ ಅನುಸರಿಸಬೇಕೆಂದು ಅಗ್ರಹಪಡುತ್ತೇವೆ. ಇನ್ನು, ನಮ್ಮ ಕನ್ನಡಿಗರಿಗೊಂದು ಸೂಚನೆ. ಕನ್ನಡಿಗರ ದೌರ್ಬಲ್ಯವು ಎಂಥ ರಸಾತಳಕ್ಕೆ ಮುಟ್ಟಿರುವದನ್ನು ಕನ್ನಡಿಗರೆಲ್ಲ ತಿಳಿದು ಕೊಳ್ಳಬೇಕು. ಎತ್ತನೋಡಿದತ್ತ ನಿರಾಶೆಯೇ ಕನ್ನಡಿಗರಿಗೆ ಗಂಟುಬಿದ್ದಿದೆ. ಬಳ್ಳಾರಿ- ಅನಂತಪುರಗಳಲ್ಲಿ ಆಂಧ್ರರ ಜಲ್ಲಾಟ! ಸೇಲಂ, ಕೊಯಿಮುತ್ತೂರ ನೀಲಗಿರಿಗಳಲ್ಲಿ ಕನ್ನಡಿಗರನ್ನ ತಮಿಳರು ಮೂಲೆಗೊತ್ತಿ ಬಿಟ್ಟಿದ್ದಾರೆ, ಸೊಲ್ಲಾಪುರ, ಸಾತಾರೆ ಬೆಳಗಾವಿಗಳಲ್ಲಿ ಮರಾಠರು ಕನ್ನಡಿಗರನ್ನು ಒಂದೇಸವನೇ ಒತ್ತಿ ಒತ್ತಿ ಕೆಳಕ್ಕೆ ದಬ್ಬುತ್ತಲಿದ್ದಾರೆ ಇಂತಿಷ್ಟು ದುರ್ದಶೆಯನ್ನು ಎಲ್ಲ ಕಡೆಗೂ ನಾವು ಕಣ್ಣಾರೆ ಕಾಣುತ್ತಿರುವಾದರೂ, ನಮ್ಮ ಕಾರ್ಯವನ್ನು ಸುಸಂಘಟಿತವಾಗಿ ಸಾಗಿಸುವ ಜಿಗಟು, ಉತ್ಸಾಹ ಕಾರ್ಯತತ್ಪರತೆಗಳು ನಮ್ಮಲ್ಲಿಲ್ಲ! ನಮ್ಮಲ್ಲಿ ಏಕೀಕರಣದ ಬಗ್ಗೆ ಏಕವಾಕ್ಯತೆಯಿದ್ದರೂ ಈ ಪರಿಹರವು ನಮ್ಮಪಾಲಿಗೆ ಬಂದಿದೆಯೆಂದಮೇಲೆ ನಮ್ಮ ಸಾಧನೆಯ ತಮವಾದ ದೌರ್ಬಲ್ಯವನ್ನು ನಾವು ಎಷ್ಟುಹಳಿದರೂ ಕಡಿಮೆಯೇ ಇದೆ.

ಕರ್ನಾಟಕದ
ಏಕೀಕರಣವು

(ಕಳೆದ ಸಂಚಿಕೆಯಿಂದ ಮುಂದುವರಿದಿದ್ದು)

ಆಂಧ್ರರ ಜಳವಳವನ್ನು ಪರೀಕ್ಷಿಸುವದಕ್ಕಾಗಿ ಅವರ ವಾರ್ಷಿಕ ಪರಿಷತ್ತಿಗೆ ನೈ. ಕಡಪಾ ರಾಘವೇಂದ್ರರಾಯರಿಂದಿಗೆ ಶ್ರೀ. ಅಲೂರ ವೆಂಕಟರಾಯರು ಸರಗುಂದ ರಾಮರಾಯರು, ಇವರೇ ಮೊದಲಾದ ಅವರ ಮಿತ್ರರು ಹೋಗಿ ಬಂದರು ಆಮೇಲೆ ಈ ಜಳವಳವನ್ನು ಕರ್ನಾಟಕದಲ್ಲಿಯೂ ಪ್ರಾರಂಭ ಮಾಡಿದರು. "ಕರ್ನಾಟಕ ಸಭೆ" ಯೆಂಬ ಸಂಸ್ಥೆಯೊಂದು ಕೇವಲ ಏಕೀಕರಣದ ಪ್ರಚಾರಕ್ಕಾಗಿಯೇ ಗದಗ ದಲ್ಲಿ ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟಿತು. ಈ ಸಭೆಯ ಮುಖಂಡತ್ವವನ್ನು ನೈ ಕಡಪಾರಾಯರು ಸ್ವತಃ ತಾವೇ ವಹಿಸಿ, ಬಲು ಉತ್ಸಾಹದಿಂದ ಈ ಕೆಲಸವನ್ನು ಮಾಡಿತೋರಿಸಿದರು. ಕರ್ನಾಟಕದ ಪ್ರಮುಖ ಭಾಗಗಳಲ್ಲಿ ಅವರು ವ್ಯಾಖ್ಯಾನಗಳನ್ನು ಕೊಟ್ಟಬಂದರು. ಕರ್ನಾಟಕದ ಎಲ್ಲ ಜಾತೀಯ ಮುಖಂಡರನ್ನು ಸಂದರ್ಶಿಸಿ,ಈ ಬಗ್ಗೆಅವರ ಸಹಾನುಭೂತಿಯನ್ನು ಸಂಪಾದಿಸಿದರು. ಮೊಂಟೇಗೊ ಸಾಹೇಬರು ಹೊಸ ಸುಧಾರಣೆಯ ಯೋಜನೆಗಾಗಿ ಹಿಂದುಸ್ಥಾನಕ್ಕೆ ಬಂದಾಗ್ಯೆ, ಭಾಷಾನ್ವಯ ಪ್ರಾಂತರಚನೆಯ ಬಗ್ಗೆ ಆಂಧ್ರ, ಸೀಧ, ಓಡಿಸಾ, ಮೊದಲಾದವರು ಕಳಿಸಿದಂತೆ ಕರ್ನಾಟಕವೂ ಒಂದು ವಿನ್ನಹ ಪತ್ರಿಕೆಯನ್ನು ಮೋಟಗೊ ಸಾಹೇಬರಿಗೆ ಕಳಿಸುವ ವ್ಯವಸ್ಥೆಯನ್ನು ಕಡಪಾರಾಯರು ಮಾಡಿದರು. ಮುಂದೆ ಧಾರವಾಡದಲ್ಲಿ ೧೯೨೦ ರಲ್ಲಿ ಪ್ರಚಂಡವಾದ ಪರಿಷತ್ತಿನ ಯೋಜನೆಯನ್ನು ಮಾಡಿದರು. ಇದರ ಅಧ್ಯಕ್ಷರಾಗಿದ್ದ ಸರ ಸಿ. ಪಿ. ಮಾಧವರಾಯರು ಕನ್ನಡಿಗರ ಬಗೆಗಿನ ಉತ್ಸಾಹವನ್ನು ಕಂಡು ಇದೊಂದು ಪ್ರತಿಕಾಂಗ್ರೆಸ್ಸೇ ತಾಡಿಯೆಂದ ಉದ್ಗಾರವನ್ನು ತೆಗೆದರು!

ಹೀಗೆ ೧೯೨೦ ರಲ್ಲಿಏಕೀಕರಣದಬಗ್ಗೆ ಪ್ರಚಂಡವಾದ ವಾತಾವರಣವನ್ನುಂಟುಮಾಡಲು, ಕಡಪಾ ರಾಘವೇಂದ್ರ ರಾಯರೇ ಮುಖ್ಯಕಾರಣರು ಈ ಪರಿಷತ್ತಿನ ನಂತರದಲ್ಲಿ ಏಕೀಕರಣದ ಒಗ್ಗೆ ಅಲ್ಲಿಲ್ಲಿ ವ್ಯಾಖ್ಯಾನಗಳೂ ನಡೆದವು. ಅಷ್ಟರಲ್ಲಿ ನಾಗಪುರ ಕಾಂಗ್ರೆಸ್ಸಿನ ಮಹಾಪರ್ವಣಿಯು ನಿನಾದವು ರಾಷ್ಟ್ರದಲ್ಲೆಲ್ಲ ಹಬ್ಬಿತು. ಭಾಷಾನ್ವಯ ಪ್ರಾಂತರಚನೆಯ ತತ್ವಕ್ಕನುಗುಣವಾಗಿ ಕಾಂಗ್ರೆಸ್ಸಿನಿಂದ ಎಲ್ಲ ಪ್ರಾಂತಗಳಿಗೂ ಪ್ರತ್ಯೇಕ ಪ್ರಾಂತಿಕ ಕಾಂಗ್ರೆಸ್ಸ ಕಮಿಟಿಗಳು ದೊರೆಯತಕ್ಕ ವಿಷಯವು ನಾಗಪುರ ಕಾಂಗ್ರೆಸ್ಸದಲ್ಲಿ ಹೊಂಡಲಕ್ಕದ್ದಿದುದರಿಂದ ಕಡಪಾ ರಾಘವೇಂದ್ರರಾಯರು ಕರ್ನಾಟಕವನ್ನೆಲ್ಲ ಸುತ್ತಿ ಏಕೀಕರಣದ ಬಗ್ಗೆ ಕನ್ನಡಿಗರನ್ನು ಜಾಗ್ರತಗೊಳಿಸಿ, ನಾಗಪುರ ಕಾಂಗ್ರೆಸ್ಸಕ್ಕೆ ಕನ್ನಡಿಗರು ಕಂಡಕಂಡವರಾಗಿ ಹೊಗಪ ಅವಶ್ಯಕತೆಯನ್ನು ಕನ್ನಡಿಗರಿಗೆ ಬೆಳಿಸಿದರು. ಬೆಳಗಾಮ ಜಿಲ್ಲೆಯ ಮುಖಂಡರು ವಿಶೇಷತಃ ಶ್ರೀ ದೇಶಪಾಂಡೆ ಗಂಗಾಧರರಾಯರು ಈ ಏಕೀಕರಣದ ಕಾರ್ಯಕ್ಕೆ ತಮ್ಮ ಬೆಂಬಲವನ್ನು ಕೊಡುವರೋ ಇಲ್ಲವೋ ಎಂಬ ಒಗ್ಗೆ ಶ್ರೀ. ಕಡಪಾರಾಯರಲ್ಲಿ ಸಂಶಯ ವಿದ್ದಿತು ಹಾಗೆಯೇ ಧಾರವಾಡದ ಶ್ರೀ. ಕೌಜಲಗಿ ಶ್ರೀನಿವಾಸರಾಯರು ಯಾವಧೋರಣವನ್ನು ಸ್ವೀಕರಿಸುವರೆಂಬುದೂ ಸ್ಪಷ್ಟವಾಗಿ ತಿಳಿಯದಾಗಿತ್ತು. ಆದರೆಇದು ಕೇವಲ ಕರ್ನಾಟಕ ಪ್ರಾಂತದ ಪ್ರಶ್ನೆಯಾಗಿದಧರಿಂದಲೂ ಇದರ ಎಲ್ಲ ಭಾಗಗಳ ದೇಶಭಾಷೆಗಳಿಗೂ ಸ್ವತಂತ್ರ ಕಮಿಟಿಗಳು ದೊರೆಯಬೇಕೆಂಬನಿರ್ಣಯವೇ ನಾಗಪುರದ ಕಾಂಗ್ರೆಸ್ಸದಲ್ಲಿದ್ದರಿಂದ ಲೂ ಮಹಾತ್ಮಾ ಗಾಂಧಿಯವರೇ ಆದರಪುರಸ್ಕೃತರಾಗಿದ್ದರಿಂದಲೂ ಅನ್ನು ವಿಚಾರ ಸಂಶಯಗಳಿಗೆಗೆ ಅಸ್ಪದವಿರಲಿಲ್ಲ. ಎಲ್ಲ ಪ್ರಾಂತಗಳಂತೆ ಕರ್ನಾಟಕಕ್ಕೂ ಸ್ವತಂತ್ರ ಪ್ರಾಂತವು ದೊರೆಯಿತು. ಇಲ್ಲಿಂದ ಕರ್ನಾಟಕದ ಹೆಸರಿನ ಭರಾಟೆ ಮಂಡಲದಲ್ಲಿ ಕೇಳಬರಹತ್ತಿತು ಆದರೆ ಆಗ್ಗೆ ಅಸಹಕಾರ ಮತ್ತು ಅಂಧಾನುಕರಣವು ರಾಷ್ಟ್ರದಲ್ಲಿ ಭಿಕರ ರೂಪದಿಂದ ನೆಲೆಗೊಂಡಿದ್ದರಿಂದ, ಏಕೀಕರಣದ ವಿಚಾರವು ಕೊಂಚ ಹಿಂದಕ್ಕೆ ಬಿದ್ದಿತು ಆಸಹಕಾರ ಜಳವಳಿಯ ಭಂಗವು ಕಡಮೆಯಾದ ಮೇಲೆ ಮತ್ತೆ ಏಕೀಕರಣದ ಜಳವಳಿಯನ್ನು ಸಾಗಿಸಬೇಕೆಂದು ನಿಶ್ಚಯಿಸಿ, ಬೆಳಗಾಮ ಕಾಂಗ್ರೆಸ್ಸಿನ ಸಮಯದಲ್ಲಿ ೧೯೨೪ ನೇ ಡಿಸೆಂಬರ್‌ನಲ್ಲಿ ಕರ್ನಾಟಕ ಏಕೀಕರಣ ಸಭೆಯು ಸ್ಥಾಪಿಸಲ್ಪಟ್ಟಿತು. ಈ ಸಭೆಯನ್ನು ಸ್ಥಾಪಿಸುವಾಗ್ಯೆ ಕರ್ನಾಟಕದ ಪ್ರತಿನಿಧಿಗಳು ಒಳ್ಳೆಯ ಉತ್ಸಾಹದಿಂದ ಅಲ್ಲಿಗೆ ಬಂದಿದ್ದರು. ಅದಿನದ ಕನ್ನಡಿಗರ ಉತ್ಸಾಹವು ಅವರ್ಣನೀಯವಾಗಿದ್ದಿತು ಕಾಂಗ್ರೆಸ್ಸಿನ ಗಾಮಸೇವಾಲಯ ಮಂಟಪವು ಹಿಡಿಸಲಾರದ ಜನರು ಕಿಕ್ಕಿರಿದು ನೆರೆದದ್ದರಿಂದ, ಮಂಡಪದ ಹೊರಗೆ ಮತ್ತೊಂದು ಸಭೆಯನ್ನು ಏರ್ಪಡಿಸಿ, ಅಲ್ಲಿ ವ್ಯಾಖ್ಯಾನಗಳ ವಿವಾರವು ನಮ ಮಾಡುವ ಪ್ರಸಂಗವು ಒದಿತ್ತು.

ಇಷ್ಟೆಯಿಂದು ಉತ್ಸಾಹದಿಂದ ಸ್ಥಾಪಿತವಾದ ಕರ್ನಾಟಕ ಏಕೀಕರಣ ಕಾರ್ಯಕ್ಕಾಗಿ ೩ ವರ್ಷಗಳ ವರೆಗೆ ಕೊಂಚನಡೆದು, ಆ ಮೇಲೆ ಸಭೆಗೆ ನಿದ್ರೆಹಗಲಿ ಏಕೀಕರಣ ಕಾರ್ಯವೇ ನಾಗದಂತಾಯಿತು.ಹೆಸರಿಗೆ ಮಾತ್ರ ಸಭೆಯುಈಗೂ ಅಸ್ತಿತ್ವದಲ್ಲಿದೆ ಆದರೆ ಕಾರ್ಯವೇನೂ ಆಗಿಲ್ಲ. ಈ ಅವಧಿಯಲ್ಲಿ ಪ್ರಾಂತಿಕ ಕಾಂಗ್ರೆಸ ಕಮೀಟಿಯವರೇ ಸಾಮಾನ್ಯರು ದೊಡ್ಡಮಟ್ಟದ ಹಣ ವೆಚ್ಚಮಾಡಿ ಒಳ್ಳಾರಿಯನ್ನು ಆಂಧ್ರವಿಶ್ವವಿದ್ಯಾಲಯಕ್ಕೆ ಸೇರಿಸಬಾರದೆಂಬ ಜಳವಳಿಯನ್ನೆ ಪ್ರಮುಖ ಭಾಗವನ್ನು ತೆಗೆದ ಕೊಂಡರು. ಆದರೆ ಆಂಧ್ರತಮಿಳರ ಪಾದಲ್ಲಿ ಕರ್ನಾಟಕದ ಭಾಗಗಳನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಪಕ್ಕಕ್ಕೆ ತೆಗೆಸುಕೊಳ್ಳುವದು ಅತ್ಯಾವಶ್ಯವಾಗಿದ್ದರೂ, ಅತ್ತಕಡೆಗೆ ಪ್ರಾಂತಿಕ ಕಾಂಗ್ರೆಸ್ಸ ಕಮಿಟಿಯ ಲಕ್ಷ್ಯವ ಹೊಗದಿರುವುದು ಮುಖದ ವಿಷಯವು

ಮುಂದುವರಿಯುವುದು.

ಕರ್ನಾಟಕ ಪ್ರಾಂತರಚನೆ.

ದಿಲ್ಲಿಯಲ್ಲಿ ಎಲ್ಲ ಪಕ್ಷಗಳ ಧುರೀಣರು ಒಟ್ಟುಗೂಡಿ ಸ್ವರಾಜ್ಯ ಸರಕಾರದ ರಚನೆಯನ್ನು ಕಾರ್ಯಾರುಮಾಡುವ ಸಮಯದಲ್ಲಿಯೇ ಕರ್ನಾಟಕವು ಈ ಸಮಸ್ಯೆಯನ್ನು ಅದರಿದುರು ತಂದುದು ಚೆನ್ನಾಯಿತು. ಕರ್ನಾಟಕ ಪ್ರಾಂತರಚನೆಗೆ ೧೯೨೦ ರಿಂದ ಅಂರ ಭವಾದ ಜಳವಳದ ಇತಿಹಾಸವು ನಿವೇದಿಸಲ್ಪಟ್ಟಂತೆ ತೋರುತ್ತಿದೆ ೧೯೨೪ ರಲ್ಲಿ ಕರ್ನಾಟಕ ಸಭೆಯು ಸ್ಥಾಪಿಸಲ್ಪಟ್ಟು ೧೯೨೦ ರಲ್ಲಿ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತು ಕೂಡಿ, ಅದೇ ವರ್ಷದ ಕಾಂಗ್ರೆಸ್ಸಿನಲ್ಲಿ ನಾಗಪುರದಲ್ಲಿ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾತಿನಿಧ್ಯವು ಕೊಡಲ್ಪಟ್ಟಿತು. ಅಂದಿನೀದ ಕರ್ನಾಟಕ ಏಕೀಕರಣಕ್ಕಾಗಿ ಬಹಳವಾಗಿ ಪ್ರಯತ್ನಗಳು ನಡೆಯುತ್ತಲೇ ಇವೆ ಭಾಷೆಗಳಲ್ಲಿ ಕರ್ನಾಟಕವನ್ನು ಹೊಂದಿದಷ್ಟು ಅನ್ಯಾಯವು ಬೇರೆ ಯಾವ ಪ್ರಕೃತ ಉಜ್ಜೀವಿತವಾಗಿರುವ ಭಾಷೆಯೂ ಹೊಂದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಅಂಪ್ರಕ್ಕೆ ಪ್ರತ್ಯೇಕ ಪ್ರಾಂತವಿಲ್ಲದಿದ್ದರೂ ಈ ಕ

ರದ ವಿಭಾಗಗಳು ಆದರಲ್ಲಿಲ್ಲ. ಕೇರಳಕ್ಕೂ ಏಕೀಕರಣಕ್ಕೆ ಸ ವಾನುಕೂಲತೆ ಇದೆ. ಆದರ ಕರ್ನಾಟಕಕ್ಕೆ ರಾಜಕೀಯ ತೊ ಡಕುಗಳು ಬಹಳವಾಗಿವೆ. ಒಂದುಭಾರಿ ಧಾರವಾಡ, ಬೆಳಗಾವ ಬಿಜಾಪೂರ, ಕಾರವಾರ ಜಿಲ್ಲೆಗಳನ್ನು ದಕ್ಷಿಣ ಕನ್ನಡ ಜಿಲ್ಲೆ ಯೊಂದಿಗೂ ಕೂಡಿಸಬಹುದಾದರೂ, ಇವುಗಳಲ್ಲಿ ಒಂದು ಕಡೆ ಯಲ್ಲಿ ಒಳ್ಳಿಂ ಅಸಂತೃಪ್ತರಗಳೊಡನೆಯೂ, ಇನ್ನೊಂದು ಕಡೆಯಲ್ಲಿ ಸೇ೦ಂ, ಕೊಯಮುತ್ತೂರು, ನೀಲಗಿರಿಗಳೊಡನೆಯೂ ಕೂಡಿಸುವ ದು ಕಷ್ಟಸಾಧ್ಯವೂ ಪ್ರಾಂತರಚನೆಗೆ ಅಸ್ವಾಭಾವಿಕವೂ ಆಗಿದೆ. ಇವೆಲ್ಲವುಗಳನ್ನು ನೈಸೂರು ಒಂದು ಮಾತ್ರವೇ ಏಕೀಕರಿಸುವಲ್ಲ ಅದರೆ ಬ್ರಿಟಿಷ ಕರ್ನಾಟಕವು ದೇಶೀರಾಜರ ಮಾನಸಿಕ ಪರಸ್ಥಿತಿ ಯ ಭೋಟರಿ(Lottery)ಚೀಟು ಹಾಕಲೊಪ್ಪಲಾರವು ಅದು ದರಿಂದ ಕರ್ನಾಟಕದ ಸಮಸ್ಯೆಯು ದಿಲ್ಲಿ ಪರಿಷತ್ತಿನಲ್ಲಿ ಯಾವರೀತಿ ಯಲ್ಲಿ ಜರ್ಚಿಸಲ್ಪಡಬಹುದೆಂದು ಹೇಳಲಾಗುವುದಿಲ್ಲ. ಕರ್ನಾಟಕ ಧುರೀಣರು ನಾವು ಈ ನೊದಲೇ ಸೂಚಿಸಿದಂತೆ ಮುಂದಾಗಿ ತಮ್ಮ ರಜನೆಯೊಂದನ್ನು ಸಿದ್ಧಪಡಿಸಿದರೆ ಉತ್ತಮವೆಂದು ನವಗನ್ನಿ ಸುತ್ತದೆ.

ಸ್ವದೇಶಾಭಿಮಾನಿ

ತ್ತಾಗಿದರದು. ವಾಸ್ತವವಾಗಿಕರ್ನಾಟಕದ ಏಕೀಕರಣಾಶವಳಕ್ಕೆ ೫೦ ವರ್ಷವಾಯಿತು. ೧೯೦೨ನೇ ಇಸವಿಯಲ್ಲಿ ಆದರ ಬೀಜ ಹಾಕಲಾ ಯಿತು. ೧೯೨೦ ನೇ ಇಸವಿಯಲ್ಲಿ ಧಾರವಾಡದಲ್ಲಿ ಜರಿಗಿದಕರ್ನಾ ಟಕರಾಜಕೀಯ ಪರಿಷತ್ತು ಏಕೀಕರಣದ ಇತಿಹಾಸದಲ್ಲಿ ಮಹತ್ವ ವುಳ್ಳದ್ದು. ಶ್ರೀ ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಕರ್ನಾ ಟಕ ಪ್ರಾಂತ ನಿರ್ಮಾಣದ ಉದ್ದೇಶಣೆಯಾಯಿತು ಅಂದಿನಿಂ ವ ಇರಿದಿನವರೆಗೆ ಕಾಂಗ್ರೆಸು ಕಮಿಟಿಯವರೂ ಏಕೀಕರಣ ಸಭೆ ಯವರೂ ವಿಶ್ವಪ್ರಯತ್ನಗಳನ್ನು ಮಾಡುತ್ತಿರುವರು. ಗವರ್ನ ಮೆಂಟ ಆಫ್ ಇಂಡಿಯಾ ಆಕ್ಟಿನಲ್ಲಿ ಭಾಷಾನುಗುಣಪ್ರಾಂತರಚನೆ ತತ್ವಗಳುಅಂಗೀಕೃತವಾಗಿದ್ದರೂ, ಕಾನ್ಸಿಲ್ ಆಫ್ ಸ್ಟೇಟಿನಲ್ಲಿ ಮುಂದೆ ಕರ್ನಾಟಕ ಪ್ರಾಂತರಚನೆಯ ಪ್ರಶ್ನೆಯನ್ನು ತಂದಾ ಸರ ಕಾರವು ತೋರಿದ ಅಲಕ್ಷ್ಯವನ್ನು ನೋಡಿದರೆ, ಕರ್ನಾಟಕಧುರೀ ಣರು ಭಗೀರಥ ಪ್ರಯತ್ನಗಳನ್ನು ಕೈಕೊಂಡಲ್ಲದೆ, ಕರ್ನಾಟಕದ ಏಕೀ ಕರಣವು ಸ್ವಪ್ನವಾಗಿ ಉಳಿಯುವುದೆಂದು ಕಾಣುತ್ತದೆ.

ಳಿ, ಲಾಂ ಜನರಬ್ಬೆಲು ವಿಸ್ತೀರ್ಣವುಳ್ಳ ಲಕ್ಷಾಂತರದಿಂದ ಜನ ಸಂಖ್ಯೆಯುಳ್ಳ ಸಣ್ಣ ಲಕ್ಷ್ಮಕಂದಾಯವನ್ನು ಕೊಡುವ ಬ್ರಿಟಿಶ್ ಕ

"ಕನ್ನಡಿಗ"ನ ಳನೇ ರಜೆ.

ಪ್ರತಿವರ್ಷದಂತೆ ಹೋಳೀ ಹುಣ್ಣಿವೆಗಾಗಿ ಮುಂಬಿನವಾರದಲ್ಲಿ 'ಕನ್ನಡಿಗ'ನಿಗೆ ಹಕ್ಕಿನರಜೆಯುಂಟು ಆದ್ದರಿಂದ ಖರೀದಿ ಸಂ ಜಿಕೆಯು ಮಾರ್ಚ ೧೧ ನೇ ತಾ॥ ದಿನ ಹೊಡುವದು.

ವ್ಯವಸ್ಥಾಪಕ

ಕರ್ನಾಟಕವ ಏಕೀಕರಣ.

ದಿಲ್ಲಿಯಲ್ಲಿ ನೆರೆದಿರುವ ಸರ್ವ ಪಕ್ಷಗಳ ಪರಿಷತ್ತಿನಲ್ಲಿ ಕರ್ನಾ ಟಕವನ್ನು ಸ್ವತ್ಯೇಕ ಪ್ರಾಂತವನ್ನಾಗಿ ಮಾಡುವ ಸಮಸ್ಯೆಯು ಚರ್ಚಿಸಲ್ಪಡುವುದಂತೆ. ಇದು ಅಭಿನಂದನೀಯವೇ ಸರಿ. ಕರ್ನಾಟಕ ಪ್ರಾಂತಿಕ ಕಾಂಗ್ರೆಸು ಕಮಿಟಿಯವರೂ ಏಕೀಕರಣ ಸಭೆಯವರೂ ಸಮಗ್ರ ಕರ್ನಾಟಕದವರ ಆಕಾಂಕ್ಷೆಯನ್ನು ಮೇಲಿನ ಪರಿ ಷತ್ತಿನ ಮುಂದೆ ಇಟ್ಟಿರುವರು. ಹಿಂದೂದೇಶದ ರಾಜ್ಯಸೂತ್ರ ಘಟನೆ (Constitution)ಯನ್ನು ಮಾಡುವುದರಲ್ಲಿ ಪ್ರವೃತ್ತರಾ ದ ಸರ್ವ ಪಕ್ಷೀಯ ಮುಖಂಡರು ಭಾಷಾನುಗುಣ ಪ್ರಾಂತರಚನೆ ಯನ್ನು ಮಾಡುವ ಅವಶ್ಯಕತೆಯನ್ನು ತಿಳಿದಿಹರೆಂದುನಾವು ಭಾವಿಸು ತ್ತೇವಲ್ಲದೆ ಬಹಷ್ಟು ಬೇಗನೇ ಕರ್ನಾಟಕವು ವಿಶಿಷ್ಟಪ್ರಾಂತವಾಗು ವುದೆಂದೂ ಹಾರೈಸುತ್ತೇವೆ. ಡಾ॥ ಬಿಸೆ.ಟ, ವಿಜಯರಾಘವಾ ಚಾರಿ, ರಂಗಸ್ವಾಮಿ ಐಂಗಾರ, ಶ್ರೀನಿವಾಸ ಐಂಗಾರ ಪ್ರಭೃತಿಗಳು ತಾವು ತಯಾರಿಸಿದ ರಾಜ್ಯಸೂತ್ರ ಘಟನೆಯಲ್ಲಿ ಈ ವ್ಯವಸ್ಥೆಗೆ ಒಪ್ಪಿಗೆಕೊಟ್ಟಿರುವುದರಿಂದ ನಮ್ಮ ನಿರೀಕ್ಷಣೆಯಲ್ಲಿ ನಮಗೆಹೆಚ್ಚಿನ ಭರವಸೆ.

ಇನ್ನು ಕರ್ನಾಟಕವುಪ್ರತ್ಯೇಕ ಪ್ರಾಂತವೆನ್ನಿಸಿಕೊಳ್ಳುವುದ ಕ್ಕೆ ಅರ್ಹತೆಯನ್ನು ಪಡೆದಿದೋ? ಎಂಬ ಪ್ರಶ್ನೆ. 'ಇದರಲ್ಲಿ ಮತಭೇದ ವಿರಲಾರದು. ಬಾಯ್ಬಡಕತನವೇ ಪ್ರಾಂತಾಭಿಮಾನದ ಲಕ್ಷಣ ವಾದರೆ ಕರ್ನಾಟಕವನ್ನು ಸ್ವತಂತ್ರ ಪ್ರಾಂತಗಳ ಪಟ್ಟಿಯಿಂದ ತೆ ಗೆದುಹಾಕಬಹುದು. ಆದರೆ, ಕಳೆದ ೫೦ ವರ್ಷಗಳಿಂದ ಕರ್ನಾ ಟಕಸ್ಥರು ಏಕೀಕರಣಕ್ಕಾಗಿ ಮಾಡುತ್ತಿರುವ ಪ್ರಶಾಂತ ಪ್ರಯತ್ನ ಗಳಿಂದ ಅವರ ಆಕಯವು ಎಷ್ಟು ನಿರ್ಮಲವಾಗಿದೆಯೆಂಬದು ಗೊ ರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವನ್ನೇರ್ಪಡಿಸಬೇಕೆಂದರೆ. ಅದು ಅಸಮಂಜಸವೆಂದು ತೋರಲಾರದು. ಇದರೊಡನೆ ನೈಸೂರೂ ಸಮಾವಿಷ್ಟವಾದರೆ. ಇದು ಸಂಭವನೀಯವೆಂದು ಹೇಳಲಾಗುವು ದಿಲ್ಲ, ಕರ್ನಾಟಕದವ್ಯ ಉದ್ದಗಲದ ಪ್ರಾಂತವು ಪ್ರತ್ಯೇಕ ವಾ ದರೆ ಹೆಚ್ಚು ಶೋಭೆಯುಂಟಾದೀತು; ಪಶ್ಚಿಮ ಕರಾವಳಿಯ ಲ್ಲಿ ಮಲ್ಪೆ, ಭಟ್ಕಳ, ಕಾರವಾರ ಮೊದಲಾದ ಯೋಗ್ಯ ಬಂದರು ಗಳು ಅದಕ್ಕೆ ಉಪಲುಬ್ಧವಾಗುವವು. ಬೆಂಗಳೂರು, ಹುಬ್ಬಳ್ಳಿ ಮಂಗಳೂರಿನಂತಹ ವ್ಯಾಪಾರ ನಗರಗಳು ಅದರಲ್ಲಿ ಸೇರುವವು ಇದು ಕರ್ನಾಟಕದ ಮಾತ್ರವಲ್ಲ; ಸರಕಾರದ ಅಡಳಿತೆಯವರೆಗೂ ಅನುಕೂಲವೆಂದು ನಾವಿಲ್ಲಿ ಹೇಳದಿರಲಾರೆವು.

ನವಯುಗ.

ರಂಗಭೂಮಿಯ ಸವಕಾಚಾರ.

ದತ್ತಾತ್ರಯ ನಾಟಕ ಮಡಳಿಯವರ ಬಾಗಲಕೋಟೆಯ ಕಾರ್ಯಕ್ರಮವು ಮುಗಿಯುತ್ತ ಬಂದಿದೆ. ಇದೇ ಕಡೆಯವಾರ ವನ್ನು ಮುಗಿಸಿಕೊಂಡು ಕಂಪನಿಯು ರಾಮದುರ್ಗಕ್ಕೆ ಹೊಂಗಿ' ಅಲ್ಲಿಂದ ಬೈಲಹೊಂಗಲವನ್ನು ಸಂದರ್ಶಿಸಿ ಬೇಸಿಗೆಯಲ್ಲಿ ಬೆಳಗಾವಿ ಯಲ್ಲಿ ತಮ್ಮ ಪ್ರಯೋಗಗಳನ್ನು ಪ್ರಾರಂಭಿಸ ಬೇಕೆಂದಿದ್ದಾರೆ.

ವಾಮನರಾವ ಮಾಸ್ತರರ ವಿಶ್ವಗುಣಾದರ್ಶ ಸಂಗೀತನಾಟ ಕ ಮಂಡಳಿ ದವರು ಹಾವೇರಿ ಕಾರ್ಯಕ್ರಮವು ಯಶಸ್ವಿಯಾಯಿ ತು. 'ಸಮುದೇವಿ' ನಾಟಕವು ಅಲ್ಲಿಯ ರಸಿಕರಿಗೆ ಹೆಚ್ಚಾಗಿ ಮೆಚ್ಚಿ ಸಿತು. ಶ್ರೀ ದೇಶಪಾಂಡೆ ಗುರುರಾಯರು ಈಗ ಇದೇ ಕಂಪನಿ ಯಲ್ಲಿರುವರುರುವರಷ್ಟೇ ಇವರ ಗಾಯನ ಕಚೇರಿಗಳೂ ಹಾವೇರಿ ಯಲ್ಲಿ ನಡೆದವು. 'ನೀರಭಿಮನ್ಯು' ಎಂಬ ಹೊಸದೊಂದು ನ

ಟಕವನ್ನು ಶ್ರೀ ವಾಮನರಾಯರು ಬೇಗನೇ ರಂಗಭೂಮಿಯ ಮೇಲೆ ತರತಕ್ಕವರಿದ್ದಾರೆ ಈಗ್ಗೆ ಕಂಪನಿಯು ಕಾರವತ್ತ್ರೀ ಜಾತ್ರೆಗೆ ಹೋಗಿದೆ. ಅಲ್ಲಿಂದ ಹರಿಹರ ಜಾತ್ರೆಗೆ ಬಂದು, ರಾಣೇ ಬೆನ್ನೂರಲ್ಲಿ ತಮ್ಮ ಡೇರೆ ಹೊಡೆಯುವರು.

ಅಂಬಾ ಪ್ರಸಾದಿಕರು ಚಿತ್ರದುರ್ಗದಲ್ಲಿದ್ದಾರೆ. ಹಿಂದು ಸ್ಥಾನೀ ಸೇವಾದಲದ ವ್ಯಾಯಾಮಶಾಲೆಯ ಸಹಾಯಕ್ಕೆ ಇವರು ಇದೇ ತಾ॥ ೨೭ ರಲ್ಲಿ ಒಂದು ನಾಟಕವನ್ನಾಡುವರು ಅವ ಕ್ಯಾಗಿ ಡಾ. ಹರ್ಡೀಕರು ಅಲ್ಲಿಗೆ ಹೋಗಿದ್ದಾರೆ.

ವೆಂಕಟರಾಯರ ತಿರಹಟ್ಟಿ ನಾಟಕ ಮಂಡಳಿದವರು ತಾವು ವಚನಕೊಟ್ಟಂತೆ ತಮ್ಮ ವೀನೇ ಪ್ರಯೋಗವನ್ನು ಹಿಂದುಸ್ಥಾನೀ ಸೇವಾದಲಕ್ಕೆ ಕೊಡತಕ್ಕವರಿದ್ದುದರಿಂದ ಕರ್ನಾಟಕ ಶಾಖಯ ಕಾರ್ಯದರ್ಶಿಗಳಾದ ಶ್ರೀ. ಬುಲಿಯವರು ಕುಂದಾವುರಕ್ಕೆ ಹೋಗಿದ್ದಾರೆ. ಶ್ರೀ. ವೆಂಕೋಬರಾಯರು ಸೇವಾದಲಕ್ಕೆ ಮಾಡಿದ ಸಹಾಯವು ಪ್ರಶಂಸನೀಯವಿದೆ. ಕಟ್ಟಡದಲ್ಲಿ ಒಂದು ಕೋಣೆಯನ್ನು ಇವರ ಹಸರಿನಿಂದ ನಾಮಕರಣಮಾಡುವ ವಿಚಾರವನ್ನು ಸೇವಾದಲದವರು ಮಾತಿಯುವರಂತೆ.

ವಾಸುದೇವ ಅಮೇಜೂರ ನಾಟಕ ಸಭೆಯವರು ಬಾಗಲ ಕೋಟೆಯಲ್ಲಿ ರವಿವಾರ ಮಾರ್ಚ್ ೪ನೇ ತಾ॥ ನಲ್ಲಿ "ಪತಿವ್ರತೀಕ ರಣ" ನಾಟಕವನ್ನು ಅಭಿನಯಿಸುವರು. ಕರ್ನಾಟಕ ವಾಜ್ಮಯ ಸಾಮ್ರಾಟ್ ಕರೂರ ವಾಸುದೇವಾಚಾರ್ಯರಿಂದ ಈ ನಾಟಕವು ರಚಿತವಾಗಿದ್ದರಿಂದಲೂ, ನಾಟಕದ, ಭಾಷೆ. ಗಾಯನೆ, ರಸಾದಿಗಳ ವರ್ಣನೆಯನ್ನು ನಾವು ಮಾಡುವ ಗೊ ಜಿಗೆ ಹೋಗದೆ ಅದಿನ ರಸಿಕರು ಈ ನಾಟಕವನ್ನು ನೋಡಿಯೇ ಅದರಲ್ಲಿಯ ಸವಿ ಸವಿಸಬೇಕೆಂದು ಮಾತ್ರ ಹೇಳುವೆವು. ಇನ್ನು ವಾಸುದೇವಾಚಾರ್ಯರ ಕೃತಿಗಳನ್ನು ಕನ್ನಡಿಗರ ಮುಂದಿರಸಲಿಕ್ಕೂ ಕರ್ನಾಟಕ ನಾಟ್ಯದೇವಿಯ ಸೇವೆಯನ್ನು ಮಾಡಲಿಕ್ಕೂ ಹೊಸಹುರುಪಿನಿ ದ ಹೊಟ್ಟ ವಾಜ್ಮಯ ಪ್ರೇಮೀ ವಾಸುದೇವ ಅಮೇಜೂರ ಸಭೆಯು ವರು ಆ ದಿನ ಪ್ರಯೋಗವನ್ನು ಹೇಗೆ ಮಾಡುವರೆಂಬದನ್ನು ಮಾತ್ರ ಕನ್ನಡಿಗನು ಅತುರನಾಗಿದ್ದಾನೆ.

ವಾಜ್ಮಯ ಪರಿಚಯ.

ಯೋಗವಾಸಿಷ್ಠ : – ಕನ್ನಡಉದ್ಗ್ರಂಥಗಳಲ್ಲಿ ಇದೊಂದಾ ಗಿರುವದು. ತೀರ್ಥಯಾತ್ರಿ ಶಾಸ್ತ್ರಿಖ್ಯಾಸಗಳಿಂದ ಶ್ರೀರಾಮ ಚಂದ್ರನಿ ಗೊಂದು ಬಗೆಯ ಉಪರತಿ ಯುಂಟಾಯಿತು. ಯಾವುದುರಲ್ಲಿಯೂ ಆಶೆ ಯಿಲ್ಲದಾಯಿತು. ಅವನಿಗೆ :—

"ಯಾವುದೀ ಸಂಸಾರದಲಿ ಸುಖ।
ಸಾವುತಿದೆ ಹುಟ್ಟುವರೆ ಲೋಕವು।
ಸಾವುಹುಟ್ಟಿಯಲು। ಹುಟ್ಟುತಿಹುದೀ ಪಡೆಯೆ ಲನವರತ॥

ಎಂದು ಸಂಸಾರದಲ್ಲಿ ಹುರುಳಿಲ್ಲದಾಯಿತು

ಹಾಗೆಯೇ:– ಇಂದು ರಾಜ್ಯದಲೇನು ಸುಖವಿರಿ।
ತಿಂದರೇನು ಸವಸ್ತ ಭೋಗದ।
ವೃಂದದಲಿ ಫಲವೇನೆನುತ್ತಲೆ ವಿರತ ತಾಳಿದನು.

ಇದೇ ಪ್ರಾಯದಲ್ಲಿದಿಯಿಟ್ಟ ಶ್ರೀರಾಮಚಂದ್ರನು ರಾಜ್ಯಭಾರ ಪಸ್ತು ನಿರ್ವಹಿಸಲು ಯೋಗ್ಯನಾದವನು. ಸಕಲವನ್ನು ಅವನಿಗೊ ಪ್ಪಿಸಿ ತಾವು ತಪಕ್ಕಾಗಬೇಕೆಂದು ಅಪುರರಾದ ದಶರಥ ಮಹಾರಾಜರಿಗೆ ಶ್ರೀರಾಮಚಂದ್ರನ ಈ ಬಗೆಯ ಅಶಾಲ ವೈರಾಗ್ಯವು ತಲ್ಲಣಗೊಳಿಸಿದ್ದು ಅಶ್ಚರ್ಯವಲ್ಲ ಕಡೆಗೆ ಮಹರ್ಷಿಗಳಾದ ವಸಿಷ್ಠರು ಅನೇಕಕಥೆ ದೃಷ್ಟಾಂತಗಳಿಂದ ತಿಳಿಸಿ ಈ ಔದಾಸೀನ್ಯವನ್ನು ಹೋಗಲಾಡಿಸಿದ ಉಪ ದೇಶವೇ ವಾಸಿಷ್ಠಯೋಗವೆಂದು ಹೇಸರಾಗಿದೆ ಈ ಯೋಗವು ಗೀ ತೆಯಕರ್ಮಯೋಗವಾಗಿರದೆ ಧ್ಯಾನ - ಭಕ್ತಿಯೋಗವಾಗಿರುವದು.

ಧಾರ್ಮಿಕ ತತ್ವಗಳನ್ನು ಕನ್ನಡದಲ್ಲಿ ತಿಳಿಹುವವುಅರ್ಥವೆಂದಾ ಗಲೀ ಅಸಮಂಜಸವೆಂದಾಗಲೀ ತೀಳಿಯುವ ಸಂಶಯ ಅಕ್ಷೇಪಗಳು ಇವಿಗೆ ತಟ್ಟದಂತೆ ಕಾಣುವದು ಯಾಕೆಂದರೆ:

ಅದು ನಿಲವಿ ಸುರವಾಣಿ ಯಾರಡೆ।
ಪದುರದಿಂದೇಳಿಲವ ಕಾಂಬರು।
ಮುದದಿಕನ್ನಡ ನುಡಿಯಿದಾದರೆ ಕೆಚ್ಚುಕಾಂದೇನೂ।
ಪದುಮ ತಾವರೆ ಯಂದದೇಸಿಂ।
ಪದರೆ ಗುಣವನು ಕಾಂಬುದೇಗುಣ।
ಪದುಗಳಕ್ಷಸದಿಹರೆ ಸಾರದ ತತ್ವವಿತ್ತವರು॥

ಎಂದು ಕನ್ನಡದ ಸಮರ್ಥನ ಮಾಡಿರುವನು. ಗ್ರಂಥವ್ಯಕ್ತಿ ವಸು ಗಳ ಪರಿಶೀಲನೆಯಲ್ಲಿ ಕೇವಲ ದೋಷಗಳನ್ನೆತ್ತಿ ನಗುವ ಗುಣವಿರು ಪು, ದೋಷದೃಷ್ಟಿಯ ನಿಂದಕರನ್ನು 'ವ್ರಸ್ತಾವನೇ ನೋಡಬಹುದು' ದಸವೆ' ಮೊದಲಾದ ಮಾತುಗಳಿಂದ ಚೆನ್ನಾಗಿ ಥಳಿಸಿರುವರು ಗ್ರಂಥ ದದ್ಧಯ ಉತ್ತರು ಶ್ಲೋಕ ಸಂದರ್ಭಗಳನ್ನು ಅಯ್ದು ಜೋಡಿದು ಇದ್ದ ಸಾಧ್ಯವೂ ಯೋಗ್ಯವೂ ಆಗದು ರಸಿಕರಾದ ವಾಚಕರು ಗ್ರಂಥವರಿ ತೀಲನೆ ಯಿಂದಲೇ ಕಂಡು ತೃಪ್ತಿ ಬಡಬೇಕು. ಕಡೆಯ ಸಂಧಿಯ ಧ್ಯಾನ ಯೋಗವಂತೂ ನಿತ್ಯ ಪಾರಾಯಣಕ್ಕೆ ಯೋಗ್ಯ ವಾಗಿರುವದು.

ಗ್ರಂಥದದಾಹ್ಯಸ್ವರೂಪವು ಮಾತ್ರ ತೀರ ಕೋಡಸಿಂದವಾಗಿದೆ ಹಳೆಯಕಾಗದ, ಬೇದಾರದ ಮುದ್ರಣ – ಮುದ್ರಣ ದೋಷಗಳಿಗಂತೂ ನೆಲೆಯೇ ಇಲ್ಲ– ಹಣದ ಕೊರತೆಯಿಂದಾಗುವ ಈ ದೋಷಗಳನು ರಸಿಕರಾದ ವಾಚಕರು ತಮ್ಮ ಉದಾರಾಶ್ರಯದಿಂದಲೇ ಪೋಗಲಾಡಿ ಸುವದು ಯೋಗ್ಯವಲ್ಲವೆ?

ಸೈಮನ್ ಸಾಹೇಬರಿಗಾದ ದೋಷಾರ್ತೆಯ ಕಥೆ

ಪ್ರ. ಹಿಂದುಸ್ಥಾನದ ಸರಕಾರವು ಯಾವದು?

ಉ:– ಇಂಗ್ಲಂಡಿನ ಪಾರ್ಲಿಮೆಂಟು ಅದು ಒಬ್ಬ ಮಂತ್ರಿಯ ಮುಖಾಂತರ ಹಿಂದುಸ್ಥಾನದ ಕೆಲಸ ನೋಡುತ್ತದೆ. ಈಗಿನವಂತ್ರಿ ಲಾರ್ಡ ಬರ್ಕನ್‌ಹೆಡ್ ದಿ ಮುಂಬಯಿ ಮುಂತಾವ ಸ್ಥಳಗಳಲ್ಲಿಯ ಸರಕಾರಗಳೆಂದರೆ ಹಿಂದುಸ್ಥಾನದಲ್ಲಿಯ ದುಡ್ಡನ್ನು ಅನೇಕವಿಧಗಳಿಂದ ಸೆಳಕೊಂಡು ಇಂಗ್ಲಂಡಕ್ಕೆ ಮನಿಆರ್ಡಾರ ಮಾಡುವ ಕಛೇರಿಗಳ

ಪ್ರ:– ಹೀಗಿದ್ದರೆ ಹಿಂದುಸ್ಥಾನವು ಸುಮ್ಮನೆವಿಕೆಕೊತಿದೆ? ಸ್ವರಾಜ್ಯ ಸಂಪಾದನೆ ಮಾಡಿದರೆ ಹಿಂದುಸ್ಥಾನದ ಸಂಪತ್ತು ಹಿಂದುಸ್ಥಾನದಲ್ಲಿಯೆ ಉಳಿಯುವದಿಲ್ಲವೆನು?

ಉ:– ಉಳಿಯತಿದ್ದರೆ ನಿಜ ಕೆಲವರು ನಿಜವಾಗಿಯೂ, ಪ್ರಯತ್ನ ಮಾಡುತ್ತಿರುವರು.

ಪ್ರ:– ಪಾರ್ಲಮೆಂಟಿನ ಸ್ವರಾಜ್ಯ ಕೊಡುತ್ತೇನೆಂದು ಹೇಳುತ್ತಿದ್ದಿಲ್ಲವೇ?

ಉ:– ಅಪ್ಪ ಬರೀ ಬಾಯಿಮಾತುಗಳು, ನಮ್ಮ ಕಣ್ಣುಗಳಲ್ಲಿ ಮಣ್ಣು ಒಗೆಯಲಿಕ್ಕೆ ಆ ಮಾತುಗಳು ಸಾಯಿಮನು ಕಾಯಿದೆಗಳಂಥ ಕವಿಶಸನ್ನುಗಳನ್ನು ಸರಕಾರಿ ರೀತಿಯಲ್ಲಿ ಹಿಂದುಸ್ಥಾನಕ್ಕೆ ಕಳಿಸುತ್ತಿದ್ದೆ. ಪಿನಾಪಿಯೋಳಿಂಥವಳನ್ನು ಖಾಸಗೀ ರೀತಿಯಿಂದ ಮೊದಲು ಕಳಿಸಿ ಅಮೇಲೆ ಇಂಥ ಕವಿಶಸನ್ನುಗಳನ್ನು ಕಳಿಸುತ್ತದೆ.

ಪ್ರ:– ಇಂಥಕವಿತನ್ನು ಗಳಿಂದ ಹಿತವಾಗುವದಿಲ್ಲವೇನು?

ಉ:– ಆಗುವದಿಲ್ಲ ಇಂಥ ೭ ಜನರು ಹಿಂದುಸ್ಥಾನದಲ್ಲಿ ಸಂಚಾ ರವಾಡಿ ಹೋಗಲಿಕ್ಕೆ ಹಿಂದುಸ್ಥಾನದ ಬಡರೈತರ ೩೧೦ ಲಕ್ಷ ರೂಪಾ ಯಿಗಳು ಮಾತ್ರ ವೆಚ್ಚವಾಗುತ್ತವೆ.

ಪ್ರ:–ಸರಕಾರದವರು ಏನುಹೇಳುತ್ತಾರೆ ?

ಉ:– ಇಂಗ್ಲೆಂಡ್‌ಗೂಡ ಸಹಕಾರ ಮಾಡಿರಿ. ಮಾಡಿಕೊಂಡೀರಿ (ಮಾಡಿದ್ದಿದ್ದರೆ ಎಮಗೆ ಗುಂಡು ಹಾಕ್ರೀನೆ.) ನೀವು ಸೇನಕರಂತೆಯೇ ಸಹಕಾರ ಮಾಡಬೇಕೇ ಹೊರ್ತು ಸರಿಸಮಾನರಂತೆ ಮಾಡಲಿಕೆ ಅಧಿಕಾರವಿಲ್ಲ

ಪ್ರ:–ಇದಕ್ಕೆ ರಾಷ್ಟ್ರಕಲ್ಪವೇನೆನ್ನುತ್ತದೆ

ಉ:– ಇಷ್ಟುದಿವಸ ಏನಾಯಿತೋ ಆಗಿಹೋಯಿತು ಇನ್ನು ಮೇಲೆ ನಾವ ಸ್ವತ್ತರಂತೆ ಸರಿಸಮಾನರಾಗಿಯೇ ನಮೊಡನೆ ಸಹಕಾರ ಮಾಡುವಿರೇ ಹೊರ್ತು ವಮ್ಮಸ್ವಾಭಿಮಾನಕ್ಕೆ ಭಂಗಬರುವಂತೆ ಸೇವಕರಾಗಿ ಸಹಕಾರ ಮಾಡುವವರಲ್ಲ

ಪ್ರ:– ಸಾಯಮನ್ ಸಮಿತಿ ಹಾಗೂ ಶಿಫಾರಸ್ಸುಗಳ ವಿಷಯದಲ್ಲಿ ಹಿಂದುಸ್ಥಾನದ ಜನರ ಹಾಗು ಸರಕಾರದ ಮತವೇನೆಂಬದನ್ನು ಹೇಳುವಿರಾ?

ಉ:– ಜೀಳಾವಿನ ಎರಡೂ ಪಕ್ಷದ ನಿಜವಾದ ಮತವನ್ನು ತಿಳಿದುಕೊಳ್ಳುವ ಅವಲಂಬಿಗೆ ನಮಗಿನ್ನಿರದೆ ಮೊನ್ನೆ ಅಸೆಂಬ್ಲಿಯಲ್ಲಾದ ವಾದ ವಿವಾದವನ್ನು ಓದಿದರೆ ನಿಮಗೆ ದೃಷ್ಟವಾಗುವದು. ಹಿಂದುಸ್ಥಾನದ ಸೇವೆಯನ್ನು ಮನಃಪೂರ್ವಕವಾಗಿ ಸ್ವಾರ್ಥತ್ಯಾಗದಿಂದ ಮಾಡುವ ಶ್ರೇಷ್ಠ ಬುದ್ಧಿವಂತರು ಅನೇಕರು ಅಸೆಂಬ್ಲಿಯಲ್ಲಿದ್ದಾರೆ ಅಂದಬಳಿಕ ಅವರ ಮತವೇ ಹಿಂದುಸ್ಥಾನದ ಮತವು.

ಪ್ರ:– ಶ್ರೇಷ್ಠಜನರಲ್ಲಿ ಲಲವಲಿಕೆಯನ್ನು ಹೇಳುವಿರಾ?

ಉ:– ಆನಂದದಿಂದ ಹೇಳುತ್ತೇನೆ. ಲಾಲಾಲಜಪತರಾಯ, ತಿಲ್ಲಾ, ಜಯಕರ, ಮೋತಿಲಾಲನೆಹರು ಪಂಡಿತ ಮದನಮೋಹನಮಾಲವೀಯ ಶ್ರೀನಿವಾಸ ಐಯ್ಯಂಗಾರ, ಪುರುಷೋತ್ತಮದಾಸ, ಇವರೇ ಮುಂತಾದವರು ಅಸೆಂಬ್ಲಿಯಲ್ಲಿರುವರು.

ಪ್ರ:– ಕ್ರಿಶ್ಚಿಯರೊಬ್ಬರೆ ಭಾಷಣದಲ್ಲಿಯು ಮಹತ್ವದ ಭಾಗವನ್ನು ಹೇಳಿದಿ.

ಮೊದಲು ಲಾಲಾಲಜಪತರಾಯರ ಭಾಷಣವ ಹೇಳುತ್ತೇನೆ ಕೇಳಿರಿ.

(೧) ಹಿಂದುಸ್ಥಾನ ಹಾಗು ಇಂಗ್ಲೆಂಡ ಸರಕಾರದ ಸ್ವಾತಂತ್ರತೆಗೆ ತನದ ವಿಷಯಕ್ಕೆ ನಾನೆಗೆ ವಿರ್ವಾದವಿಲ್ಲ.

(೨) ಸಾಯಮನ್ ಕಮೀಶನ್‌ದಂಥ ಕಮೀಶನ್ನುಗಳಿಗೆ ಹಿಂದುಸ್ಥಾನದಾಧಿಕ್ಯವಿರುವ ದೊಡ್ಡ ರಾಷ್ಟ್ರಗಳ ಅಧವಾ ಮತ್ತೆಯಾವ ರಾಷ್ಟ್ರಗಳ ಭವಿಷತ್ಕಲೆಯ ನಿರ್ಣಯಮಾಡಲು ಅಧಿಕಾರವಾಗಲಿ ಶಕ್ತಿಯಾಗಲಿ ಇರುವದೇ ಇಲ್ಲ ಹಿಂದುಸ್ಥಾನ ಹಾಗೂ ಇಂಗ್ಲೆಂಡ ಎರಡೂರಾಷ್ಟ್ರಗಳು ಒಬ್ಬರೊಬ್ಬರು ಹಿಡಿಯಬೇಕಾದರೆ ಇಬ್ಬರೂ ಸಮಾನರಾಗಿ ಕೂಡಿಕೊಂಡು ಒಪ್ಪಂದ ಮಾಡಿಕೊಳ್ಳಬೇಕು

(೩) ಇಂಗ್ಲೆಂಡವು ಹಿಂದುಸ್ಥಾನವನ್ನು ಬಿಟ್ಟು ಬಿಟ್ಟರೆ ಹಿಂದುಸ್ಥಾನದಲ್ಲಿ ರಕ್ತಪಾತವಾಗಲಿಕ್ಕಿಲ್ಲವೆಂದು ಬರ್ಕನ್‌ಹೆಡ್‌ರವನ್ನು ಹೊದಲುಮಾಡಿಕೊಂಡು ಹಿಂದುಸ್ಥಾನದ ಎಲ್ಲ ಹಿತಶತ್ರುಗಳು ಸಾರುತ್ತಿರುವರು. ಒದರೆ ಹಿಂದುಸ್ಥಾನಕ್ಕೆ ಅರಾಜಕತೆಯು ಅಂಜಿಕೆಯಿಲ್ಲ. ಏಕಚಕ್ರಾಧಿಪತ್ಯವನ್ನು ಬಿಟ್ಟು ನೋಡಿರಿ, ನಮ್ಮ ಬದಿದಾಟಿಗಳನ್ನು ಸರಿಪಡಿಸಿಕೊಳ್ಳಬೇಕೆ! ಈಗಾಲೂ ಅರಾಜಕತೆ ಇಲ್ಲವೆ? ನೀವು ಎಮಗೆ ನಮ್ಮಿಷ್ಟಾಲು ಹಿಂದುಸ್ಥಾನವನ್ನು ಇಲ್ಲವೆ ಗೆಲ್ಲಾಬೇಡಿ ಎಂದುಹೇಳಿದಾಂತೆಯೂ ಆಭಾಷಣವನ್ನು ಮಾತ್ರ ಸ್ವಾಧಿಸಿರುವಿರಿ!

(೪) ಹಿಂದುಸ್ಥಾನವನ್ನು ಆಳುವದು ಇಂಗ್ಲೆಂಡಕ್ಕೆ ಗೌರವ; ಹಿಂದುಸ್ಥಾನಕ್ಕೆ ಅವಮಾನಗೇಡಿತನವೆ.

(೫) ಸರಕಾರವು ಆಪ್ರಶ್ನೆಗಳವಿಷಯಕ್ಕೆ ಉತ್ತರಗಳನ್ನು ಈಗಿಗತಕ್ಕೆ ಗೊತ್ತುಮಾಡಿರುವರು. ಯಾಕಂದರೆ ಹಿಂದೀ ಜನರ ಬೆಳೆಯುತ್ತಲಿರುವ ರಾಷ್ಟ್ರೀಯತೆಗೆ ವಿರುದ್ಧವಾಗಿ ಅವರನ್ನು ಎದ್ದುನಿಲ್ಲಿಸುವ ಉಪದ್ವ್ಯಾಪವನ್ನು ಮಾಡಬಹುತ್ತದೆ.

ಹಿಂದುಜನರು ಹಿಂದುಸ್ಥಾನ ಸದಲ್ಲಿಯ ಹೊಲೆಯುಕುಂಟಾದ ಇತಿಗೆ ಅಸ್ಪೃಶ್ಯರೆಂದು ತಿಳದರೆ ಇಂಗ್ಲೀಷ ಜನರು ತಮ್ಮಂಥ ಕೆಂಪು ಮೋರೆಯವರನ್ನು ಬಿಟ್ಟು ಉಳಿದ ಎಲ್ಲರಿಗೂ ಅಸ್ಪೃಶ್ಯರೆಂದು ತಿಳಿಯುತ್ತಾರೆ. ಇಷ್ಟು ದಿವಸ ಅರ್ಯಸಮಾಜದವರೂ ಸಾಧಾರಣ ರೂಪುಹಾತ್ಮಾಗಾಂಧಿಯಂಥವರೂ ಅಸ್ಪೃಶ್ಯೋದ್ಧಾರವಮಾಡುತ್ತಿದ್ದರೂ ಸರಕಾರವು ಅವರಿಗೇನೂ ಸಹಾಯಮಾಡಿರುವದಿಲ್ಲ' ಅವರೆ ಈಗ ಪೂರ್ತಿ ಸಮ್ಮತಿಸಿದ್ದು ಅವರ ಸಹಾಯಬೇಕಾದರಿಂದ ಅಸ್ಪೃಶ್ಯರ ವಿಷಯಕ್ಕೆ ಸರಕಾರಕ್ಕೆ ಕಳಕಳಿದಪ್ಪೇವವನ್ನು ತೋರಿಸುತ್ತಿರುವರು.

ಜಿನ್ನಾ ಇವರ ಭಾಷಣದಲ್ಲಿಯ ರತ್ನಗಳು ಮುಸಲ್ಮಾನರು ಹಿಂದೂಜನರನ್ನು ಬಿಟ್ಟು ಬೇರೆಯಾಗಿ ಸರಕಾರದ ಹೊಸಮಸಂಪಾದಿಸುವದಿಂದರೆ ಬಿಸಲ್ಲುದುರೆಯನ್ನು ಹತ್ತಿದಂತೆಯೇಸರಿ.

ಒಪ್ಪಿಸ್ಟಾರೆಯನ್ನು ತಮ್ಮ ಕಮಿಶನ್ನದಮೇಲೆ ಹಿಂದೀ ಜನರ ನಿಜವಾದ ಸಲಲವಿಯನ್ನು ಸರಕಾರವು ಒಡಬಂಡುವವರಿಗೆ ಮತು ರಾಷ್ಟ್ರೀಯ ಪಂಗಡದವರು ಮುರುಷ್ಕೇಶದಿಂದೊಡಗೂಡಿ ಬಹಿಷ್ಕಾರಹಾಕಿದ ಕಿಂದುಸರಕಾರವು ಎರಡನೇಯವರಿಗೆ ಭೂಮಿಯನ್ನು ಹುಟ್ಟಿಸತೊಡಗಿದರೆ ಹಿಂದುಸಾ ನವು ಇಂಗ್ಲೆಂಡವ ಸೈಬಿಟ್ಟತೆಂದು ತಿಳಿಯಿರಿ

ಜಯಕರರ ಭಾಷಣದಲ್ಲಿಯ ಗಂಭೀರವಾದ ಭಾಗ ಹಿಂದೀ ಜನರ ಬೇಡಿಕೆಗಳಿಗೆ ಮನ್ನಣೆಮಾಡುವ ಸಮಯವು ಇದೆ. ಇದನ್ನು ಸರಕಾರವ ಕಳೆದುಕೊಂಡರೆ ತಿರುಗಿ ಬರಲಿಕ್ಕಿಲ್ಲ (ಮೊಪಲು ಜಯಕರು ಬಹಿಷ್ಕಾರಕ್ಕೆ ಏನೋಸ್ವಲ್ಪ ವಿರುದ್ಧರಿದ್ದರು ಆದರೆ ಕಡೆಗೆನಿರಾಶರಾದರು!) ಜಯಕರರು ನೈತಿಕ ಧೈರ್ಯವನ್ನು ಬಿಟ್ಟು ರಾಜಕಾರಣದಲ್ಲಿ ಮನಸ್ಸು ಹಾಕಿರುವರು ಎಮದು ವ್ಯಕ್ತವು ಬೇಕೆ ಬಂಯಿತು ಸರಕಾರಹಾಗು ಅವರ ಪತ್ರಗಳ ಪ್ರಕಾರ ನೈತಿಕ ಧೈರ್ಯವೆಂದರೆ ಜನತೆಯ ನಿಜವಾದ ಆಕಾಂಕ್ಷೆಗಳಿಗೆ ಪಾರದ್ದ ಹೋಗುವದೇ ಆದರೆಂದಿನ ಪದಸಿ ತಿಯನ್ನು ವಿಚಾರಮಾಡಲು ಸ್ವದೇಶಪ್ರೀತಿಯು ಎಲ್ಲ ಕ್ಷುದ್ರ ವಿಚಾರಗಳನ್ನು ನನ್ನ ಹೃದಯ ದಿಂಬಿ ಹೊರದೂಡಿದೆ.

ಶ್ರೀನಿವಾಸಐಯಂಗಾರರ ಭಾಷಣದಲ್ಲಿನು ಉಪ್ಪು ವಿಚಾರಯುಕ್ತವಾದ ಭಾಗ ಕಾಂಗ್ರೆಸ್ಸ ಅಧವಾ ಸ್ವರಾಜ್ಯ ಪಕ್ಷದ ಮತಗಳು ಉಗ್ರನ ಗಿರಾಸದರಿಂದ ಆಪ್ರೇಪಗಳ ಮತಗಳಲ್ಲಿ ರಾಜಕಾರಣ ಧುರೀಣತ್ವವು ಕಂದುಬರುವದಿಲ್ಲೆಂದು ಸರಕಾರವಹೇಳಿತು. ಆದರೆ ಸಿನ್ನಿಸಚಿವಸರಕಾರದಿಂದವನ್ನು ಚಿಪಡೆದ ಸೂತೇಜಬಹಾದ್ದೂರಸಪ್ರೂ ರಂಥವರು ಎಲ್ಲಪಕ್ಷಗಳನ್ನು ಕೂಡಿಕೊಂಡು ಬಹಿಷ್ಕಾರ ಹಾಕಿದರೆಂತೆ ಬಳಿಕ ಅವರ ಮನಸ್ಸಿನ ಸಮತೆಹೋಗಿ ಇಂದು ಬುದ್ಧಿಹೀನರಾದರೆ

ಮೋತಿಲಾಲ ನೆಹರು ಇವರ ಭಾಷಣದ ಭಾಗ. ಇಂಗ್ಲೆಂಡದ ಎಲ್ಲ ಪಕ್ಷಗಳೂ ಹಿಂದುಸಾ ನಕ್ಕೆ ಪಾಕಿದಬೇಡಿಗಳನ್ನು ಮತ್ತಿಸು ವಿಗಿಮಾಡುವದರಲ್ಲಿ ತೊಡಗಿವೆ ಆದ್ದರಿಂದ ಇಂಗ್ಲೆಂಡದ ಯಾವ ಪಕ್ಷದ ಹಿಂದೀಮೇಲೂಜನರು ವಿಶ್ವಾಸ ಕೊಡಕೂಡದೆಂದುಸುರಿದರು!

ಪುರುಷೋತ್ತಮದಾಸರ ಭಾಷಣವು ಮನೋರಂಜಕವೂ ಮೊಳಕ ಪ್ರದವೂ ಆಯಿತು

ಸರ ಸಾಯಮನ್‌ರು ಹಿಂದುಸಾ ನದಲ್ಲಿ ಸ್ಪಷ್ಟಪಡಿಸಿದ ಪತ್ರವು ಇಂಗ್ಲೆಂಡದಲ್ಲಿ ಮೊದಲೇ ಸಿದ್ಧವಾಗಿತ್ತೆಂದು ಗ್ರಾಹಾಮಪೊಲ್ ಎಂಬ ಪಾರ್ಲಮೆಂಟಿನ ಉಲಿಕಾರದಕ್ಷಣ ಸಭಾಸದರು ಇಂಗ್ಲೆಂಡದ ವರ್ತಮಾನಪತ್ರಗಳಲ್ಲಿ ಪ್ರಸಿದ್ಧಪಡಿಸಿದರು. ಅದಕ್ಕೆ ಸಾಯಮನ್‌ರು ಹಿಂದುಸ್ಥಾನದಲ್ಲಿ ಬಂದಮೇಲೆ ಪರಿಷ್ಕರಿಸಿ ಬರೆದಿರುವೆವೆಂದೂ ಮೊದಲೇ ಸಿದ್ಧವಾದದ್ದಲ್ಲವೆಂದೂ ಸಾರಿದರು! 'ಇದನ್ನು ಪುರುಷೋತ್ತಮದಾಸರು ಭಾಷಣದಲ್ಲಿ ಹೇಳಲು ಒಬ್ಬ ಮುರೋಪಿಯನ್ನು ರಭಾಸದರು 'ನಿಮ್ಮ ಸಾಯಮನ್ನರು ಸಧ್ಯಹಸ್ಥರು; ಅವರನ್ನು ಬಿಟ್ಟು ಗ್ರಾಹಾಮು ಪೋಲರನ್ನು ನಂಬುವರೋ?' ಎಂದು ಕೇಳಲು ಪುರುಷೋತ್ತಮದಾಸರು 'ಗ್ರಾಹಾಮು ಪೋಲರೂ ನಾವು ಸಧ್ಯಹಸ್ಥರು; ನಿಮ್ಮ ಮಾತನ್ನು ಯಾಕೆ ನಂಬಬಾರದು? ಕೇಳಿದರೆ ಸಾಯಮನ್ನರು ಅಹೋಳಿಯು ಸುಳ್ಳೆಂದು ಸಿದ್ಧಮಾಡಿಕೊಡಲಿ. ಎಂದು ಕೇಳಿದನು.

ಇನ್ನು ಸರಕಾರದ ಮತವನ್ನು ತಿಳಿಯುವಾ. "ನಾವು ಈ ಸಿಕೊಟ್ಟ ಸಾಯಮನ್ ಕಮೀಶನ್ನಿಗೆ ಸಹಾಯಮಾಡಿರಿ. ಇಲ್ಲದಿದ್ದರೆ ಎಚ್ಚರಿಕೆ ಕಂಡಿರಾ!" ಎಂದು ವೈಸಿಯರಾಯರು ಸೌಮ್ಯವಾಗಿ ಆಂದಿರುವರು

"ನಮಗೆ ಸಹಾಯಮಾಡಿರುವದು ನಿಮ್ಮ ದುರ್ದೈವವೇ ಸರಿ" ಎಂದು ಸೈಮನ್ ಸಾಹೇಬರು ಗುಣುಗುಟ್ಟಿದ್ದಾರೆ.

ಮುಂಬಯಿ ಟಾಯಿಮ್ಸ ಮುಂತಾದ ಸರಕಾರ ಪಕ್ಷಪಾತಿಕೆಗಳು ಸ್ವಾಭಿಮಾನ ಶೂನ್ಯರಾಗಿ ಸರಕಾರದ ಬಾಲಬಡಿಯುವದೇ ಹಿಂದೀ ಜನರ ಕರ್ತವ್ಯವೆಂಬರ್ಥದ ಮತವನ್ನು ಸಾರುತ್ತಿರುವವು.

ಇನ್ನು ಸರಕಾರದ ಬಾಲಬಡಿಯುವವರು ಗಮ್ಮುಲಿಲ್ಲವೆಂದಲ್ಲ. ಅವರಿಗೇನೂ ಕಡಿಮೆಯಿಲ್ಲ ಸೈಮನ್ನರು ಹಿಂದುಸ್ಥಾನದಲ್ಲಿ ಕಾಲಿಟ್ಟ ಕೂಡಲೇ, ಇಂಥ ಅನೇಕರು ಪ್ರತಿನಿಧಿಗಳಾಗಿ ಬಂದಿದ್ದಾರೆ ಮಾದರಿಗಾಗಿ ಅವರ ಮತವನ್ನಿಲ್ಲಿ ಕೊಡುತ್ತೇವೆ.

ರಾವಸಾಹೇಬ ಬೊಂಸಿ:— ಸಾಯಮನ್ ಸಮ್ಮೇಳನವೆಂದರೆ ನಮ್ಮ ಪೂರ್ವಜರಾದ ಪರಶುದ್ಧ ಕ್ಷತ್ರಿಯ ವಂಶರಾದ ಸಮರ್ಥ ಸಿಗಳೇ. ದೇವಲೋಕದ ದೊರೆಯಿಂದಲೂ ಸಲ್ಲುವದು ಪಾಪ! ನಿಮಗೆ ಮೇಯೋಗಿಗೆ ಆದುಂಥಹ ಸ್ಥಾನವನ್ನು ಕೊಡಲಿಲ್ಲೆ ಈ ಮಹಾಸಭೆಯವರು ಮರೆತುಬಿಟ್ಟರು ಸರಕಾರವು ರಾವಸಾಹೇಬ ಬಿರುದು ತವುಗೆ ಕೊಟ್ಟಿದ್ದಕ್ಕೆ ಇವರು ಸಾಯಮನ್ನ ಸಮ್ಮೇಳನಕ್ಕೆ ಸಮ್ಮಿಗಳೆಂಬ ಬಿರುದು ಕೊಟ್ಟಿರು ಏನು ಔದಾರ್ಯವಯ್ಯಾ!!!

ಬೋಲೆಯವರು. ಸಾಯಮನ್ ಸಾಹೇಬರೇ, ನನ್ನಲ್ಲಿಯ ಕೆಲವು ಕಲಿತರುಳ ಮುಖಂಡರು ನಿಮಗೆ ಬಹಿಷ್ಕಾರ ಹಾಕುವದನ್ನು ಕಂಡು ಹಿಂದುಸ್ಥಾನಕ್ಕೆ ಅಹಿತವಾಗಬೇಡಿರಿ; ಕ್ಷಮಿಸಿರಿ, ಬಾಗಿ, ಈಗ್ಲೆ ನಮಸ್ಕಾರಮಾಡಿ (ಆವಶ್ಯವಿದ್ದರೆ ದಿಂಡುರುಳಿಕೆ ಉರುಳಿ) ಬೇಡಿಕೊಳ್ಳುತ್ತೇನೆ.

(ಹಿಂದುಸ್ಥಾನದ ಸ್ಥಿತಿಯು ಇವರಿಗೆ ನಾಟಕವೆಂದೇ ತೋರುತ್ತಿರಬಹುದಲ್ಲವೇ?)

ಅಸೆಂಬ್ಲಿಯ ಸಭಾಪತಿಗಳಾದ ಮಿ. ರಾಜಾ ಎಂಬವರು ಸರಕಾರದಿಂದ ನಿಯಮಿಸಲ್ಪಟ್ಟವರು. ಇವರು ತಾವೇ ಅಸ್ಪೃಶ್ಯರ ಮುಂದಾಳುಗಳೆಂದು ತೀರಿಸಿಕೊಳ್ಳುತ್ತಾರೆ. ನಮ್ಮ ಅಸ್ಪೃಶ್ಯ ಬಾಂಧವರು ಸಾಯಮನ್ನ ಕಮೀಶನ್ನಿಗೆ ಸ್ವಾಗತ ಮಾಡುತ್ತಾರೆಂದು ಇವರು ಅಸೆಂಬ್ಲಿಯಲ್ಲಿ ತಿಳಿಸಿದರು. ಆಗ್ಗೆ ಅಸ್ಪೃಶ್ಯರ ಸಭೆಯು ಅವಶ್ಯಕ್ಕಿರೇ ತಮಗೆ ಕೊಟ್ಟುಳಕ್ಕಿದ ರೂಪಾಯನ್ನು ಪಂಡಿತ ಮಾಲವಿಯರು ಅಸೆಂಬ್ಲಿಯಲ್ಲಿ ಹಾಜರ ಮಾಡಿದರು. ಆ ರೂಪಾಯಿನಲ್ಲಿ 'ಅಸ್ಪೃಶ್ಯರೆಲ್ಲ ಸಾಯಮನ್ ಕಮೀಶನ್ನಿಗೆ ಬಹಿಷ್ಕಾರ ಹಾಕಿರುತ್ತೇವೆ' ಎಂದು ಬರೆದಿತ್ತು. ಅದನ್ನು ಓದಲು ಮಿ. ರಾಜಾ ಇವರು "ತಿಳಿಯದೆ ಏನೇನೋ ಹೇಳಲು ಉದಕ್ಕಮಿಸಲು, ಅಸೆಂಬ್ಲಿಯ ಅಧ್ಯಕ್ಷರು ಅವರನ್ನು ಕೂಡಿಸಿಬಿಟ್ಟರು!"

ಬಾಲಬಡಿಯುವವರ ಮುಕ್ಕೊಂದು ಮಾದರಿಯನ್ನು ನೋಡಿರಿ. ಸರ ಹರಿಸಿಂಗ ಗೌರ ಎಂಬವರು ಲಾಲಾ ಲಜಪತರಾಯರಿಗೆ ತಾವು ಬಹಿಷ್ಕಾರ ಹಾಕಿದ್ದವರೆಂದು ಮೊದಲು ತಿಳಿಸಿದ್ದರು. ಆದರೆ ಅಸೆಂಬ್ಲಿಯಲ್ಲಿ ಬಹಿಷ್ಕಾರಕ್ಕೆ ವಿರುದ್ಧವಾಗಿ ಮತಕೊಟ್ಟರು! ಹೇಗಿದೆ ಪೌಚಿತ್ಯ ಗೊಂಬೆಯಿದು?!

ಇನ್ನೊಂದು ವಿಷಯ. ಸಾಯಮನ್ ಕಮೀಶನ್ನು ದೇಶಕ್ಕೆ ಅಹಿತವೆಂದು ಎಲ್ಲ ನಿಜವಾದ ರಾಷ್ಟ್ರಪ್ರೇಮಿಗಳ ನಂಬುಗೆ. ಆದಕ್ಕಾಗಿ ಎಲ್ಲ ಲೋಕನಿಯುಕ್ತಸಭಾಸದರು (೨೮ ಮಂದಿ) ಸಾಯಮನ್ನ ಕಮೀಶನ್ನಿಗೆ ಬಹಿಷ್ಕಾರ ಹಾಕಿದರು. ಉದಾಹರಣೆಗಾಗಿ ಪುರಷೋತ್ತಮ ರಾಯ ವಿಠಲದಾಸ ಎಂಬವರು ಕರಾಚಿಯವರು. ಅವರು ಬೇಕೆಯಿಂದ ಹಾನಿಗೆಯನ್ನು ಹಿಡಿದಿದ್ದರು. ಅಂಥವರು ಕೂಡ ತನ್ನ ದೇಹದ ಪರಿವೆಯಿಲ್ಲದೆ ಕರಾಚಿಯಿಂದ ದಿಲ್ಲಿಗೆ ಹೋದರು. ಮತಕೊಡಲಿಕ್ಕೆ ಹೋಗಲು ತ್ರಾಣವೂ ಅವಸಾನವೂ ಉಳಿಯಲಿಲ್ಲ! ಈ ರೀತಿಯ ದಿಲ್ಲಿಯಲ್ಲಿ ಪುಂಗಿಕೊಂಡಿತು! ಇಂಥವರು ಬಹಿಷ್ಕಾರಕ್ಕಾಗಿ ಪ್ರಾಣ ಕೊಟ್ಟೆವೆಂದಬಳಿಕ, ಸಾಯಮನ್ನ ಕಮೀಶನ್ನಿಗೆ ಬಹಿಷ್ಕಾರ ಹಾಕುವ ಜನರು ದೇಶದ್ರೋಹಿಗಳೂ ಅನ್ಯಾಯಗಾರರೂ ಎಂದು ಕರೆಯುವವರು ಪುನುಸ್ಕರೋ ಅಥವಾ ದೇಶಕಾಗಣಗಳನ್ನು ಬಿಟ್ಟು ದೇರಿಗಹಾಡವರೋ ಎಂಬದನ್ನು ಜನರೇ ನಿಶ್ಚಯಿಸಬೇಕು.

ಇನ್ನು ಹಿಂದುಸ್ಥಾನದಲ್ಲಿ ರಾಷ್ಟ್ರೀಯಪಕ್ಷವು ಬೆಳೆಯುತ್ತಿರುವದೇ ಈ ಬಗ್ಗೆ ಕೋಚಿ ಬರೆಯುವಾ—

ನಮ್ಮಲ್ಲಿ ಬಹುತರವಾಗಿ ಎಲ್ಲ ಜಾತಿಗಳು ಎಚ್ಚತ್ತಿರುವವು. ಇದರಲ್ಲಿ ಶ್ರೇಯಸ್ಸು ಸರಕಾರಕ್ಕೂ ಬರುವದು. ಯಾಕಂದರೆ, ಮೊದಲು ಹಿಂದೂ ಜನರಿಗೆ ಅದರಲ್ಲಿ ಬ್ರಾಹ್ಮಣರಿಗೆ ಶಾಪ್ತಾಕ್ಷ, ವಿದ್ಯೆ ಕಲಿಸಿ ಕಾರಕೂನರನ್ನಾಗಿ ಮಾಡಿದರು ಅದರೆ ಇವರು ಸ್ವಲ್ಪಕಾಲದಲ್ಲಿಯೇ ತನ್ನ ನಿಜಸ್ವರೂಪ ನು ಕಂಡು ಸರಕಾರದ ಕೂಡೆ ಹಲ್ಲುಗಳ ಕಲುವಾಗಿ ಬಡದಾಡಹತ್ತಿದರು ಕೂಡಲೇ ಈ ಹಿಂದೂ ಜನರ ವಿರುದ್ಧ ಮುಸಲ್ಮಾನರನ್ನು ಎಬ್ಬಿಸಿದರು ಆ ಮೇಲೆ ಬ್ರಾಹ್ಮಣೇತರಾರನ್ನು ಎಬ್ಬಿಸಿದರು! ಈಗ್ಗೆ ಅಸ್ಪೃಶ್ಯರನ್ನು ಏಬ್ಬಿಸಹತ್ತಿರುವರು!! ಇವರನ್ನೂ ಮೋಸಹೋಯಿತೆಂದರೆ, ಬಿಗರು ಬೇರಿಗರಂಥ ಕಾಡು ಜನರನ್ನು ಎಬಿಸುವರು. ಇದಕ್ಕಷ್ಟೇಕು ಭೇದನೀತಿ ಎಂದು! ಸರಕಾರದ ಈ ಭೇದ ನೀತಿಗೆ ವಿರುದ್ಧ ನಿಲುಕ್ಕಿ ನಿಲುಕ್ಕಿ ರಷ್ಟ್ರೀಯ ಭಾವನೆಯು ಎಲ್ಲರಲ್ಲಿ ಈಗ್ಲೆ ಚನ್ನಾಗಿ ಬಿಂಬಿಸಿಬಿಟ್ಟಿದೆ ಇದಕ್ಕೊಂದು ಉದಾಹರಣೆಯಿದೆ. ೨೦ ವರುಷಗಳ ಹಿಂದೆ 'ವಂದೇಮಾತರಂ' ಎಂದು ನುಡಿದರೆ ಶಿಕ್ಷೆಯಾಗುತ್ತಿತ್ತು! ಈಗ್ಗೆ ಪೊಲೀಸ ಅಸೆಂಬ್ಲಿಯಲ್ಲಿ ಬಹಿಷ್ಕಾರಕ್ಕೆ ಜಯವಾದ ಕೂಡಲೇ, ಸರಕಾರದ ಹೃದಯಕೋಶವಾದ ಅಸೆಂಬ್ಲಿಯಲ್ಲಿ 'ವಂದೇಮಾತರಂ' ಎಂದು ಎಲ್ಲರೂ ಏಂಕಗರ್ಜನೆ ಗೈದಿದ್ದರು! ಮಹಾತ್ಮರು ದಯಮಾಲಿಸಿದ ರಾಷ್ಟ್ರೀಯ ಧ್ವಜವು ಸಹ ಅಸೆಂಬ್ಲಿಯ ಮೇಲೆ ಏಲ್ಲಿಸಲ್ಪಡುವದರಲ್ಲಿ ಸಂದೇಹವಿಲ್ಲ. ಆ ದಿನವೇ ಸುದಿನವು!

ವಂದೇಮಾತರಂ!

ಸ್ವೀಕಾರ.

(೧) ಅಭಿನವ ನಾಟಕ ಗ್ರಂಥಕಾರರು:- ಪಾಲ್ಯ ಸುಂದರ ಶಾಸ್ತ್ರಿಗಳು. ಕರ್ನಾಟಕ ವಿದ್ಯಾವರ್ಧಕ ಸಂಘದವರಿಂದ ಪ್ರಕಟಿಸಲ್ಪಟ್ಟಿದ್ದು. ಬೆಲೆ ೬ ಆಣೆ.

(೨) ಶ್ರೀಮದ್ವೇದಾಂತಾಚಾರ್ಯರ ಚರಿತ್ರೆ

(೩) ವರ್ಣಾವ್ಯವಸ್ಥಾ ಭಾಗ ೧—೨ ವಿದ್ವಾನ್ ಎಂ ಕೆ. ಶ್ರೀನಿವಾಸ ರಾಘವಾಚಾರ್ಯರಿಂದ ರಚಿಸಲ್ಪಟ್ಟಿದ್ದು. ಬೆಲೆ ಪ್ರತಿಯೊಂದಕ್ಕೆ ೩ ಆಣೆ.

(೪) ಜಮಖಂಡಿ ಗೋರಕ್ಷಣಾ ಸಂಸ್ಥೆಯು ೭ನೇ ವರ್ಷದ ವರದಿ ಜಮಖಂಡಿಯಲ್ಲಿ ಗೋರಕ್ಷಣದ ಕಾರ್ಯವು ವ್ಯವಸ್ಥಿತವಾಗಿ ಸಾಗಿದೆಯೆಂಬುದು ಇದರಿಂದ ತಿಳಿಯುವಂತಿದೆ ಆದರೆ ದಿವೋರ್ಟ್ ಕನ್ನಡದಲ್ಲಿರದೇ ಮರಾಠಿಯಲ್ಲೇಕೋ ನಮಗೆ ತಿಳಿಯದು. ಮುಂದಿನ ವರ್ಷದಿಂದಾದರೂ ಚಾಲಕರು ಕನ್ನಡದಲ್ಲಯೇ ವರದಿಯನ್ನು ಹೊರಡಿಸುವರೆಂದು ನಂಬಿದ್ದೇವೆ.

೫ಯಮುತನಗಾಂದ ಅಂಗಡಿ, ಕಂಬಳಿ ಮುಳ್ಳು ರಕ್ಷಸಗಿ ದೇವಾಯಿ ತ್ರಯರಗಂಪಲ; ಹಲಲಲ್ಲೆ, ಅಧುನಿಕ ಸಾರಥಿ!

ಸಾರಥಿ:- ಹಾ ತಾವ್ಮುದಾರು ಮುತ್ಮು ತಮ್ಮ ಹೆಲೇಕು?

ತ್ರಿವರ್ಗ:- ನಾವ್... ಧಾರೆಂದದ್ದೆ:- ನಾವ್... ಮಂತದಾರ ಸಂಘದಿಂದ ... ಆರಿಸಿಬಂದ, ... ದಯಾಳು ಸರಕಾರದ ... ಕಲ್ಯಾಣಕ್ಕಾಗಿ ಟೊಂಕ ಕಟ್ಟಿದ ... ಹಿಂದುಸ್ಥಾನದಲ್ಲಿ ದೆಸರುಬದೆದ ಮುಂಬೈ ಪ್ರಾಂತದ ... ಕಾಯದೇ ಕೌನ್ಸಿಲ್‌ದ .. ಬ್ರಾಹ್ಮಣೇತರ ಪಕ್ಷದ ... ಪ್ರತಿನಿಧಿಗಳೆಂದು ತಿಳಿಯೈ ಸಾರಥಿ ವರ್ತಮಾನದ ಮುಂದತಿ.

ಸಾರಥಿ:- ರಾವಸಾಹೇಬ ದ್ಯಾವರೂ ತಾವ್ಮು ಗಾವಿನ ಕಸ್ತು ಯಾವದು?

ತ್ರಿವರ್ಗ:- ಬಾರ್ಡೋಲಿ ತಾಲೂಕಿನ ಭೂಮಿಯು ದಿಂತಾದವಂದಯಾಳು ಸರಕಾರನ ಹೆಚ್ಚಿಸಲು ಪ್ರಯತ್ನಿಸಲು .. ಬಾರ್ಡೋಲಿಯವರು ಸತ್ಯಾಗ್ರಹಂ ಮಾಡಲು ... ದಯಾಳು ಸರಕಾರದ ಕಲ್ಯಾಣವೇ ನಮ್ಮ ಕಲ್ಯಾಣವಾಗಿದ್ದುದರಿಂದ-ಸತ್ಯಾಗ್ರಹದ ಜನರಿಗೆ ಬಿಡುದ್ದ ನಡಕೊಂಡ -ಬ್ರಾಹ್ಮಣೇತರ ನವರತ್ನಂಗಳಲ್ಲಿ ನಾವೆ ಶ್ರೇಷ್ಠರಂತೆಂದು ತಿಳಿಯೈ ಸಾರಥಿ, ನಮ್ಮಗುಣಗಳಂ ಬೀರುತ!

(ಬಾರ್ಡೋಲಿ ತಾಲೂಕಿನಲ್ಲಿ ಸರಕಾರವು ಅನ್ಯಾಯವಾಗಿ ಕಂದಾಯವನ್ನು ಹೆಚ್ಚುಮಾಡಲು ಅಲ್ಲಿಯ ಜನರು ಸತ್ಯಾಗ್ರಹವನ್ನು ಮಾಡಿರುವರು. ಮುಂಬಯಿ ಕೌನ್ಸಿಲ್‌ದಲ್ಲಿ ಬಾರ್ಡೋಲಿ ಬಡಜೈತರಿಗೆ ಅನುಕೂಲವಾಗುವಂತೆ ತೀರಾವು ಬಂದಾಗ್ಯೆ ಬ್ರಾಹ್ಮಣೇತರ ಪಕ್ಷವೆ ಸರಿ ಕೂಡಿ ಅನುಕೂಲ ಮತವನ್ನು ಕೊಡುವದೆಂದು ಮೊದಲು ಹೇಳಿದ್ದರಂತೆ! ಆದರೆ ಸಭಾಲದಲ್ಲಿ ಅನುಕೂಲಿಮತ [illegible] ರಿಂದ ಆ ತೀರಾವು ವಾಪಾಸಾಯಿತು! ಜನರಿಂದ ಆರಿಸಲ್ಪಟ್ಟ ಜನರು ಜನರ ಹಿತವನ್ನು ವಿಶೇಷತಃ ಬಡಜೈತರ ಹಿತವನ್ನು ನೋಡುವದಿಲ್ಲವೆಂಬುದು ವ್ಯಕ್ತವಾಗುವದಿಲ್ಲವೇ!)

ವೆಂಕೋಬರಾಯರ ತಿರಹಪ್ಪ ನಾಟಕ ಮುಂದಲದವರು ಶಾಂತಾಪುರದಲ್ಲಿ ಕಟ್ಟುಳುಮತಕ ವಿಜಯ ನಾಟಕವನ್ನಾಡಿ, ಅದರ ಉಳ್ಳಾಗ ೨೬೫ ರೂ. ಗಳನ್ನು ಹಿಂ. ಸೇ. ದಲಿತ ಸಮಾಜದವರು ತಾಲೆಗೆ ಕಟ್ಟು ೨೦೦ ರೂಪಾಯಿಗಳು ಕೊಟ್ಟರು.

ಬ್ರಿಟಿಷ್ ಕರ್ನಾಟಕ ಸಂಘ.

ಕಳೆದ ತಾ॥ ೬ ಕ್ಕೆ ಧಾರವಾಡದಲ್ಲಿ ಲಿಂಗಾಯತ ಹಾಲಿನಲ್ಲಿ ಕನ್ನಡಿಗರ ಸಾರ್ವಜನಿಕ ಸಭೆಯು ಧಾರವಾಡದ ಪಕೀಲರಾದ ಶ್ರೀ॥ ವ್ಹಿ. ಸಿ. ಗಿರಿಮಲ್ಲಪ್ಪನವರ ಇವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಆಗ "ಬ್ರಿಟಿಷ್ ಕರ್ನಾಟಕ ಅಸೋಸಿಯೇಶನ್" ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿತು.

ಬ್ರಿಟಿಷ್ ಕರ್ನಾಟಕ ಪ್ರಾಂತದ ವಿಕೀಕರಣವನ್ನು ಸರಕಾರಮೊಡನೆ ಸಹಕಾರದಿಂದ ಸಾಧಿಸುವದೇ ಈ ಸಂಘದ ಮುಖ್ಯೋದ್ದೇಶವಾಗಿದೆ. ಈದೇ ಈ ಸಂಘದ ಪದ್ಧತಿವಾಗಿ ಮುಂಬೈ ಸರಕಾರ, ಮದರಾಸ ಸರಕಾರ, ಹಿಂದುಸ್ತಾನ ಸರಕಾರ ಮತ್ತು ರಾಯಲ್ ಕಮೀಶನ್ ದೊದ್ದಾದವುಗಳ ಮುಂದೆ ಪ್ರತಿನಿಧಿಗಳನ್ನು ಕಳುಹಿಸಿ, ಕರ್ನಾಟಕ ವಿಕೀಕರಣ ಪ್ರಶ್ನೆಯನ್ನು ಇಡುವದು ಸದ್ಯದ ಕಾರ್ಯಕ್ರಮವಾಗಿದೆ.

ವಿಜಾಪುರ ದಿ॥ ಲೊ॥ ಬೋರ್ಡಿನ ಪ್ರಸಿಡೆಂಟರಾದ ಶ್ರೀ. ಎಸ್. ಟಿ. ಪಾಟೀಲ, ಬಿ. ಎ. ಎಲ್‌ಎಲ್. ಬಿ. ಇವರು ಅಧ್ಯಕ್ಷರಾಗಿಯೂ, ಶ್ರೀ॥ ಬ್ಲಿ. ಸಿ. ಗಾಣವಾಡ ಎಂ. ಎ ಎಲ್‌ಎಲ್. ಬಿ. ವಿಜಾಪುರ ಮತ್ತು ಶ್ರೀ॥ ಎಸ್. ಎಸ್. ಮಳಿಮಠ ಬಿ. ಎ. ಎಲ್‌ಎಲ್. ಬಿ. ಧಾರವಾಡ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ ಈ ಸಂಘದ ಮುಖ್ಯ ಕಛೇರಿಯನ್ನು ವಿಜಾಪುರದಲ್ಲಿರುವದು ಗೊತ್ತಾಗಿದ್ದು, ಬ್ರಿಟಿಷ್ ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ಶಾಖಾ ಸಂಘಗಳು ಸ್ಥಾಪಿಸಲ್ಪಡುವವು. ಈಗ ಬಲ್ಲ್ಯಾ ಭಾಗಗಳ ಪ್ರತಿನಿಧಿಗಳಿಂದ ಕೂಡಿದ ೧೫ ಜನರ ಒಂದು ಕಾರ್ಯವಾಹಕ ಸಂಘವು ಏರ್ಪಟ್ಟಿದೆ. ಇವರು ಈಗಾಗಲೇ ಪ್ರಸಾರ ಕಾರ್ಯವನ್ನು ಒತ್ತರದಿಂದ ನಡೆಸಿದ್ದಾರೆ. ಇವರು ಇಷ್ಟರಲ್ಲಿಯೇ ಈ ಬ್ರಿಟಿಷ್ ಕರ್ನಾಟಕ ಸಂಘದ ಉದ್ದೇಶ, ನಿಯಮ, ಕಾರ್ಯಕ್ರಮಗಳನ್ನು ಕುರಿತು ಒಂದು ಪ್ರಸಿದ್ಧ ಪತ್ರಿಕೆಯನ್ನು ಪ್ರಕಟಿಸುವರಿದ್ದಾರೆ ಮತ್ತು ಕನ್ನಡಾಭಿಮಾನಿಗಳೆಲ್ಲರೂ ಈ ಸಂಘದ ಮೆಂಬರರಾಗಿ ಕರ್ನಾಟಕ ವಿಕೀಕರಣ ಪ್ರಶ್ನೆಯನ್ನು ಬಿಡಿಸಲು ಸಹಾಯ ಮಾಡಬೇಕೆಂದು ಬೇಡಿಕೊಳ್ಳುತ್ತಾರೆ —ಲೋಕಮತ.

ಕನ್ನಡಿಗರೂ ಮರಾಟಿಯ ಲಗ್ನಪತ್ರಿಕೆಗಳೂ

ಉತ್ತರ ಕರ್ನಾಟಕದಲ್ಲಿರುವ ಅನೇಕ ಅಜ್ಞಾನಿ ಕನ್ನಡಿಗರು ಮರಾಟಿಯಲ್ಲಿ ಆಮಂತ್ರಣ ಪತ್ರಿಕೆಗಳನ್ನು ಮುದ್ರಿಸುವದೆಂದರೆ ಅದೊಂದು ಒಳ್ಳೇ ಸಂಭ್ರಮದ ಮಹಾನುಸಂಭ್ರಮದ ವಿಷಯವಾಗಿದೆ. "ಹುಲಿದ ಬಾಳಿಸು ಇಲ್ಲೆನ್ನಂದಿ" ರೂಢಿಯಲ್ಲಿ ತಮ್ಮ ಸ್ವಂತ ಕನ್ನಡವನ್ನು ಬಿಟ್ಟು ತಮಗೆ ಪರಕೀಯವಾದ ಮರಾಟಿಯಲ್ಲಿ ಆಮಂತ್ರಣ ಪತ್ರಿಕೆಗಳನ್ನು ಮುದ್ರಿಸಿದರೆ ತಮಗೆ ಸ್ವರ್ಗದಲ್ಲಿ ಅವ ಸ್ಥಾನವು ದೊರೆಕುವದೆಂಬ ಕಲ್ಪನೆ ಈ ಮಹನೀಯರಿಗೆ ನಿದೆಯೋ ನಮಗೆ ತಿಳಿಯದು. ಈ ಬಗ್ಗೆ ಸಾರ್ವಜನಿಕವಾಗಿ ಚರ್ಚೆಯಾಗಬೇಕಾಗಿದೆ. ವೃತ್ತಪತ್ರಗಳಲ್ಲಿ ಟೀಕೆಗಳು ಹೊರಬಿದ್ದಿವೆ. ಪ್ರಯತ್ನಗಳು ಸಹ ಪ್ರಯೋಗಿಸಲ್ಪಟ್ಟಿವೆ. ಆದರೆ ಬೋರ್ಕಿಲ್ಲ ಮೇಲೆ ಮಳೆಗರೆದರಾಳಲ್ಲು ನೀರ್ಕುಡಿಯ ಬಹುದೇ ಸರ್ವಜ್ಞ" ಎಂಬಂತೆ ಈ ಮಹನೀಯರ ಸ್ಥಿತಿಯಿದೆನ್ನಬೇಕಾಗಿದೆ. ಪ್ರಸ್ತುತದಲ್ಲಿ ಈ ವಿಷಯವು ಹೊರಡಲು ಒಂದು ಕಾರಣವಾಗಿದೆ. ಬಾಗಲಕೋಟೆಯ ಓರ್ವ ಅಜ್ಞಾನಿ ಕನ್ನಡಿಗರಲ್ಲಿ ಒಂದು ..... ಸಮಾರಂಭವಾಯಿತು. ಆಮಂತ್ರಣ ಪತ್ರಿಕೆಗಳು ಮರಾಟಿಯಲ್ಲಿ! ೧೨ ಸಾಲುಗಳುಳ್ಳ ಈ ಚಿಕ್ಕ ಆಮಂತ್ರಣ ಪತ್ರಿಕೆಯಲ್ಲಿ ಅರು ತಪ್ಪುಗಳು! ಮರಾಟಿಯಲ್ಲಿರುವ 'ಚಾ' 'ಚೆ' ಗಳಲ್ಲಿರುವ ಭೇದವನ್ನಿವರು ಅರಿಯರು! ಮರಾಟಿಭಾಷೆಯ ಹ್ರಸ್ವ ದೀರ್ಘಗಳ ಕಲ್ಪನೆಯೆಂತಿಲ್ಲ! ಮರಾಟಿಯಲ್ಲಿ ಅನುಸ್ವಾರವೆಲ್ಲೆಲ್ಲಿ ಬೇಕು ಎಲ್ಲಿ ಬರಬಾರದು ಎಂಬ ಜ್ಞಾನವೂ ಇವರಿಗಿಲ್ಲ! ತಮ್ಮ ಸ್ವಂತ ಮಾತೃಭಾಷೆಯಾದ ಕನ್ನಡವನ್ನು ಬಿಟ್ಟು ಇನ್ನೆಂತೆ ತಪ್ಪುಗಳನ್ನೆಣಿಸಿಗೊಂಡ ಪತ್ರಿಕೆಗಳನ್ನು ಮರಾಟಿಯಲ್ಲಿ ಮುದ್ರಿಸಿದರೆ ಇವರಿಗೆ ಬಿವ ಗೌರವವು ಪ್ರಾಪ್ತವಾಗುವದೋ ದೇವರೇ ಬಲ್ಲ. ಹೀಗೆ ಅಜ್ಞಾನಿಗಳು ಮರಾಟಿಯಲ್ಲಿ ಪತ್ರಿಕೆಗಳನ್ನು ಮುದ್ರಿಸಿ, ಅಲ್ಪ ಕಷ್ಟಮುಂದು ಬೇಷ್ಟು ಮಾಡಿಸಿಕೊಳ್ಳುವದೆಂದರೆ ಇಂಥವರನ್ನೇನೆಂದು ಕರೆಯಬೇಕೆಂಬ ಸಂಶಯವು ನಮ್ಮನ್ನು ಪೀಡಿಸುತ್ತಿದೆ. ಇಂಥ ಮಹಾನ್ ಮಹಾನ್ ಕನ್ನಡಿಗರಲ್ಲಿ ಪ್ರಾರ್ಥನೆಯು ಮಾಡಿಕೊಳ್ಳುವದೇನೆಂದರೆ ತಮ್ಮ ಹುಚ್ಚಾಟನೆಯನ್ನು ಮುಂದುಪ್ರಕಾಶದವರಿಗಾಗಿ ಯುಗಾದಿ ತರಗಳಾದರೂ ಸಾಗಿಸಲಿ —ಮುಂಗ

ನಮ್ಮ ಬೆಳಗಾವಿಯ ಪತ್ರಿಕೆಗಳು,

ಇತ್ತಲಿಯ ಮುನಸಿಪಾಲಿಟಿಯವರು ಮುನಿಸಿಪಲ್ಟಿಯು ಆಕರಣೆಯನ್ನು ಮೊದಲಿನಿಂತೆಯೂ ಪೆಟ್ಟಿಗೆ ಬೆಳಸಿ ಬಿಟ್ಟರೆ ಅದು ಕಾರಣ ಕಳೆದವಾರದ ಲೋಕಮಾನ್ಯ ಪತ್ರಿಕೆಯ ಕಳಗೆ ಸಳೆಯಾಕೂಡಿತ್ತು. ಮೊದ ಸಂಪಾದಕರು ಬರೆಯಲು, ಶ್ರೀ ಗೋಪಾಲರಾವ ಮುನಸಿಪಾಲಿಟಿ ಸಭಾಸದರು ಮತ್ತು ಶ್ರೀ ನಂಗುಂಗ ಇತ್ಯಾದಿ ಜನರ ನಿಷೇಧಕರ ಭಾಷಣಗಳಿಂದವು. ಇವರ ಬಿಡಿಸ್ಥ ಶ್ರೀ ಬೊಗೋಸರಾಂ ಕಮರಾತೆ ವಕೀಲ ಮತ್ತು ಶ್ರೀ ವಿ ಎಂದರು ಕಾಂಜಿಯಿಂದ ಇವರ ಭಾಷಣಗಳೂ ಮಾಡ್ಯ ಕೊಪಗೆಯುತ ಎಳೆಕ ಅಗಿ ಮುಂದಿನ ೨ ಮತಗಳು ಬಿದ್ದು ಮುನಸಿಪಾಲಿಟಿಯವರು ಕರವನ್ನು ಬೆಳಸಿದ್ದು ನಿಷೇಧಿಸಲ್ಪಟ್ಟಿತು

ಮುನಸಿಪಾಲಿಟಿಯು ಜನರಲ್ ಮೀಟಿಂಗು ಆಗಿ ಮುಂದಿನ ವಷ೯ದಬಗ್ಗೆ ೨ ಲಕ್ಷದ ಅಂದಾಜು ಪತ್ರಿಕೆಯು ಓದಿ ಮಜೂರ ಮಾಡಲ್ಪಟ್ಟಿತು. ಆಕಳೋಪಯೋಗಿ ಆದೇಶಗಳಿಗೆ ಮುನಸಿಪಾಲಿಟಿಯು ೨೦ ಸಾವಿರ ರೂಪಾಯಿ ಖರ್ಚು ಮಾಡಕೆಕ್ಕೆ ಪರಿದ್ದಾರೆ

ಇತ್ತಲಿಯ ಶರದಬ್ಬಯ ಕಸ, ಕಡ್ಡಿ, ಮುಂತಾದ ಹೊಲಸನ್ನೆಲ್ಲ ಬಯ್ಯಾಪದಕ್ಕಾಗಿ ಪೊಲೀಸರನ್ನು ತೆಗೆಯುವದಕ್ಕೆ ಬಜೆಟಿನಲ್ಲಿ ಹಣವು ಮುಂಜೂರಾಗಿದ್ದರೂ ಸರಕಾರ್ಯಸ್ಥರು ಇಂದಿಂದಿ ಗಳನ್ನು ಕೂಲಿಗೆ ತಜನ ಮೆಂಬರರನ್ನು ಮುಂಬಯಿಗೆ ಕಳಿಸಿರುವರೆಂದು ತಿಳಿಯುತ್ತದೆ.

ಕಿಲ್ಲೇದ ಎದುರಿಗೆ ಇರುವ ಮುನಸಿಪಾಲಿಟಿಯ ಜಕಾತಿಸಾಲೆಯ ಕಾರಕೂನನ್ನು ರಾತ್ರಿ ಯೋರ್ವ ದುಷ್ಟರು ಎಚ್ಚರಗಬ್ಬವಾಗಿ ಬಡಿದು ನಾಳೆಯಷ್ಟಿಲಿ ಅಜಮೂಸು ೧೯೦ ರೂಪಾಯಿ ತಕ್ಕೊಂಡು ಹೋಗಿರುವರೆಂಬ ಕಾರಕೂನನದ್ದು ದವಾಖಾನೆಯಲ್ಲಿ ಹಾಕಿದ್ದರು. ಆದರೆ ಅವನು ಸಂಡಿದನು.

ಮುಂಬಯಿ ಸರ್ಕಾರದವರು ರಾಜೀವಿ ಕಂಪನಿಯವರು ಹೋಲ ಮತ್ತು ಬ್ಯಾನೇಜರ ಗಾಣಿಗಳಿಗೆ ಸೋಡಾ ಲಘೂ ಉಂತಾದವುಗಳನ್ನು ಪೂರ್ತಿ ಇಟ್ಟಿರುತ್ತಾರೆ? ಅವುಗಳ ದರದ ಬೋರ್ಡುಗಳನ್ನೂ ಮಾಡಿರುತ್ತಾರೆ ಅದರೆ ಆ ಸೌಕರರು ಸೋಡಾ ಬಾಟ್ಲಿಗೆ ೧ ಆಣೆ ೩ ಪೈ ಇದ್ದದ್ದಕ್ಕೆ ೨ ಆಣೆ ತಕ್ಕೊಳ್ಳುತ್ತಾರೆ ಪ್ರವಾಸಿಕರು ಬೋರ್ಡನ್ನು ನೋಡಿ ದೋರ್ಡಿನ ಪ್ರಕಾರ ರೊಕ್ಕವನ್ನು ಕೊಡಲು ಹೋದರೆ ಅವರದು ಇಲ್ಲದಿದ್ದರೆ ಹೇಳಿದಷ್ಟು ಹಣಕೊಟ್ಟು ಮೋಸ ಹೋಗಬೇಕಾಗುತ್ತದೆ.

ಸಾಂಗ್ಲಿ ಅರೋಗ್ಯಸಂವರ್ಧಕ ಮಂಡಳಿಯವರು ಅರೋಗ್ಯಕ್ಕೆ ಸಲುವಾಗಿ ಒಂದು ಪುಟಿನಿಯನ್ನು ತಯಾರಮಾಡುವರು. ಕಾರಣ

ಸಂಸ್ಥಾನವಷ್ಟಿಯು ಎಲ್ಲ ಜಾತಿಯ ತರುಣ ವಿದ್ಯಾರ್ಥಿಗಳು ಪೂರ್ಣವಾಗಿ ಸಂಸ್ಥೆಯ ಬಳಕೆಯಾಗಿ ಕ್ಷೇಮಕ್ಕೆ ಕಂಕಣಬದ್ಧರಾಗಬೇಕೆಂದು ತಿಳಿಸಿದ್ದಾರೆ

ನಮ್ಮ ಧಾರವಾಡದ ಪತ್ರವು

ಈ ಮಹಾನಗರದ ಮಾಹಾರಾಷ್ಟ್ರ ವಿದ್ವಜ್ಜನಪ್ರಿಯರಾದ ಗೋವಿಂದ ಹೀನಯ್ಯನವರಲ್ಲಿ ಶುದ್ಧಿಯಾ ಎಂಬ ಮರಾಠಿ ಪತ್ರಿಕೆಯು ಪ್ರಾರಂಭವಾಗಿ ಪತ್ರಿಕಾ ಪ್ರಪಂಚದಲ್ಲಿ ಸುಮಾರು ೩೭೦ ವರ್ಷಗಳಿಂದ ಪ್ರಸಿದ್ಧವಾಗಿದ್ದ ಪತ್ರಿಕೆಯನ್ನು ಹಿಂದೂಧರ್ಮಕ್ಕೆ ಪುನಃ ಕೇಡಿಸಿಕೊಂಡಿದ್ದಕ್ಕಾಗಿ ಅವರನ್ನು ಅಭಿನಂದಿಸುವದಕ್ಕೆ ದಿ. ೧೧ ರಂದು ಧಾರವಾಡ ದೇಶಸ್ಥಾಂಡಿಯವರ ಅಧ್ಯಕ್ಷತೆಯ ಕೆಳಗೆ ಧಾರವಾಡ ಸಾರ್ವಜನಿಕ ಸಭೆಯು ಕರೆದು ಸಂತೋಷ ವ್ಯಕ್ತಪಡಿಸಿತ್ತು

ದೇ ಗಂಗಾಧರರಾವ ದೇಶಪಾಂಡೆಯವರು ಮಾಡಿದ ಮುಂಡಿಗೆಯ ಸಭೆಯು ಕೆಲಂತ್ಯಾಗಿ ಇಷ್ಟಕ್ಕೆ ಬಂದಿದ್ದರು

ಶ್ರೀ ಮಹಾಸ್ವಾ ಸಿದ್ಧಾಂತಶಿರೋಮಣಿ ಸಭೆಯು ಮುಂದಿರಬಹುದಿ ಶ್ರೀ. ಭಾವುರಾವ ಕವಿ ಲಂಬರ ಇವರ ಭಾಷಣಚಿತ್ರದ ಅನಾವರಣ ಸಮಾರಂಭವಾಗಬೇಕಿತ್ತು ಕೇವಲ ಕಾರಣಗಳಿ ಸೂಚಿಸಲು ಮುಂದಕ್ಕೆ ಹಾಕಿ ಬಿಟ್ಟಿದೆ

ಸ್ವಾಮಿ ಕೃಷ್ಣಾನಂದ (ಶ್ರೀ ಕೃಷ್ಣಶಾಸ್ತ್ರಿ ಉಪಾಸನಿಟೆಗೇರಿ) ಇವರ ಪುಣ್ಯತಿಥಿಯು ಏಪ್ರಿಲ್ ತ್ರಯೋದಶಿಯಂದು ಬರುವದು ಅಂದು ಪ್ರಾತಃಕಾಲ ವಿಶೇಷ ಪೂಜೆಯು ನಡೆಯುವುದು

ಮುಂಬೈ ನಿಶ್ಚಯಪತ್ರಿಕೆಯು ಎಲ್ಲ ಏ ಹಾಗೂ ಬಿ. ಏ. ಪರೀಕ್ಷೆಗಳಲ್ಲಿ ಕನ್ನಡದ ಶ ಬೆಗೆ ಶ್ರೀ ಜಹಗೀರದಾರ ದಂಗಾಜಿ ಯವರೂ ಸುಂಠಿ ಹಾಗೂ ಬಿಜಾಪುರ ರಂಗರಾಯರೂ ಕ್ರಮ ಕ್ಷೀತವೂ ನೇಮಿಸಲ್ಪಟ್ಟಿದ್ದಾರೆ

ಕರ್ನಾಟಕ ಪತ್ರಿಕೆಗಳು.

ಕರ್ನಾಟಕದಲ್ಲಿ ಇರ್ವತನರ್ಷವೂ ಕೊಂಚ ಪತ್ರಿಕೆಗಳು ಪ್ರಕಟಿಸಲು ಆರಂಭವಾಗುವದು ಕರ್ನಾಟಕ ಪತ್ರಿಕಾ ಭಿವೃದ್ಧಿಗೆ ಹಿತಕರವಾಗಿರುವುದೆಂದು ಹೇಳಲಾಗುವುದಿಲ್ಲ. ಕರ್ನಾಟಕ ವಾಙ್ಮಯವನ್ನು ಸಮೃದ್ಧಿಪಡಿಸಬೇಕೆಂಬ ಅತ್ಯುತ್ಸಾಹವುಳ್ಳವರು ಕೆಲವರಿದ್ದಾರೆಂದು ಅದರಿಂದ ಅಭಿವೃದ್ಧಿಯಾಗುತ್ತಿದೆಯೇ ವಿನಹ ಕರ್ನಾಟಕ ಪತ್ರಿಕೆಗಳ ಗುಣಸಂವರ್ಧನವು ಆ ಮೂಲಕ ಆಗುತ್ತಿರುವಂತೆ ತೋರಿಬರುವದಿಲ್ಲ. ಪತ್ರಿಕೆಗಳು ಹೆಚ್ಚಿದಂತೆ ಪಾಠಕರಾಗುವ ಈ ಹಲವು ಪತ್ರಿಕೆಗಳಿಗೆ ಸಿಬ್ಬಂದಿ ಪೋಷಣೆಯು ಕಠಿಣವಾಗಿ ಪರಿಣಮಿಸಿರುವದಲ್ಲದೆ ಪತ್ರಿಕಾ ಲೇಖಕರಿಗೆ ಅಭಾವವೂ ಹೆಚ್ಚಾಗಿ ಪತ್ರಿಕೆ ಕಳೆಕಳಿಸಿದ ಲೇಖಕರಲ್ಲಿಯ ತೊಂತೆಗಳೂ ಹೆಚ್ಚಾಗಿ ಬರಬಹುದಾಗಿದೆ.

ಕರ್ನಾಟಕದ ಈ ವಿಶಾಲ ಪ್ರಾಂತಕ್ಕೆ ಈಗ ಇರುವ ಪತ್ರಿಕೆಗಳ ಸಂಖ್ಯೆ ಹೆಚ್ಚಿಲ್ಲ ಮತ್ತು ಅವುಗಳ ಪತ್ರಿಕೆಗಳ ಸಂಪಾದಕರೂ ತಮ್ಮ ತಮ್ಮ ಪತ್ರಿಕೆಗಳನ್ನು ಸಾಧ್ಯ ವಾದಷ್ಟು ಬೆಳ್ಳಗಿನೆಯೇ ಪೋಷಿಸಬೇಕೆಂದು ಸ್ವತಃ ಹಲವಾರು ಸಲ ಪ್ರಯತ್ನಗಳನ್ನು ಅನುಭವಿಸಿ ಯೆಥಾಶಕ್ತಿ ಪ್ರಯತ್ನಮಾಡುತ್ತಿದ್ದೇ ಇರುವರು ಅದರೆ ಕರ್ನಾಟಕ ಪ್ರಾಂತದ ಅನ್ಯವರ್ಗಗಳ ವಿಭಜನೆಗಳು ಕರ್ನಾಟಕದಲ್ಲಿ ಒಂದೇ ಭಾಷೆಯ ಸ್ಥಾಂಬು ಮಾಡುವದಕ್ಕೆ ವಿರೋಧಿಗಳಾಗಿವೆ. ಅದುಕಾರಂದ ಕರ್ನಾಟಕ ಪತ್ರಿಕೆಗಳ ಕಾರ್ಯಕ್ಷೇತ್ರವು ಸಣ್ಣದಾಗಿದ್ದು ಪ್ರತ್ಯೇಕ ಪತ್ರಿಕೆಯಲ್ಲಿ ಉತ್ಪಾದಿತವಾದ ಸಂಪತ್ತಿಯು ಅಡಿಮೆಯಾಗಿ.

ಪತ್ರಿಕೆಗಳು ಬೆಸ್ಸಾಗಿರದೆ ಓದುಗರ ಸಂಖ್ಯೆಯು ಅಧಿಕವಾಗಿದ್ದರೂ ಪತ್ರಿಕೆಗಳು ಉತ್ಪನ್ನವಾಗಿಲ್ಲವೋ ಎಂದು ತೋಚಲಾಗುವುದಿಲ್ಲ. ಕ್ರೈಸ್ತರ ಪತ್ರಿಕೆಗಳಲ್ಲಿ ಕರ್ನಾಟಕ ಕ್ರೈಸ್ತರು ಪ್ರಾಂತದವರು ಪ್ರಾಂತೀಯರಲ್ಲದವರೆಂಬ ವಿಷಯ. ಮಾಧ್ಯಮಿಕ ಶಾಲೆಯ ತೀರ ಮಾಡಬೇಕಾಗಿದೆ. ಅಂಗಾಂಡಿಯವರಲ್ಲಿ ಸಿಂಡಿಕೇಟಿನ ಸಮಾಜದ ಕ್ರಿಯಾಶೀಲತೆಯು ಪ್ರಾಂತೀಯರು ಪ್ರಾಂತೀಯರು ಎಂಬ ಭೇದಾಭಿಪ್ರಾಯ ಇಲ್ಲದಿರುವದು ಕಾರಣವಾಗಿ ಈ ಭಾವನೆಯು ಪತ್ರಿಕಾವಲಯದಲ್ಲಿ ಅಷ್ಟೊಂದು ಉತ್ಸಾಹಿಯಾಗಿರುವದಿಲ್ಲ ಹಾಗೆಯೇ ಪತ್ರಿಕೆಗಳಿಂದಾದ ಜನಜಾಗರಣ ಅಭಾವದ ಕಾರಣದಿಂದ ಪ್ರಾಂತ ಪ್ರಮುಖರು ಪತ್ರಿಕೆಗಳ ಮೂಲಕ ತಮ್ಮ ಅಧಿಕಾರ್ಯಗಳನ್ನು ಪ್ರಕಟಿಸುವದರ ಆವಶ್ಯಕತೆಯನ್ನು ತಾಳುವದಿಲ್ಲ ಅದು ದಿಂದ ಕರ್ನಾಟಕ ಪತ್ರಿಕೆಗಳಿಗೆ ಲಿ ಜನರೂ ಪಕ್ಷವೂ ಒಂದು ಪ್ರಮುಖ ಸಮಸ್ಯೆಯಾಗಿರುತ್ತದೆ ಪತ್ರಿಕೆಗಳು ಇವರ ಕಡೆಗೆ ಗಮನ ಸಲಿಸ್ಸಿದರೆ ಉತ್ಪನ್ನವಿದ್ದಿತು.

ಕರ್ನಾಟಕ ಭಾಷೆಯು ಕರ್ನಾಟಕಕ್ಕೆ ಇಷ್ಟು ಕಡಿಮೆಯೇಕೆ? ಹಿಂದುಸ್ಥಾನದ ಇತರ ಪ್ರಾಂತಗಳಿಗೆ, ಸಾಧಾರಣ ಎಲ್ಲ ಭಾಷೆಗಳೂ ಬರುತ್ತಾದ್ದಾಗಿ ಇರುವುದೆ ಕೇರಳ ಪ್ರಾಂತವು ಇಷ್ಟು ಚಿಕ್ಕ ಪ್ರಾಂತದ ವಲಯಾಳ ಭಾಷೆಗೆ ಸಿಕ್ಕುವ ಪ್ರೋತ್ಸಾಹವನ್ನು ನೋಡಿದರೆ ಆಶ್ಚರ್ಯವನ್ನಿಸುತ್ತದೆ ಕೇರಳ ಪ್ರಾಂತವನ್ನು ಆಸ್ಟ್ರೇರಿಗೆ ರಾಜ ಕೀಯ ವಿಭಾಗಗಳಿವೆ. ಅದರೂ ಮಲೆಯಾಳ ಭಾಷೆಯು ಅಭಿವೃದ್ಧಿಯನ್ನೂ ಕರ್ನಾಟಕ ಭಾಷೆಯು ಅಭಿವೃದ್ಧಿಯನ್ನು ಸರಿ ತೂಗಿಸಿದರೆ ಇದಿಯಾಳ ಭಾಷೆಯಾಗಿದೆ ಕೆಲವು ಪತ್ರಿಕೆ ಅಶ್ಚರ್ಯಾಪಸ್ಮಾಂಟುಮಾಡಿಬಿಟ್ಟಿದೆ. ಅದುವರಿಗೆ ಕರ್ನಾಟಕಕ್ಕೆ ಇಷ್ಟು ವಿಶಾಲ ದೇಶವಿರ ಕ್ರ ಅದೇ ರಾಜಕೀಯ ವಿಭಾಗಗಳು ಇಲ್ಲಿಯು ಇಷ್ಟು ಕೆಲಸ ಮಾಡಿಸಿದೆಂದು ಹೇಳಲಾಗುವದಿಲ್ಲ

ಇಂತಹ ಪರಿಸ್ಥಿತಿಯಲ್ಲಿ ಪತ್ರಿಕೆಗಳು ತಮ್ಮ ಶಕ್ತಿಯನ್ನು ಒಟ್ಟುಗೂಡಿಸಿದ್ದಾ ಅವಶ್ಯಕತೆಯಿದೆ. ಪತ್ರಿಕೆಗಳ ಕೆಲವು ಇತರ ಸಮ್ಮೇಳನಗಳ ವಿಚಾರಣೆಯನ್ನು ನೋಡಬಹುದು ಪೂರ್ತಿಯೇ ಆಗ್ಲಿ. ತಮ್ಮದೊಂದು ಸಮ್ಮೇಳನವನ್ನು ರಚಿಸಬೇಕು ಇಷ್ಟರ ಪರಿಣಿ ಈ ಕಂಡ ಸಮ್ಮೇಳನವು ಸಾಧ್ಯವಾಗಲಿಲ್ಲವೆಂಬುವುದು ವಿಷಾದಕರವು ಪತ್ರಿಕಾಕರ್ತರು ಇದಕ್ಕಾಗಿ ಪ್ರಯತ್ನ ಮಾಡಿದ್ದರೆ ಈ ಸಮ್ಮೇಳನವು ಸಾಧ್ಯವಾಗದೇಲಾ ಕಾರಣವಾಗಿರಬಹುದು.

ಕರ್ನಾಟಕ ವಿದ್ಯಾರ್ಥಿಯು ಬರೇ ವೈಯಕ್ತಿಕ ದೃಷ್ಟಿಯಿಂದಾಗ್ಲಿ ಅಥವಾ ವಾಙ್ಮಯದ ದೃಷ್ಟಿಯಿಂದಾಗ್ಲಿ ಪತ್ರಿಕೆಗಳು ಸುಧಾರಿಸಬೇಕಾಗಿದೆ ಅವಶ್ಯಕತೆಯು ಪತ್ರಿಕಾಕರ್ತರದಾಗಿದೆ ಪ್ರಜಾಪ್ರತಿನಿಧಿಗಳಾದ ಸಭಾಸದರಿಂದ ಅಗತ್ಯವಾಗಿ ಪತ್ರಿಕೆಗಳು ಸ್ವೀಕೃತವಾಗಬೇಕಾದರೆ ಪತ್ರಿಕೆಗಳು ಉತ್ತಮ ಗತಿಯಲ್ಲಿ ಪತ್ರಿಕಾಕರ್ತರು ಸಹಕರಿಸಲು ಸಿದ್ಧರಿದ್ದಾರೆಯೆ ಎಂಬುದೊಂದು ಪ್ರಶ್ನೆಯು ಹಲವು ಪತ್ರಿಕಾಕರ್ತರನ್ನು ಪ್ರಶ್ನಿಸಿದಾಗ ಅವರಿಂದ ಸಿಕ್ಕಿದ ಉತ್ತರವನ್ನು ಕೆಳಕಂಡ ಸಂಕ್ಷೇಪದಲ್ಲಿ ಕೊಡಲಾಗಿದೆ. –ಸಂಪಾದಕರು.

ರಂಗಭೂಮಿಯ ಸಮಾಚಾರ

ಅಂಬಾಪ್ರಸಾದಿಕ ಸಂಗೀತ ಮಂಡಳಿಯವರು ಸಾಗರಕ್ಕೆ ಹೋಗಿದ್ದಾರೆ

ಗುಬ್ಬಿ ಚನ್ನಬಸವೇಶ್ವರ ನಾಟಕದವರು ಚಾಮರಾಜನಗರದಲ್ಲಿದ್ದು, ಅಲ್ಲಿಯ ರಸಿಕರಿಂದ ಚನ್ನಾಗಿ ಪ್ರೋತ್ಸಾಹಿಸಲ್ಪಡುತ್ತಿದ್ದಾರೆ.

ಗುಬ್ಬಿಯವರ ಶಾಖಾ ನಂ. ೧ ಬಾಲಕಲಾ ವರ್ಧನ[illegible] ವರು ಗುಬ್ಬಿಯಲ್ಲಿಯೂ, ಶಾಖಾ ನಂ ೨ ಲಲಿತಕಲಾ ವರ್ಧನಿಯವರು ಹರೀರಪೇಟೆಯಲ್ಲಿಯೂ ಇದ್ದಾರೆ.

ಸೋಜಿಗದ ಸುದ್ದಿ.

ಅಮೇರಿಕೆಯಲ್ಲಿ ೧೫ ವರ್ಷದ ಓರ್ವ ಹುಡುಗನಿದ್ದಾನೆ. ಅವನ ತೂಕವು ೬೦೦ ಪೌಂಡು ಇದ್ದು, ಅವನು ೬ ಫೂಟ್ ೪ ಇಂಚು ಎತ್ತರವಾಗಿದ್ದಾನೆ. ಅವನ ಹೊಟ್ಟೆಯ ಫೂಟು ೧೫ ಇಂಚು ಇದೆ.

ಕರ್ನಾಟಕದ ಏಕೀಕರಣವು

ತಿಕೆಯ ಪ್ರಕರಣ. (ಮುಂದುವರಿದ್ದು)

ರಾಷ್ಟ್ರೀಯತ್ವದ ಪ್ರಶ್ನೆ.

ಶ್ರೀ ಕೇಳಕರವರ ಸಂಪಾದಕತ್ವದಲ್ಲಿದ್ದರೂ 'ಕೇಸರಿ' ಪತ್ರದಲ್ಲಿ ಈ ಬಗೆಯ ಅಲ್ಪೇಪಗಳು ಕೊರತೆಯಲು ಕೇವಲ ಸ್ವಾರ್ಥವೇ ಕಾರಣವಾಗಿದೆಂಬುದು ಸ್ಪಷ್ಟವಿದೆ. 'ಮಹಾರಾಷ್ಟ್ರದ ಪರ್ಯಾಸ್ಸು ಕರ್ನಾಟಕದಲ್ಲಿ ಮೊದಲಿಪಂತೆ ನಡೆಯುವದಿಲ್ಲವಲ್ಲ!' ಎಂಬ ಚಿಂತೆಯು ಮರಾಟಿಗರನ್ನು ಅವರಿಸಿಕೊಂಡಿದೆ. ಅದ್ದರಿಂದಲೇ ಕರ್ನಾಟಕಕ್ಕೆ ಕಾಂಗ್ರೆಸ್ಸಿನಿಂದ ಪ್ರತ್ಯೇಕ ಪ್ರಾಂತವ ದೆ ಕೆತಪ್ಪನ್ನು ರೋಗ-ಹಿತವಾಗಿದ್ದರೆ ಮಾತ್ರ ಅವನಿಗೆ ಆರೋಗ್ಯದ ಸುಖವು ದೊರೆಯುವದೋ, ಅದೇ ಪ್ರಕಾರ ರಾಷ್ಟ್ರದ ಪ್ರತಿ ಅಂಗವಾದ ಪ್ರತಿಯೊಂದು ಪ್ರಾಂತವು ಪುಷ್ಟವಾಗಿದ್ದರೆ ಮಾತ್ರ ಆ ರಾಷ್ಟ್ರವು ಸಂಪೂರ್ಣವಾದ ರಾಷ್ಟ್ರೀಯತ್ವದ ಭಾರವನ್ನು ಹೊರಲು ಸಿದ್ಧವಾಗುವದು. ಇದಕ್ಕೆ ಕರ್ನಾಟಕವೇ ಪ್ರತ್ಯಕ್ಷವಾದ ಉದಾಹರಣೆಯಾಗಿದೆ. ಕಾಂಗ್ರೆಸ್ಸಿನಿಂದ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವು ದೊರೆಯದ ಪೂರ್ವದಲ್ಲಿ ಮುಂಬೈ ಮದ್ರಾಸ ಇಲಾಖೆಗಳ ಪ್ರಾಂತಿಕ ಕಾಂಗ್ರೆಸ ಕಮೀಟಿಗಳಲ್ಲಿ ಕರ್ನಾಟಕವು ಹುಜಲ್ಯಟ್ಟಿತ್ತು. ಆಗ್ಗೆ ಕರ್ನಾಟಕದ ಹೆಸರು ಭಾರತೀಯರಿಗೆ ಸಹ ಗೊತ್ತಿರಲಿಲ್ಲ. ಕನ್ನಡಿಗ ಸ್ವತಂತ್ರವಾದ ಕರ್ತೃತ್ವಶಕ್ತಿಗೆ ಅಪ್ಪದವೂ ಇರಲಿಲ್ಲ. ಇದರಿಂದ ಕರ್ನಾಟಕದಲ್ಲಿ ಸಾರ್ವಜನಿಕ ಕಾರ್ಯಗಳ ಬಗ್ಗೆ ಹೆಚ್ಚಾದ ಆಸ್ಥೆಯೂ ಎಲ್ಲಿಕಡೆಗೆ ನೆಲೆಗೊಂಡಿರಲಿಲ್ಲ. ಅಂದರೆ ಕರ್ನಾಟಕವು ರೋಗಗ್ರಸ್ತವಾಗಿದ್ದಿತು. ಆದರೆ ನ್ಯಾಷನಲ್ ಕಾಂಗ್ರೆಸ್ಸಿನ ನಂತರ ಕರ್ನಾಟಕದ ಹೆಸರು ಭರತಖಂಡದಲ್ಲೆಲ್ಲ

'ಕನ್ನಡಿಗ'ನ ಹೊಸ ವರ್ಷ.

ಈ ಸಂಚಿಕೆಗೆ "ಕನ್ನಡಿಗ"ನ ೩ನೇ ವರ್ಷವು ಮುಗಿಯಿತು. ೪ನೇ ವರ್ಷವು ಮುಂದಿನ ಸಂಚಿಕೆಯಿಂದ ಪ್ರಾರಂಭವಾಗುವದು. ಹೊಸ ವರ್ಷದಲ್ಲಿ ಯ ಧಾಪ್ರಕಾರವಾಗಿ ಕನ್ನಡಿಗನ ಭಿಟ್ಟಿಯನ್ನು ಕೇಳ್ಪೆರುವವರು. ರು. ೧-೦೪-೦ ಕೂಡಲೇ ಮನಿಯಾರ್ಡರದಿಂದ ಕಳುಹಿಸುವದುತ್ತಮ. ಮನಿಯಾರ್ಡರಿಂದಿಂದ ಚಂದಾ ಹಣ ಸ್ವೀಕರಿಸದೆ ಕೇವಲ ವಿ.ಪಿ. ಪತ್ರವು ಚಂದಾದಾರರಿಗೆ ತಗಲಿ ೧-೦೪-೦ ದದ್ದ 'ಕನ್ನಡಿಗ'ನು ಒಂದು ವರ್ಷ ದೊರೆಯುವದು. ಆದರೆ ವಾರ್ಷಿಕ ಬಾಕಿಯೇ ತಮ್ಮ ನೋಡಿಗಾಗಿ ಮನಿಯಾರ್ಡರದಿಂದ ಚಂದಾ ಹಣ ಬರದಿದ್ದರೆ, ಇಪವಾ ಮನಿಯಾರ್ಡರದಿಂದ ಚಂದಾ ಕಳಿಸಿದ ಬಗ್ಗೆ ಸೂಚನೆಯಾ ನವುಗೆ ಕಾರ್ಯಾಲಯದಲ್ಲಿ ತಲ್ಪಿದಿದ್ದರೆ, ವಾರ್ಷಿಕ ತಿರಗಳಿ ಕಳಿಯು ವಾರದಲ್ಲಿ ಚಂದಾ ಅವಧಿಯು ಮುಗಿದ ಎಲ್ಲ ಚಂದಾದಾರರಿಗೂ ವಿ. ಪಿ ಗಳು ಕಳಿಸಲ್ಪಡುವವು ವಿ.ಪಿ. ಯಿಂದ ಚಂದಾದಾರರು ರು. ೨—೩—೦ ಕಳಿಸಬೇಕಾಗುವದೆಂದು ಹೆಚ್ಚಿಗೆ ೪ ಆಣೆ ವೆಚ್ಚವು ವಿನಾಕಾರಣವಾಗಿ ಚಂದಾದಾರರಿಗೆ ತಗಲುವದು ಆದುದರಿಂದಲೇ ಮನಿಯಾರ್ಡರದಿಂದ ಚಂದಾ ಹಣ ಸ್ವೀಕರಿಸಲಿಕ್ಕಾಗಿ ಅಗ್ರಹವು ಇಷ್ಟವಿದೆ.

ಇನ್ನು ಯಾರಿಗೆ 'ಕನ್ನಡಿಗ'ನ ಭಿಟ್ಟಿಯು ಲಕ್ಷ್ಯಕ್ಕೆ ಬಿಲ್ಲವೋ ಅವರು ತನ್ನು ಕಡೆಗೆ ಒಂದು ಮುಂದಿನ ವಾರದ ಸಂಚಿಕೆಯನ್ನು ಸ್ವೀಕರಿಸಲೇ ದಯವಿಟ್ಟು ಹಾಗೇ ನವುಗೆ ಮುಂಚಿ ಕಳುಹಿಸಿದರೆ ನಮ್ಮ ವೇಳೆ ಮತ್ತು ಕಾಗದಗಳನ್ನು ಮಾಡಿದಂತಾಗುವದು

ವ್ಯವಸ್ಥಾಪಕರು.

ಸಹ ಇವರ ಮನಸ್ಸಿಗೆ ಒಂದಿಲ್ಲ ಹೀಗೆ ತಮ್ಮ ಜೇಳೆ ಜೇಪು ದಂಥ ಕಾರ್ಯವು ಕಾಂಗ್ರೆಸಿನಿಂದ ಒದಗಿ ಬಂತೆಂದು ಖುಸುಗರೆದು ಕಾಂಗ್ರೆಸಿನ ವೇಳೆ 'ಕೇಸರಿ'ಯು ಪರಿಪಾಯ್ದಿದೆಂಬುದನ್ನೂ ಈ ಬಗ್ಗೆ ಸರಕಾರದ ಬೆನ್ನು ಸಹ ಜಪ್ಪರಿಸಿರುವದೆಂಬುದನ್ನೂ 'ಸಿಲ್ಲ ತನಯ'ನು ವೇಳೆ ತಪ್ಪ ಲೇಖನದಲ್ಲಿ ಸ್ಪಷ್ಟೀಕರಿಸಿದ್ದಾನೆ. ಇದರಿಂದ 'ಕೇಸರಿ'ಯ ಹಾಗೂ ಮರಾಟಿಗರ ಸ್ವಾರ್ಥತನವು ಸಿದ್ಧವಾಗುತ್ತದೆ

ಇನ್ನು ಈ ಸ್ವಾರ್ಥ-ರಾಯಣರ ದೃಷ್ಟಿಯನ್ನು ಬಿಟ್ಟು, ರಾಷ್ಟ್ರೀಯ ದೃಷ್ಟಿಯಿಂದ ನೋಡಿದರೂ ಸಹ ಏಕೀಕರಣವಾಗಲೇ ಬೇಕೆಂಬುದು ಗೊತ್ತಾಗುತ್ತದೆ. ಭರತಖಂಡಕ್ಕೆ ಸಂಪೂರ್ಣ ರಾಷ್ಟ್ರೀಯತ್ವದ ಸ್ವರೂಪವು ಭಾಷಾನ್ವಯ ಪ್ರಾಂತರಚನೆಯಿಂದಲೇ ಬರುವದು. ಯಾಕಂದರೆ ಈ ಒಗೆಯ ರಚನೆಯಿಂದ ರಾಷ್ಟ್ರದ ಅಂಗಗಳಾದ ಪ್ರತಿ ಪ್ರಾಂತಗಳು ಪುಷ್ಟಿಯನ್ನು ಹೊಂದಲು ಅವಕಾಶವುಂಟಾಗಿ ರಾಷ್ಟ್ರಪುರುಷನು ಸದೃಢಕಾಯದವನಾಗುತ್ತಾನೆ. ಯಾವ ಒಗೆಯಿಂದ ಮನುಷ್ಯನ ಪ್ರತಿಯೊಂದು ಅಂಗವು ಕೇಸಬಡತೊಡಗಿತು. ಕನ್ನಡಿಗರ ಬುದ್ಧಿಶಕ್ತಿಯನ್ನು ಹೊರಗೆಡಹಲು ಅನುವು ದೊರೆಯಿತು. ತನ್ನ ಕರ್ತೃತ್ವಶಕ್ತಿಯನ್ನು ಜಗತ್ತಿಗೆ ತೋರಿಸಲು ಕರ್ನಾಟಕಕ್ಕೆ ಅವಕಾಶವಾಯಿತು. ಭಾರತ ರಾಷ್ಟ್ರದಲ್ಲಿ ಹೆಸರಿಲ್ಲದೇ ಹೋಗಿದ್ದ ಕರ್ನಾಟಕವೆಂಬ ಅಂಗವು ಪ್ರಬುದ್ಧವಾಗಲು ಮಾರ್ಗದೊರೆತು, ಭಾರತ ರಾಷ್ಟ್ರಪುರುಷನ ಬಲವು ಬೆಳೆಯಲು ಒಳ್ಳೇ ಸಮಯವೂ ಉಂಟಾಯಿತು. ಕರ್ನಾಟಕದ ಉದಾಹರಣೆಯನ್ನು ಮಾತ್ರ ನಾವಿಲ್ಲಿ ಕೊಟ್ಟಿರುವೆವು. ಕರ್ನಾಟಕದಂತೆ, ಉತ್ಕಲ, ಮಲಿಯಾಳಂ ಮೊದಲಾದ ಪ್ರಾಂತೀಯರಲ್ಲಿಯೂ ಆತ್ಮೀಯತೆಯು ಜಾಗ್ರತೆಯಾಗಿ ಭಾರತ ರಾಷ್ಟ್ರಪುರುಷನ ಆಲ ಅಂಗಗಳಲ್ಲಿ ಒಲವು ಉಳ್ಳೇರಲು ಪ್ರಾರಂಭಿಸಿತು.

ಇನ್ನು ಎರಡನೇ ವಿಧಾನ. ನಾಳೆ ದಿನವೇ ಹಿಂದುಸ್ಥಾನಕ್ಕೆ ಸ್ವರಾಜ್ಯವು ದೊರೆಯುತೆಂದು ಕಲ್ಪಿಸುವಾ. ಆಗ್ಗೆ ಭರತಖಂಡದ ಬಿಟಿಷ ಬಂಗಾಲ, ಗುಜರಾತ, ಮಹಾರಾಷ್ಟ್ರ ಮುಂತಾದ ಬಲಿಷ್ಠ ಪ್ರಾಂತಗಳಿಗೆ ಮಾತ್ರ ಅದರ ಸಂಪೂರ್ಣ ಕಾಧಕತ್ವ ದೊರೆಯುವದೆ ಹೊರ್ತಾಗಿ ಕೋಗಗ್ರಸ್ತವಾಗಿದ್ದ ಹಿಂದುಳಿದ ಪ್ರಾಂತಗಳಿಗೆ

ಸ್ವರಾಜ್ಯದ ಸವಿಫಲಗಳು ದೊರೆಯಲಾರವು. ಇದನ್ನು ಸಿದ್ಧ ಪಡಿಸಲು ಪ್ರತ್ಯಕ್ಷ ಉದಾಹರಣೆ ಬೇಕಾಗಿದ್ದರೆ ಕರ್ನಾಟಕದ ಉದಾಹರಣವನ್ನೇ ಮತ್ತೆ ಕೊಡಬಹುದು. ಗಾರ್ಡನೇ ಇನ್ಸ್ಟಿಯ ಸ್ಥಾಪನೆಯಿಂದ ಈಲವಾದರೂ ರಾಜಕೀಯ ಸೌಕರ್ಯಗಳು ಭಾರತೀಯರಿಗೆ ದೊರೆತವು. ಇವುಗಳ ಉಪಭೋಗವನ್ನು ಅನ್ಯ ಕ್ರಾಂತದವರು ಮಾಡುತ್ತಿದ್ದರೂ ಕನ್ನಡಿಗರಿಗೆ ಇದರ ಕೆಲವು ಅಂಶವು ಸಹ ದೊರಯುತ್ತಿಲ್ಲ. ೧೧ ಲಕ್ಷ ಜನಸಂಖ್ಯೆಯುಳ್ಳ ಬೆಳ್ಗಿಗಳಿಗೆ ಮುಂಬೈ ಇಲಾಯೆಯಲ್ಲಿ ೩ ಜನ ಪ್ರತಿನಿಧಿಗಳನ್ನು ಮುಂಬೈ ಶಾಸನದ ಮಂಡಲಕ್ಕೆ ಕಳುಹಿಸುವ ಅಧಿಕಾರವಿದೆ ಯಷ್ಟೇ! ಆದರೆ ಧಾರವಾಡ ಜಿಲ್ಲೆಯ ಜನಸಂಖ್ಯೆಯು ೧೧ ಲಕ್ಷಕ್ಕೆ ಏಕ್ಕಿನ್ನೂ ಇಬ್ಬರೇ ಪ್ರತಿನಿಧಿಗಳನ್ನು ನಾವು ಕಳಿಸಬೇಕಂತೆ! ಮಹಾರಾಷ್ಟ್ರ, ಗುಜರಾತಗಳಿಗೆ ಮಂತ್ರಿಗಳನ್ನು ಒದಗಿಸಿಕೊಡುವ ಸೌಕರ್ಯ ದೊರೆತಿದೆ. ಆದರೆ ಕರ್ನಾಟಕಕ್ಕೆ ಆ ಸೌಕರ್ಯವೇ ದೊರೆಯುವುದಂತಿಲ್ಲ. ಮಹಾರಾಷ್ಟ್ರ ಗುಜರಾತ, ಸಿಂಧಗಳ ಪ್ರತಿನಿಧಿಗಳು ಮುಂಬೈ ಸರಕಾರದ ಕಾರ್ಯಕಾರೀ ಮಂಡಲಗಳಲ್ಲಿರಲು ಅವಕಾಶವಾಗುತ್ತದೆ; ಆದುದಿಂದ ನೀರಾ, ಸಕ್ಕೂರಗಳಂಥ ಕಾಲುವೆಗಳನ್ನು ಕಟ್ಟಿಸಿ, ಆ ಆ ಪ್ರಾಂತಗಳಲ್ಲಿಯ ಜನರಿಗೆ ನೀರಿನ ಪೂರೈಕೆ ಮಾಡಿಕೊಂಡು ಬೇಕೆಂದು ಸರಕಾರಕ್ಕೆ ಒತ್ತಾಯ ಪಡಿಸಲು ಆ ಮಹನೀಯರಿಗೆ ಅವಕಾಶವಿರುತ್ತದೆ ಆದರೆ ಕರ್ನಾಟಕದಿಂದ ಯಾವ ಜನರನ್ನೂ ಕಾರ್ಯಕಾರೀ ಮಂಡಲಕ್ಕೆ ಸರಕಾರವು ಆರಿಸುವ ದಿಲ್ಲ; ಸಹಸ್ರಾವಧಿ ಜನರು ನೀರಿಲ್ಲದೇ ಬಾಗಲಕೋಟೆಯಿಂದ ನೆಲಲು ತ್ತಿದ್ದರೂ ಅನೇಕ ನದಿಗಳು ಕರ್ನಾಟಕದಲ್ಲಿ ಹರಿಯುತ್ತಿದ್ದರೂ, ಇಲ್ಲಿ ಕೆರೆ ಕಾಲುವೆಗಳನ್ನು ಕಟ್ಟಿಸುವದು ಸರಕಾರಕ್ಕೆ ರುಚಿಸುವ ದಿಲ್ಲ; ಮತ್ತೂ ಅವರಿಗೆ ರುಚಿಸದಿದ್ದರೂ ಒತ್ತಾಯಪಡಿಸಲು ಕಾರ್ಯಕಾರೀ ಮಂಡಲದಲ್ಲಿಯೂ ಮುಂಬೈಯಲ್ಲಿದ್ದ ಸರಕಾರದ ಅಧಿಕಾರಿಗಳಲ್ಲಿಯೂ ಕನ್ನಡಿಗರ ಸಮಾವೇಶವಾಗುವಂತಿಲ್ಲ. ಕರ್ನಾಟಕದಿಂದ ಸರಕಾರಕ್ಕೆ ಖರ್ಚಿನಕಿಂತ ಜಾಸ್ತಿಗೆ ಉತ್ಪನ್ನ ಬಿದ್ದರೂ ಆದನ್ನು ಕನ್ನಡಿಗರ ಸುಖಸೌಕರ್ಯಗಳಿಗಾಗಿ ಉಪಯೋಗಿಸದೇ ಅನ್ಯಪ್ರಾಂತಗಳ ಕಡೆಗೆ ಏನಿಯೋಗಿಸುವರು. ಮತ್ತೂ ಕರ್ನಾಟಕದ ಕೆರೆ ಕಾಲುವೆಗಳಿಗಾಗಿ ಹಣವಿಲ್ಲವೆಂದು ಸರಕಾರದವರು ಸಾಧಿಸುತ್ತಿರುವದೆಂಬದು ನಮ್ಮೆಲ್ಲರ ಅನುಭವಕ್ಕೆ ಬಂದುಸಾಗಿವೆ. ಇದರಿಂದ ಕರ್ನಾಟಕ ಪ್ರಾಂತದ ಬೆಳವಣಿಗೆಗೆ ಬಹು ಅಡಚಣೆಯಾಗಿದೆ. ಹೀಗೆ ಅಡಚಣೆಯಿಂದ ತೊಳಲಾಡುತ್ತಿರುವಾಗ್ಯೆ ಭಾರತೀಯ ರಾಷ್ಟ್ರದ ಒಂದು ಅಂಗವು ಕೊಳೆತು; ರಾಷ್ಟ್ರಕ್ಕೆ ಭ್ಯುದಯಕ್ಕೆ ಕುಂದು ಬಂದಿದೆ. ಆದರೆ ಪ್ರತಿಯೊಂದು ಭಾಷೆಯವರಿಗೆ ಪ್ರತ್ಯೇಕ ಪ್ರಾಂತವಿದ್ದರೆ ಅವರು ಸರ್ವತೋಮುಖವಾಗಿ ಪ್ರಗತಿಯನ್ನು ಹೊಂದಿ ಬಲಶಾಲಿಗಳಾಗಿ, ಭಾರತ ರಾಷ್ಟ್ರದ ಶಕ್ತಿಯನ್ನು ವೃದ್ಧಿಗೊಳಿಸಲು ಅನುಕೂಲವಾಗುತ್ತದೆ.

ವಿಜಾಪುರ ಜಿಲ್ಲೆಯ ಸುದ್ದಿಗಳು.

(ನಮ್ಮ ಸುದ್ದಿಗಾರರಿಂದ)

ವಿಜಾಪುರ ಕರ್ನಾಟಕ ಭೂಷಣ ಕೌಜಲಗೀ ಶ್ರೀನಿವಾಸರಾಯರು ಹೊಸಕೊಪ್ಪದ ಸಭೆಗೆ ಹೋದವರು ಮರಳಿ ಬಂದು ೩।೪ ದಿನಗಳಾದವು. ಮೈಸೂರ ಪ್ರಾಂತದಲ್ಲಿ ಕೆಲವು ಭಾಗಗಳನ್ನು ಸಂದರ್ಶಿಸಿ, ವ್ಯಾಯಾಮ ಶಾಲೆಗಾಗಿ ಧನಸಹಾಯದ ಪ್ರಯತ್ನ ಮಾಡಿದ್ದಾರೆ. ಮೇ ತಿಂಗಳಲ್ಲಿ ಮತ್ತೆ ಮೈಸೂರ ಕಡೆಗೆ ಹೋಗ ತಕ್ಕವರಾದ್ದಾರೆ. ಶ್ರೀಂಗೇರಿ ಮಠದ ಪ್ರೀ ಶ್ರೀ ಸ್ವಾಮಿಗಳನ್ನೂ ಕಂಡು, ವ್ಯಾಯಾಮ ಶಾಲೆಗಾಗಿ ಅವರಿಂದ ಆಶೀರ್ವಾದವನ್ನೂ ದೊರಕಿಸಿದ್ದಾರೆ ಶ್ರೀಗಳವರು ಧನಸಹಾಯವನ್ನಾಡಲು ಸಹ ಒಪ್ಪಿರುವಂತೆ ಉಳಿದ ಮಹಾಧೀಶರೂ ತಮಗೆ ಮಾಡಿಯೇ ಈ ಸವಿತ್ರಕಾರ್ಯಕ್ಕೆ ತನ್ಮ ತಮ್ಮ ಬೆಂಬಲವನ್ನೀಯುವರಾಗಿ ನಾವು ಆಶಿಸುತ್ತೇವೆ

ತಿ. ತಿ. ಕಲೆಕ್ಟರ ಉತ್ತರಭಾಗ ಇವರ ಪ್ರವಾಸಕ್ರಮವು:- ೨೦ ರಿಂದ ೨೩ ಆಗರಖೇಡ; ೨೪—೨೭ ಮಿರಾಗಿ; ೨೮. ೩೧ ಬಳಗಾನೂರು; ೧-೪—೭ ರಿಂದ ೭; ಸಿಂದಗಿ, ೮-೧೦ ಜೊವ್ಹಾಣಗಿ ೧೧-೧೫ ದೇವರಹಿಪ್ಪರಗಿ.

ತಿ. ತಿ. ಕಲೆಕ್ಟರ ದಕ್ಷಿಣ ಭಾಗ ಇವರ ಪ್ರವಾಸ ಕ್ರಮವು:- ೧೭-೨೦ ಹುಲ್ಲೇಕೇರಿ ೨೧—೨೫ ಕೆರೂರು.

ಬಾಲಲೀಲಾ ತಾ॥ ೭-೩-೨೮ ದಿವಸ ಸಂಜೆ ೪॥ ಗಂಜೆಗೆ ನಿಶ್ಚಲಚಿತ್ತ ಒನವಸ್ಪ ಬಾಡೋಲ ಮಾಸ್ತರರ ಅನ್ಯೋನ್ಯತೆಯುಕೆಳಗೆ ಬಾಜಾರದಲ್ಲಿ ವೇ॥ ಗುರುಕಾಂತಶಾಸ್ತ್ರಿ ಆಲಮಟ್ಟಿ ಇವರು ಧಾರ್ಮಿಕ ನೈತಿಕ ವಿಷಯಗಳ ಮೇಲೆ ಭಾಷಣ ಮಾಡಿದರು. ಹೆಂಗಸರು ಸಹಿತ ಏಳುನೂರು ಜನರು ಕೂಡಿದ್ದರು ಇಹ ಮತ್ತು ಪಂಬಾರು ಬಿಡುವೆವೆಂದು ಶಾಸ್ತ್ರಿಗಳವರಿಗೆ ೩೧ ಜನರು ಹೆಸರು ಕೊಟ್ಟರು. ಅವರಲ್ಲಿ ಒಬ್ಬನು ಮೂಕನಿದ್ದನೆ. ಈ ಊರಲ್ಲಿ ಇಂಥ ಸಭೆಯಾದದ್ದು ಇದೇ ಮೊದಲನೆಯದು.

ಬದಾಮಿ ಈ ಊರ ಜನ ಸಂಖ್ಯೆಯು ೫ ಸಾವಿರ ಇದ್ದರೂ ೧೦-೧೧ ಜಪಾದ ಅಂಗಡಿಗಳೂ ಮತ್ತೆ ಅಷ್ಟೇ ಬೀಡೀ ಅಂಗಡಿಗಳೂ ಅವೆ. ಇವುಗಳಲ್ಲಿ ಪೆಟ್ರೊಲ್ಯಮ್ಯಸ್ಸ ದೀವಿಗೆಗಳು ರಾತ್ರಿಯಲ್ಲ ತಮ್ಮ ಪ್ರಕಾಶದಿಂದ ಮೆರೆಯುತ್ತಿರುವವು. ಇದರಿಂದ ಈ ಊರು ದೊಡ್ಡ ಶಹರವೆಂದು ಹೊರಗಿನಿಂದ ಒಂದನವರಿಗೆ ಅನಿಸುತ್ತಿದ್ದರೂ ಸ್ವಲ್ಪ ಮುಂದಕ್ಕೆ ಬಾಜಾರದಲ್ಲಿ ಹೊಕ್ಕ ಕೂಡಲೆ ದೀಪಕಾಣದ ಅಂಗಡಿಗಳನ್ನೂ ಗಿರಾಕಿಗಳಿಲ್ಲದ ಅಂಗಡಿಗಳನ್ನೂ ನೋಡಿ ಮನಸ್ಸಿಗೆ ಖೇದವೆನಿಸುವದು. ಇದಕ್ಕೆಲ್ಲ ಕಾರಣವೆಂದರೆ ಜನರೇ. ಆಧುನಿಕ ಸುಖಕ್ಕಾಗಿ ದ್ರವ್ಯ ವ್ಯಯಮಾಡಿಕೊಂಡು ಇರುವದಲ್ಲದೆ ಮತ್ತೇನು? ಸಮ್ರಾಟ್ ಮೀಕೇಶಿ ಮಹಾರಾಜ ರಾಜಧಾನಿಯಾಗಿದ್ದಕಾಲದಲ್ಲಿ ಈ ಪಟ್ಟಣವು ಹೇಗಿನ್ನಿತ್ತೋ ಅದನ್ನು ನಾವಾರಿಯವು ಆದರೆ ನನ್ನ ನೋಸುವಿಕೆಯಲ್ಲಿಯೇ ಭರಾಟೆಂದ ನಡೆದ ಅಂಗಡಿಗಳು ದೀಪಕಾಣದಂತಾದವನ್ನು ನೋಡಿ ಖೇದನೆನಿಸುವದು!

ನಮ್ಮ ಹುಬ್ಬಳ್ಳಿಯ ಪತ್ರ

ಮುಂಬಯಿಂದ ಪೃಥ್ವಿ ಪ್ರದಕ್ಷಿಣೆಯನ್ನು ಮಾಡಲು ಹೊರಟಿರುವ ಮೂವರು ಸಾಯಕಲ್ ಪಾಷನದವರು ಬಂದು ವಿಜಾಪುರ್ನ ಕಡೆಗೆ ಹೋದರು. ಅವರಿಗೆ ಅಂಜುಮನ್ ಸನ್ಮಾನದವರು ೧೫ ರೂ. ಬಹುಮಾನವನ್ನು ಕೊಟ್ಟರು.

ಶ್ರೀ ಶಿವಜಯಂತಿ ಉತ್ಸವದ ಮೇಲಾಟಗಳಲ್ಲಿ ನಾರಿಗಳ ವಿದ್ಯಾರ್ಥಿಗಳು ಭಾಗತೆಗೆದುಕೊಳ್ಳುವದಕ್ಕೆ ಒಂದು ಅಜ್ಞಾಪತ್ರಿಕೆಯನ್ನು ತೆಗೆಯಬೇಕೆಂದು ವಿನಂತಿಯನ್ನು ಮಾಡಿಕೊಂಡಾಗ್ಯೆ ಸ್ಕೂಲ ಬೋರ್ಡಿನವರು (ಇವರು ಉತ್ಸವ ಮಂಡಳದ ಮೆಂಬರರು

ವರು) ಇಂದು ನಾಳೆ ಎಂದು ಅನ್ನತ್ತ ತೆಗೆಯದೆ ಇದ್ದದ್ದು ಯಾವ ಅಂಜಿಕೆಯಿಂದಲೋ ತಿಳಿಯದಾಗಿದೆ. ಧಾರವಾಡದ ಸರಕಾರೀ ಸಾಲೆಯವರು ಮೇಲಾಟದಲ್ಲಿ ಭಾಗತೆಗೆದುಕೊಳ್ಳವದಕ್ಕೆ ಅಪ್ಪಣೆಕೊಟ್ಟಿದ್ದರೂ, ಇವರು ಯಾವ ಕಾರಣದಿಂದ ಸುಮ್ಮನೆ ಕುಳಿತಿರುವರೋ ತಿಳಿಯದಾಗಿದೆ.

ಸ್ವೀಕಾರ.

[೧] ಗೀತೆಯ ಗುಟ್ಟು ಕನ್ನಡಿಗರಿಗೆ ಪರಿಚಿತರಾದ ಶ್ರೀ. ದಿವಾಕರ ರಂಗರಾಯರಿಂದನ್ನು ಬರದಿದ್ದಾರೆ. ಬೆಲೆ ೧೫೦.

[೨] ರಾಜಭಕ್ತಿ ಮುಕ್ತಾವಳಿ. ತಮಕೂರಿನ ಶ್ರೀ. ಬಿ. ಶ್ರೀಕಂಠಯ್ಯ ನವರಿಂದ ರಚಿತವಾಗಿದೆ.

[೩] ನಟರಾಜ ಭಕ್ತ ನಾಳೆಹೋಗುವ ನಂದ ಮತ್ತು ವೀರಾಜಾಯಿ, ಗ್ರಂಥಕಾರರು:— ಜೀಗಳೂರಿನ ಶ್ರೀ. ನ. ಪೆಂಕಟೇಶಯ್ಯಂಗಾರು ಬೆಲೆ ೪ ಆಣೆ.

[೪] ಅಷ್ಟಾವರಣ ಗುಚ್ಛ. ದ್ವಿತಿಯ ಪುಷ್ಪ ಲೇ:— ಬ ತಿವಯೋಗಮಂದಿರ.

[೫] ಶ್ರೀ ಮಧ್ವೇದಾನ್ತಾಚಾರ್ಯರ ಚರಿತ್ರೆ: ಮತ್ತು (೬-೭) ವರ್ಣಾವ್ಯವಸ್ಥೆ ಭಾಗ ೧—೨ ಸನಾತನ ಧರ್ಮಸಂಜೀವನೀ ಕಾರ್ಯಾಲಯದವರಿಂದ

ಟಿಪ್ಪಣಿ:— ಇವುಗಳ ವಿಮರ್ಶೆಯು ಯಥಾವಕಾಶವಾಗಿ ಪ್ರಕಟಿಸಲ್ಪಡುವದು. — ಸಂ. ಕ.

[೭] ಮೈಸೂರು ಮಕ್ಕಳು ಮೈಸೂರಿನಲ್ಲಿ ಹೊಸದಾಗಿ ಹೊರಟ ಪತ್ರಿಕೆ. ಬಾಲವೀರರ (Raw Scout)ರಿಗಾಗಿ ಇದರಲ್ಲಿ ಉಪಯುಕ್ತವಾದ ಸಂಗತಿಗಳು ಸಚಿತ್ರವಾಗಿ ಪ್ರಕಟಿಸಲ್ಪಡುತ್ತವೆ. ಬಾಲವೀರರು ಅವಶ್ಯವಾಗಿ ಪ್ರೋತ್ಸಾಹಿಸಬೇಕು.

[೮] ಭಾರತಿ. ಸೇಲಂ ಜಿಲ್ಲೆಯ ಹೊಸೂರಲ್ಲಿ ಹೊಸಹೊರುಪಿನಿಂದ ಪ್ರಾರಂಭವಾದ ಸರ್ವಾರ್ಥ ಸಂಗ್ರಹ ಸಚಿತ್ರ ಮಾಸಪತ್ರಿಕೆ. ವಾರ್ಷಿಕ ಚಂದಾ ೩ ರೂ. ಸೇಲಂ ಜಿಲ್ಲೆಯಿಂದ ಹೊರಟ ಈ ಪತ್ರಿಕೆಯನ್ನು ನಾವು ಅತ್ಯಾದರದಿಂದ ಸ್ವೀಕರಿಸುತ್ತೇವೆ. ಯಾಕೆಂದರೆ ಸೇಲಂ ಜಿಲ್ಲೆಯು ಕನ್ನಡಿಗರದೇ ಎಂಬ ಅರಿವು ಸಹ ಅನೇಕರಿಲ್ಲ. ಇಂಥ ಪತ್ರಿಕೆಗಳ ಪ್ರಕಾಶನದಿಂದ ಅನ್ಯರಿಗೆ ಇವರ ಪರಿಚಯವೂ ಸೇಲಂ ಕನ್ನಡಿಗರಿಗೆ ಆತ್ಮಜಾಗೃತಿಯೂ ಆಗಲು ಕಾರಣವಾಗುತ್ತದೆ. ಈ ಪತ್ರಿಕೆಯು ಚಿರಕಾಲವಾಗಿ ಬಾಳಲಿ. ಕನ್ನಡಿಗರೆಲ್ಲ ಅವಶ್ಯವಾಗಿದನ್ನು ಪ್ರೋತ್ಸಾಹಿಸಬೇಕು.

[೯] ಸನ್ಮಾರ್ಗ ಪಾಮಸೇವೆ. ಈ ಪತ್ರಿಕೆಯು ಹೊರಟು ಕೆಲವು ತಿಂಗಳಾಗಿವೆ. ಇಲ್ಲಿಗೆ ನೇ ಸಂಚಿಕೆಯು ನಮ್ಮ ಕೈಸೇರಿದೆ. ಮೊದಲಿನ ಸಂಚಿಕೆಗಳು ನಮಗೆ ಬಂದಿಲ್ಲವಾದ್ದರಿಂದ ಅಭಿಪ್ರಾಯ ಕೊಡಲು ಆಸ್ಪದವಿಲ್ಲದಿದ್ದರೂ, ಮುಂದೆ ಬರುವ ಸಂಚಿಕೆಗಳನ್ನು ನೋಡಿ, ನಮ್ಮ ಅಭಿಪ್ರಾಯವನ್ನು ಪ್ರಕಟಿಸುವೆವು.

[೧೦] ಹಲಸೂರು ಶ್ರೀ ಸೀತಾರಾಮ ಪ್ರಸೋದಿನಿ ಸಭೆಯ ವರದಿ ಈ ಸಭೆಯು ಕಾರ್ಯವು ವ್ಯವಸ್ಥಿತವಾಗಿ ಸಾಗಿದೆಯೆಂಬುದು ಈ ವರದಿಯಿಂದ ಸ್ಪಷ್ಟವಿದೆ. ಸಾರ್ವಜನಿಕ ಸಂಸ್ಥೆಗಳು ವಿಶೇಷತಃ ಶ್ರೀ ಅನೇಕರಿಂದ ವರ್ಗಣಿಯನ್ನು ಎತ್ತಿದವರು ——ಈ ಬಗೆಯ ವರದಿಗಳನ್ನು ಪ್ರಕಟಿಸುವದು ಶ್ರೇಯಸ್ಕರವು.

[೧೧] ಕುರುಬರ ಪತ್ರಿಕೆ. ಮೈಸೂರಲ್ಲಿ ಹೊಸದಾಗಿ ಹೊರಟ ವಾರಪತ್ರಿಕೆ. ಶ್ರೀ ಕೆ. ಓವರಯ್ಯನವರು ಸಂಪಾದಕರು. ವಾ. ಚಂದಾ ೨-೪-೦ ಕುರುಬರ ಉತ್ಕರ್ಷಕ್ಕಾಗಿ ಹೊರಟ ಪತ್ರಿಕೆಯಿದು ತಮ್ಮ ಸಮಾಜದ ಅಭಿವೃದ್ಧಿಯ ಜಾಗ್ರತೆಯೊಂದಿಗೆ, ಕನ್ನಡಭಾಷೆ ಕರ್ನಾಟಕ ಸಂಸ್ಕೃತಿ ಏಕೀಕರಣ ಇವೇ ಮೊದಲಾದ ಕರ್ನಾಟಕದ ಮಹತ್ವದ ವಿಷಯಗಳನ್ನು ಸಹ ಈ ಪತ್ರಿಕೆಯು ಚರ್ಚಿಸುತ್ತ ಹೋಗುವದಾಗಿ ಆಶೆಯಿದೆ.

ಇತರಸಾಮಾನಗಳು.

(೧) ಜೀನತುನ್ನೆ. ಪಂಡಿತ ಘನಶ್ಯಾಮ ಪಾಂಡೆ c/o ಲಾಲಾರಾಮು ಶರಣದಾಸ ನಸಕಿಸಹಾಯ ನತೀಜಾಬಾದ ಜಿಲ್ಲಾ ಬಿಸನೂರ ಇವರಿಂದ ಪ್ರಸ್ತಾಪ ಹಿಮಾಲಯದ ಜೀನ ತುಪ್ಪವು ಮಾದರಿಗಾಗಿ ನಮಗೆ ಕಳಿಸಲ್ಪಟ್ಟಿದೆ. ಈ ಜೀನತುಪ್ಪವನ್ನು ನಾವು ಉಪಯೋಗಿಸಿ ನೋಡಲಾಗಿ, ಅದು ಉತ್ತಮ ತರಗತಿಯದೆಂಬುದು ಅನುಭವದಿಂದ ಗೊತ್ತಾಯಿತು. ಕನ್ನಡಿಗರು ವ್ಯಾಪಾರಕ್ಕಾಗಿ ಅವಶ್ಯವಾಗಿದನ್ನು ತರಿಸಬಹುದು.

(೨) ಕಾಫಿಪುಡಿ ಬೆಂಗಳೂರಿನ ದಿ ಸಾಂಡರ್ಸ್ ಕಾಫೀ ಕಂಪನಿಯವರಿಂದ ಕಾಫಿಪುಡಿಯು ವ್ಯಾಪಾರಿಗಾಗಿ ನಮ್ಮ ಕಡೆಗೆ ಕಳಿಸಲ್ಪಟ್ಟಿದೆ. ಸ್ಯಾಂಪಲ್ಲಿನಲ್ಲಿ ಈ ಪುಡಿಯು ಚನ್ನಾಗಿದೆ. ಕಾಫೀ ಭಕ್ತರು ಒಂದು ಸಲವಾದರೂ ಇದನ್ನು ಉಪಯೋಗಿಸಿ ಪಾತ್ರಮಾಡಿಕೊಳ್ಳತಕ್ಕದ್ದು. ಈ ಕಂಪನಿಯವರು ಅತ್ಯುತ್ತಮವಾದ ಕಾಫೀ ಬೀಜವನ್ನು, ಶಾಸ್ತ್ರೋಕ್ತವಾಗಿ ವಿದ್ಯುಕ್ತ ಶಕ್ತಿಯಿಂದ ಹುರಿದು ಪುಡಿ ಮಾಡುತ್ತಾರೆ. ಇವರ ಪುಡಿಯ ಬಗ್ಗೆ ಮೈಸೂರಿನ ಶ್ರೀಮದ್ಯುವರಾಜರು, ದಿವಾನಸಾಹೇಬರು ಇವರೇ ಮೊದಲಾದ ಅನೇಕ ಮಹನೀಯರು ಅತ್ಯಂತ ಸಂತೋಷಪಟ್ಟಿರುತ್ತಾರೆ. ಹಾಗೂ ಪೊನ್ನೆ ನಡೆದ ಅಖಿಲ ಭಾರತ ಸಕಲಕಲಾ ವಸ್ತು ಪ್ರದರ್ಶನದಲ್ಲಿ ಈ ಪುಡಿಗೆ ಮಾತ್ರ ಬೆಳ್ಳಿಯ ಪದಕವೂ, ಸರ್ಟಿಫಿಕೇಟೂ ಕೊಡಲ್ಪಟ್ಟಿವೆ.

ವಾಚ್ಯಾರ್ಥ ಪರಿಚಯ.

(೧) ಭಯಸೂಚಕಭೇರಿ:— ಬೆಲೆ ೧೫ ಆಣೆ. ಪ್ರಕಾಶಕರು. ಡಿ. ಪಿ. ಕರ್ಮಾರಿಕರ ಎಮ್ ಎ. ಎಲ್. ಎಲ್. ಬಿ. ಧಾರವಾಡ ಹಿಂದೂಧರ್ಮದ ಜನರಿಗೆ ಎಚ್ಚರಿಕೆಯನ್ನು ಕೊಡಲೋಸುಗ ರಚಿಸಲಾದ ಇದೊಂದು ಚಿಕ್ಕ ಪುಸ್ತಕವು. ದಿಲ್ಲಿಯ ಟ್ವಾಜಾಹಸನ್ ನಿಝಾಮಿ ಎಂಬ ಮುಸಲ್ಮಾನೀ ಧರ್ಮೋಪದೇಶಕರು ತಮ್ಮ ಧರ್ಮದ ಸಂಖ್ಯೆಯನ್ನು ಹೆಚ್ಚಿಸುವ ಕುರಿತು ಬರೆದ 'ದಾಯಿಯೆ ಇಸ್ಲಾಂ' ಎಂಬ ಪುಸ್ತಕದಲ್ಲಿ ಬರೆಯಲ್ಪಟ್ಟ ಮುಸಲ್ಮಾನೀ ಧರ್ಮ ಪ್ರಸಾರಕಾರ್ಯದ ವಿವರಣೆಯು ಇದರಲ್ಲಿ ಆಡಕವಾಗಿರುವದರಿಂದ ಪ್ರತಿಯೊಬ್ಬ ಹಿಂದೂ ಮನುಷ್ಯನು ಸಂಗ್ರಹಿಸಲು ಯೋಗ್ಯವಿದೆ. ಪರಧರ್ಮೀಯರಿಂದ ಹಿಂದೂ ಜನರಿಗೆ ಒದುವ ತೊಂದರೆಗಳನ್ನು ಬಹು ಜಾಗರೂಕತೆಯಿಂದ ಹೋಗಲಾಡಿಸಿ ತನ್ನ ಪವಿತ್ರವಾದ ಹಿಂದೂಧರ್ಮವನ್ನು ರಕ್ಷಿಸಲು ಪ್ರಾಣವನ್ನಾದರೂ ಅರ್ಪಿಸಲು ಸಿದ್ಧರಾಗಬೇಕು; ಮತ್ತು ತನ್ನ ಹಿಂದೂಬಾಂಧವರಿಗೆ ಮುಸಲ್ಮಾನರಿಂದ ಧರ್ಮಾಂತರವ

ವಿಷಯದಲ್ಲಿ ಬರುವ ಆಘಾತವನ್ನು ಬಹುಸಂಖ್ಯೆಯಿಂದ ಒದಿ ಗೊತ್ತಲು ಹೆಣಗಾಡಬೇಕು

ನವಜೀವನ:—ಎಂಬದನ್ನು ತಿಳಿಯಲೇಪ್ಪೆಯುಳ್ಳ ಹಿಂದೂ ಜನರೆಲ್ಲರೂ ಓದಲೇಬೇಕು.(ವಿಶೇಷ ಸಂಚಿಕೆಯ ಸಂಪಾದಕರು ಶ್ರೀ. ಕವಿಭೂಷಣ ಕೃಷ್ಣಶರ್ಮ ಬೆಟಗೇರಿ) ಶ್ರೀ. ಸಿ. ಅಶ್ವತ್ಥ ನಾರಾಯಣರಾವ ಬಿ. ಎ. ಇವರ ಸಂಪಾದಕತ್ವದಲ್ಲಿ ಈ ಬಂಧುತ್ವಿಂಗಳಿಂದ ಈ ದೈನಿಕ ಪತ್ರಿಕೆಯು ಬೆಂಗಳೂರಲ್ಲಿ ಹೊರಡುತ್ತಲಿದೆ ಈ ಸಚಿತ್ರ ವಿಶೇಷ ಸಂಚಿಕೆಯಲ್ಲಿ ಸುರಿತ ಲೇಖಕರಿಂದ ಒರೆಯಲ್ಪಟ್ಟ ಹಾಸ್ಯಪರ ಐತಿಹಾಸಿಕ ಮತ್ತು ಸಾಮಾಜಿಕ ಲೇಖನಗಳು ತುಂಬಿವೆ. ಕರ್ನಾಟಕ ಜಾಗ್ರತಿಯ ಕಾರ್ಯದಲ್ಲಿ ಕಂಕಣಬದ್ಧರಾಗಿ ನಿಂತು ಪತ್ರಿಕೆಯು ರೂಪಿಸಿದಂದಿ ಸಾಹಿತ್ಯಸೇವೆಯನ್ನು ಮಾಡಲುಪಕ್ರಮಿಸಿದ ಶ್ರೀ. ಅಶ್ವತ್ಥನಾರಾಯಣರಾಯರನ್ನು ನಾವು ಅಭಿನಂದಿಸದೆ ಇರೆವು. ಇವರು ಕೈಕೊಂಡ ಕಾರ್ಯಕ್ಕೆ ಕರ್ನಾಟಕಸ್ಥರೆಲ್ಲರೂ ತಕ್ಕ ಪ್ರೋತ್ಸಾಹನವನ್ನು ಯುವರೆಂದು ತುಂಬಾ ನಂಬಿದ್ದೇವೆ.

ಮೂರನೇ ಲಂಬಾಣಿಗರ ಮಹಾಸಭಾ.

ಕಾನಕಾನಹಳ್ಳಿ

ಇದೇ ದಿನಾಂಕ ೩೦—೩೧—೧ ನೇ ತಾರೀಖುಗಳಲ್ಲಿ

ಬೆಂಗಳೂರು ಡಿಸ್ಟ್ರಿಕ್ಟ್ ಕಾನಕಾನಹಳ್ಳಿ ಟಿ.ಕ್ಸ್ನಲ್ಲಿ ಮೂರನೆಯ ಮೈಸೂರ ಸಂಸ್ಥಾನ ಮತ್ತು ಇತರ ಸಂಸ್ಥಾನದ ಲಂಬಾಣಿ ಮಹಾಸಭೆ ನಡೆಯುವುದು. ಮಹಾಸಭೆಯ ಅಲ್ಲಿ ಪದಾರ್ಪಣ ಗಳೂ ಸ್ವಾಗತಸಮ್ಮತಿಯಿಂದ ನಡೆಯಲ್ಪಡುತ್ತಲಿರುವವು ಈ ಸಾರಿ ಗಿರಿಜನ ಸಾಂಖ್ಯಕ್ಕೆ ಮೀರಿಲ್ಪಟ್ಟ ಜನರು ನೆರೆಯು ಸಂಭವವಿರುತ್ತದೆ. ಲಂಬಾಣಿ ಜನರೆಲ್ಲರೂ ತಪ್ಪದೆ ಸಕಾಲಕ್ಕೆ ಈ ಮಹಾಸಭೆಯ ಕಾಲಕ್ಕೆ ಕಾನಕಾನಹಳ್ಳಿಗೆ ಬಂದು ಸಭೆಯ ಕಾರ್ಯಕಲಾಪಗಳಲ್ಲಿ ಭಾಗ ತೆಗೆದುಕೊಂಡು ತಮ್ಮ ಸಮಾಜದ ಉನ್ನತಿಯನ್ನು ಸಾಧಿಸಲು ನೆರವಾಗಬೇಕೆಂದು ಸ್ವಾಗತಸಮ್ಮತಿಯು ವಿನ್ರವಿಸಿಕೊಳ್ಳುತ್ತದೆ. ಮೈಸೂರ ಸಂಸ್ಥಾನದ ಸರ್ಕಾರದವರು ಎಲ್ಲಿ ಟ್ರೈಬ್ ಎಂದು ಕರೆಯಲ್ಪಡುವ ಜನರಿಗೂ ಮಾನಸಿಕವಲ್ ಕೌಶಲಗಳೂ ಸಂಸ್ಥಾನ ಮತ್ತು ಇತರ ಸಂಸ್ಥಾನಗಳಲ್ಲಿರುವ ಇತರ ಪಂಗಡದವರಂತೆ ಈ ನಮ್ಮ ಪಂಗಡವನ್ನೂ ಉದ್ಧರಿಸಲು ಪವಿತ್ರ ಕಾರ್ಯಸ್ಥ ಉಪಾಯವಾಗಿ ದೃಷ್ಟಿಸಿಯಾಯ ಪ್ರಾಪ್ತಿಯೆಂದೂ ಮಹಾಸಭೆಯ ಕಾಲದಲ್ಲಿ ಪಾಸುಬಿದ್ದ ತಮ್ಮ ಅಮೂಲ್ಯವಾದ ಸಲಹೆಗಳನ್ನು ತೆಗೆದುಕೊಂಡೂ ಸ್ವಾಗತಸಮ್ಮತಿಯು, ಸರ್ವರನ್ನೂ ಪ್ರಾರ್ಥಿಸಿಕೊಳ್ಳುತ್ತವೆ.

ಅಧ್ಯಕ್ಷರು,
ಶ್ರೀ ಕೆ. ಎ. ಜೆಂಕಟೇಶ್ವರನವರು.
ಗೌರವಕಾರ್ಯದರ್ಶಿಗಳು,
ಕಾನಕಾನಹಳ್ಳಿ.

ಕುಮಾರಿ ಮೀರಬಾಯಿ ಹಿಂದೂ ಆದಳು !

ಅಮೀರಿಕೆಯ ಈ ಕ್ರಿಶ್ಚನ್ ಎಂಬಿಸ್ಸಿಯು ನಾಸಿಕದಲ್ಲಿ ಮೊನ್ನೆ ಮಂಗಳವಾರದಿನ ಹಿಂದೂ ಧರ್ಮವನ್ನು ಕಡೆಗೆ ಸ್ವೀಕರಿಸಿದಳು. ಕವಲೂರ ಪೀರಪ್ಪ ಶಂಕರ ಚಾರ್ಯರು (ಪಾ, ಕೊತ್ತಲ ಕೋಟೆ) ಶುದ್ಧೀ ಕಾರ್ಯವನ್ನು ಮಾಡಿದರು. ೨-೩ ಗಂಟೆಗಳ ವರೆಗೆ ಅಗ್ನಿ ಸಮ್ಮುಖವಾಗಿ ಎಲ್ಲ ವಿಧಿವತ್ತಾಗಿ ಕಾರ್ಯವನ್ನು ಸಾಂಗಗೊಳಿಸಲಾಯಿತು. ಶುಕ್ರವಾರದ ದಿನ ಸರಿಗೆಯಿಂದಲೂ ಸಂಗಡ ಮದುವೆಯಾಯಿತು. ಅಂತೂ ಒಂದನೇ ಪ್ರಕರಣವಿಲ್ಲಿ ಮುಗಿಯಿತು. ಇನ್ನು ಮುಂದಿನ ಪ್ರಕರಣಗಳನ್ನು ನಿರೀಕ್ಷಿಸುವಾ.

"ಅಮೀಜೂರ" ವೇಕೆ?

'ಅಮೀಜೂರ' ಎಂಬ ಶಬ್ದವನ್ನು ಕನ್ನಡಿಗರು ಉಪಯೋಗಿಸುವದೇಕೆ? ಮೈಸೂರ ಬಂಗಳೂರ, ಧಾರವಾಡ, ಗದಗ ಮೊದಲಾದ ಸ್ಥಳಗಳಲ್ಲಿದ್ದ ನಾಟ್ಯಕಲಾ ಪ್ರೇಮಿಗಳು ಕನ್ನಡಿಗರಿದ್ದರೂ 'ಅಮೀಜೂರ' ಶಬ್ದವನ್ನೇ ಒಳಿಸಿವ್ವಾರೆ. ಬಾಗಲಕೋಟೆಯ ವಾಚ್ಯಾಯ ಪ್ರೇಮಿಗಳೂ, ಕನ್ನಡದ ಭಕ್ತರೂ ಆದ ವಾಸುದೇವ ನಾಟಕ ಸಮಾಜದವರು ಸಹ ಈ ಪರಭಾಷೆಯ ಶಬ್ದವನ್ನೇಕೆ ಉಪಯೋಗಿಸುವರೋ ತಿಳಿಯದು. 'ಅಮೀಜೂರ' ಶಬ್ದಕ್ಕೆ ಕನ್ನಡದಲ್ಲಿ ಶಬ್ದವೇ ಇಲ್ಲವೋ? ಹಾಗಾದರೆ ಕನ್ನಡ ನುಡಿಯು ಅಷ್ಟೊಂದು ಬಡವಾಗಿರುವದೋ? ಈಗಲಾದರೂ ಈ ಕನ್ನಡಿಗರೆಲ್ಲ ಎಚ್ಚತ್ತು 'ಅಮೀಜೂರ' ಕ್ಕೆ ಸರಿಯಾದ ಕನ್ನಡ ಶಬ್ದವನ್ನು ಹುಡುಕಿ ಅದನ್ನೇ ರೂಢಿಸಬೇಕಾಗಿ ವಿನ್ನಹವಿದೆ."

ಈ ಬಗೆಯ ಅಭಿಪ್ರಾಯವು ಆಗಿಂದಾಗ್ಗೆ ಪ್ರಕಟವಾಗುತ್ತಲಿದೆ. ಇದನ್ನು ಬಾಗಲಕೋಟೆಯ 'ಅಮೀಜೂರ' ರಲ್ಲಿಯ ಒರ್ವನಾದ ನಾನೂ ಬಲ್ಲೆ. ನಮ್ಮ ಸಭೆಯ ಪರಿಗೆ ಈ ಪಾರಿಭಾಷಿಕ ಶಬ್ದದ ಬಗ್ಗೆ ಮೋಹವು ಇಲ್ಲ; ಅದನ್ನೇ ಬಳಸಬೇಕೆಂಬ ಹಟ ಅಥವಾ ಅಭಿಲಾಷೆ ಇಲ್ಲ. 'ಅಮೀಜೂರ' ದಲ್ಲಿ ಇದ್ದ ಅರ್ಥವನ್ನಳಿಗೊಂಡ ಕನ್ನಡ ಶಬ್ದವು ನಮಗಂತಾ ದೊರೆತಿಲ್ಲ. ಕಲನು, ವಿಹೂಡಂಧ್ರ 'ಪರೋಪಿನೇ' ಮೊದಲಾದ ಶಬ್ದಗಳನ್ನು ಕಲ್ಪಿಸಿದ್ದಾರೆ ಆದರೆ ಅವುಗಳಲ್ಲಿ 'ಅಮೀಜೂರ' ಶಬ್ದದಲ್ಲಿರುವ ಕಲ್ಪನೆಯಿಲ್ಲ. 'ಅಮೀಜೂರ' ರೆಂದರೆ ಹೆಚ್ಚಿಗಾಗಿ ನಾಟಕ ವ್ಯವಸಾಯಕ್ಕೆ ಪದ್ಧತಿರಲ್ಲ, ತಮ್ಮ ಉದರ ನಿರ್ವಾಹಾರ್ಥವಾಗಿ ಬೇರೊಂದು ಸಮ್ಮಿಗ ವೃತ್ತಿ ಕೇವಲ ಹೌಸಿನಿಂದ ನಾಟಕಗಳನ್ನಾಡಿ, ವಾಚ್ಯಾಯ ಸೇವೆ, ಸಮಾಜ ಸೇವೆ, ರಂಗಭೂಮಿಯ ಸೇವೆಗಳನ್ನು ತಮ್ಮ ತಮ್ಮ ಉದ್ದೇಶದಂತೆ ಮಾಡಹೊರಟಿರುವರು; ಎಂಬ ಅರ್ಥವಿಲ್ಲ ಈ 'ಅಮೀಜೂರ' ಶಬ್ದದಲ್ಲಿ ಅಡಕವಾಗಿದೆ. 'ಥೆಂಪ್ರ' ಈ ದೃಷ್ಟಿಯಿಂದ ನಾಟಕಗಳನ್ನು ಆಡುವವರು ಸಹ 'ವಿನೋದಿನಿ' ಗಳಾಗಿರುವುದು. ಆದ್ದರಿಂದ 'ವಿನೋದಿನೀ' ಶಬ್ದವು ಸರಿಯಾಗಲಾರದು. 'ಅಮೀಜೂರ' ಶಬ್ದದಲ್ಲಿದ್ದ ಅರ್ಥಪಕ್ಷಿಲ್ಲ ಒಳಗೊಂಡು, ಅದನ್ನು ಸರಿಗಟ್ಟುವಂಥ ಕನ್ನಡ, ಅಥವಾ ಸಂಸ್ಕೃತ ಶಬ್ದವನ್ನು ಆರಾದರೂ ನಿರ್ಮಿಸಿಕೊಟ್ಟರೆ ನಮ್ಮ ಸಮಾಜವು ಅದನ್ನು ಅತ್ಯಂತ ಸಂತೋಷದಿಂದಲೂ ಅಭಿಮಾನದಿಂದಲೂ, ಕೃತಜ್ಞತೆಯಿಂದಲೂ ಸ್ವೀಕರಿಸುವದು. ಆದ್ದರಿಂದ ಈ 'ಪಾರಿಭಾಷಿಕ' ಶಬ್ದವನ್ನು ರೂಢಿಮಾಡಬಾರದೆಂಬ ಅಲಲವಿಕೆಯುಳ್ಳವರು ದಯವಿಟ್ಟು ಬೇಗನೇ ಅಂಥದೊಂದು ಶಬ್ದವನ್ನು ಪುಟ್ಟುಹಾಕಬೇಕಾಗಿ ಅಗ್ರಹದ ವಿನ್ನಹವಿದೆ. ಸಾರ್ವಜನಿಕ ರೀತಿಯಿಂದ ಕನ್ನಡಿಗರ[illegible] ಮೂಲಕ ಪ್ರಾರ್ಥಿಸಿದ್ದರೂ, ಯಾರೂ ಅಂದದೊಂದು ಶಬ್ದವನ್ನು ಹುಡುಕಿವಿದ್ದರೆ ಈ ಅಶ್ಲೀಲವನ್ನು ಹೊರಡಿಸಿದ ಕನ್ನಡಿಗರೇ ಬರಡುತಲೆಯವರು ಎಂಬದಾಗಿ ನಾನು ಊಹಿಸುವೆನು.

ಬಾಗಲಕೋಟೆ) —ಓರ್ವ ಸಭಾಸದ.

ಜಾಹೀರ ವಿನಂತಿ

ಕಳ್ಳಿಗು ಪೃಥ್ವಿಗಳ ಶಿಕ್ಷಣ ಪ್ರಸಾರಕ ಸಂಘವು ತಾಲೂಕ ಬಾಗಲಕೋಟೆ.

ಬಾಗಲಕೋಟೆ ಶಹರದಲ್ಲಿ ಇರುವ ದೇಶಾಭಿಮಾನಿ ವಿದ್ಯಾ ಭಿಮಾನಿ ಸಭ್ಯ ಗೃಹಸ್ಥರಿಗೆ ವಿನಂತಿ ಮಾಡುವದೆಂದರೆ— ಈ ತಾಲೂಕಿನಲ್ಲಿ ಕೆಳ್ಳಿ ದೊಡ್ಡ ದೊಡ್ಡ ಗ್ರಾಮಗಳಲ್ಲಿ ಹುಡುಗರ ಶಾಲೆಗಳು ಅವೆ. ಸಣ್ಣ ಸಣ್ಣ ಗ್ರಾಮಗಳಲ್ಲಿ ಎಲ್ಲಾ ಮತ್ತು ಶಾಳಿಯ ಜಾತಿ ಮುದು ಅದಿರುಗಾಗಿಯಿಂದ ಈ ಸಣ್ಣ ಗ್ರಾಮಗಳಿಗೆ ಈವಿನವರೆಗೂ ಸಾಲೆಗಳು ಏರ್ಪಟ್ಟಿಲ್ಲ. ಮತ್ತು ಮುಂದೆ ಅವಕಾಶ ಶಿಗುವ ಸಂಭವ ಇಲ್ಲಾ. ಕೆಲವು ಗ್ರಾಮಗಳಲ್ಲಿ ಗಾವಠಿ ಶಾಲೆಗಳು ಅಿದೆ ಆದರೆ ಅವು ಸ್ವಲ್ಪ-ಭಿನ್ನವಾಗಿ ಇರುತ್ತವೆ. ಅಂದರೆ ಏನೆಂದರೆ ನಿರು ಪಾರಿಪರ್ಸ ಒಂದು ಬಗುತ್ತವೆ ಅದರಿಂದ ವಿದ್ಯಾಪ್ರಸಾರ ಆಗುವದಿಲ್ಲಾ. ಕಾರಣ ಇಂಥಾ ಗಾವಠಿ ಶಾಲೆಗಳಿಗೆ ಊರಜನರ ಸಹಾಯ ತೆಗೆದುಕೊಂಡು ಕಾಯಂ ಆಗುವಂತೆ ತೆಜವೀಜ ಮಾಡುವ ಕಾತು ಒಂದು ಸಂಘ ಸ್ಥಾಪನೆ ಮಾಡುವದು ಅವಶ್ಯಕಂಡು ಒಂದಿದ್ದರಿಂದ, ಈ ಸಭೆಯನ್ನು ಸ್ಥಾಪನೆ ಮಾಡಿ ಎಕ್ಕೇನೆ. ಹೊಂದ ಲಗಟೋಬಂ ತಿಂಗಳ್ಳು ಈ ತಾಲೂಕಿನ ಹಳೇಲಿ ಗ್ರಾಮದಲ್ಲಿ ಇರುವ ಗಾವಠಿ ಶಾಲೆಯು ಮಾಸ್ತರ್ಯಂಗೆ, ಸಂಬಾಪ್ಪನ ಗಾಂ ಊರ ಜನರ ಕಡೆಯಿಂದ ಸಿಗದೆ ಇದ್ದರಿಂದ, ಅವರು ದೀತಿಂಗಳಿಗೆ ಕೆಳ್ಳ ೯ ರೂಪಾಯಿ ಆದಾಗಿ ಕೊಡುತ್ತ ಇರುವದರಿಂದ ಆ ಶಾಲೆಯ ಸ್ಥಿತಿ ನೆಟ್ಟಗೆ ಇಂದೆ, ಮುಂದೆ ಕಾಯಮು ಮಡಿಯೋ ಧೈರನೆ ಕಾಂತ್ರೆ ಬರಿಲ್ಲಾ ಕಾರಣ ಆ ಸಾಲೆಯ ಸ್ಥಾಂನಿಗೆ ಈ ಸಂಘದಿಂದ ದರತಿಂಗಳಿಗೆ ೯ ರೂಪಾಯಿ ಕೆಟ್ಟ ಕೊಡುವದು ಗೊತ್ತುಮಾಡಿ ಆಕೆಳ್ಳೀಬರ ತಿಂಗಳ ಅಗಾಯು ತ ೩ ರೂಪಾಯಿ ಭರ್ತಿ ಕೊಟ್ಟಿರುತ್ತದೆ ಮತ್ತು ಬೇಸನವು ಟ್ಟು ಸಂಬಂತ್ಸರಹವೆಲಿ ಮತ್ತು ಒಂದಗಿ ಈ ಎರಡು ಜಾಲೆಗಳಿಗೆ ತಿಂಗಳಿಗೆ ೩ ರೂಪಾಯಿದಂತೆ ಕೊಡುವದು ಸರಿವು ಮಾಡಿರುತ್ತದೆ. ಇದರಂತೆ ಯಾವ ಗಾವಠಿ ಶಾಲೆಗೆ ಕೊಡುವದು ಜರೂರಿ ಅಿದೆ, ಆ ತರಹ ಈ ಸಂಘದಿಂದ ಮುದಿಕ ಸಾಯವ ತೆಜವೀಜ ಆಗತಕ್ಕದೆ. ತಾವುಗಳು ಇದಕ್ಕೆ ಕೈಚಾಚಿ ಮಟ್ಟಿಗೆ, ಪುಣ್ಯ ಸಾಯ ಮಾಡಿ, ಈ ಪುಣ್ಯಾದ ಪತ್ರ ದೇಶ ಹಿತದ ಕೆಲಸಕ್ಕೆ ಎಲ್ಲರೂ ಸಹಾಯ ಮಾಡತಕ್ಕದ್ದು. ದರಪ್ಪು ವೆಂಬರಿಗೆ, ಸುರುವಿಗೆ ೧ ರೂಪಾಯಿ ವ್ಯಾಪಕ ಫಿ ಕೂಡಬೆಕು ಎನಿಸಿಲ್ಲ, ಈ ಕೆಲಸ ಆವುಗೆ ಯೆಷ್ಟೆ ಕಂಡುಂದಿವೆಯೆ, ಕೆಲಸ ಗಾರ್ಜಿ ಪ್ರಕಾರ ಜಾಸ್ತಿ ಬಕಮು ಕೊಡಬೆಕೆಂತಲೂ ವಿನಂತಿ ಅಿದೆ.

ಯಾವ ಗ್ರಾಮದಲ್ಲಿ ಗಾವಠಿ ಶಾಳಾ ಸ್ಥಾಪನೆಯಾಗಬೇಕು ಅನಿಸ್ಯಾನ, ಆ ಗ್ರಾಮದ ಸ್ತ್ರೀಯರು ಪುರುಷ ಜನರು ನಮಗೆ ಲೇಖಿಯಿಂದ ತಿಳಿಸಿದರೆ, ಆದರ ತಪವೀಜ ನಾವು ಮಾಡುತ್ತೇವೆ ಆ ಊರಜನರ ಕಡೆಯಿಂದ ಮಾಸ್ತರ ಸಂಬಳದ ಎಷ್ಟು ದೊಂತೀಕು ಇವನ್ನು ತಿಳಿಸಿದರೆ, ಅನಿಸ್ಕೆ ಭರ್ತಿ ಹಾಕಲಿಕ್ಕೆ ಸಲವು ತಜವೀಜ ಮಾಡಿವು

ಇಂಥ ಗಾವಠಿ ಶಾಲೆಯಲ್ಲಿ ವಿದ್ಯಾಪ್ರಸಾರವಾಗಲಿಕ್ಕೆ ಯಾರು ಕೈಯೂಲು ಇದ್ದಾರೆ, ಅಂಥಾ ಉನ್ನತ್ಯಾರು ಮಾಡಿದವರಿಗೆ ಸಮಜ್ಞಿಮಾ ಪೆಟ್ಟಿಯಾಗದೆಯು. ಇಲ್ಲಿಗೆ ಲೇಖೀ ಅರ್ಜಿ ಕಳಿಸಬೇಕು.

ಈಗ್ಗೆ ೫೬ ಜನ ಸಭಾಸದರು ಅವರಲ್ಲಿ ೨೧ ಜನರು ತಿಳಿ ರೂ. ಕೊಟ್ಟವರೆ ಅದರಲ್ಲಿ ಪಗಾರಕ್ಕೆ ೨೧ ರೂ; ವರ್ತಮಾನ ಪತ್ರಿಕೆಗಳಿಗೆ ರಂ. ೩ ಹೀಗೆ ೨೪ ರೂ. ವೆಚ್ಚವಾಗಿ ೧೦ ರೂ. ತಿಲ್ಲಿಸಲ್ಲಿವೆ.

ಬಾಗಲಕೋಟೆ ತಾ|೧೨-೨-೧೮೮೪

ಶುಭೂ ಶುಕರ ದಾತಾರ
ಪೇಸಕರು ಪಾಠಶಾಲೆ

ವೀರಭದ್ರಯ್ಯಾ ಸುಗಯ್ಯಾ ಲೂತಿಮಠ
ಪಿ. ಎ ಎಲ್ ಎಲ್ ಬಿ. ವಕೀಲ

ಕನ್ನಡಿಗನ ವಾರ್ಷಿಕ ಚಂದಾ ವಿಚಾರಣೆ

ಪೋಷಕರಿಗೆ ವಾ. ಪ್ರ ರೂ ಉದಾಸೀನರಿಗೆ ವಾ. ೧೦ ರೂ ಒಮ್ಮೆಲೇ ೨೦ ರೂ ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ } ೧ ರೂ ಇಪ್ಪತ್ತೇ ೧೧ ನೆಂಬರಿಗೆ ಕಡಿಮೆ ಮಾಗದುಳ್ಳ ೪೦೦೦ ಯಾರ್ಡ ಕೈನೂಲು

ಪರಸ್ಥಳದವರಿಗೆ } ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೧-೦ ಇಪ್ಪತ್ತೇ ೧೧ ನಂಬರಿಗೆ ಕಡಿಮೆಯಾಗದೆ ೧೬೦೦ ಯಾರ್ಡ ಕೈನೂಲು

ವಾಚನಾಲಯ ಪಬ್ಲಿ, ಸಮಿತಿ ಕ್ಯಾಂ ಸರ್ವಜನಿಕ ಸಂಸ್ಥೆಗಳಿಗೆ— } ಪರಸ್ಥಳದವರಿಗೆ ೨ ೦-೮ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ವಿ. ಪಿ ಯಿಂದ ೩-೧೩-೦

ಸರಕಾರ, ಮುನಸೀ ಪಾಲಟಿ, ಲೋಕಲ್ ಬೋರ್ಡ ಇತ್ಯಾದಿ. } ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ. ಯಿಂದ ೫-೧-

ಜಣ ಸಂಖೆಗೆ ೪ ಪೈ. ಹಿಂದಿನಸಂಖೆಯೊಂದಕ್ಕು ವಿಲಿಗೆ. ಧನಾರ್ಥವಾಗಿಯಾಗಲಿ, ವರ್ಷದ ಕಡಮೆಯ ಮುದ್ರತಿಗಾಗಲೀ ನಾವು ಸಂಖೆಗಳನ್ನು ಕಳಿಸುವದಿಲ್ಲ. —ವ್ಯವಸ್ಥಾಪಕ

ಅಚ್ಚಿಗಿನೆ! ತರಿಸಿರಿ!

ವಾಸುದೇವನ

ರೋಮಸ್ತಂಭಗಳು.

೧. ಇಂದಿರಾ ೨-೮-೦
(ಕಚಿತ್ರ ಸಾಮಾಜಿಕ ಕಾದಂಬರಿ)

೨. ಸೇವ್ಯತೆಗಳು ಭಾಗ ೧ ೧-೪-೦
(ಪ್ರಸ್ತಾವಿಕ ಬೆಲ್ಲೀಚಿತ್ರ, ಮುಖ್ಯೇಶಿಯ ಸಚ್ಚಿತ್ರವು, ಪ್ರಸಿದ್ಧ ವಿಷಯಗಳೆಂಬ ನಾಲ್ಕು ಭಾಗಗಳು:—

ಪ್ರಕಾಶಿಯಾವಿ ಸ್ಥಳಗಳಲ್ಲಿರುತ್ತಾರೆ ಸಾಟಿಕ, ಮತ್ತು ಯಾವ ಪುಸ್ತಕಾರಾಜಪ ಪ್ರತಿಗಳಲ್ಲವೂ ತೀರಿಹೋಗಿವೆ.

ಅಚ್ಚಿನಲ್ಲಿದ್ದ

ಸತಿವಶೀಕರಣ ನಾಟಕ

ಅಲಿಸ್ಟರ ಕೊಲ್ಲ ಸ್ಥಿತಿನ ತಿಳಿಸ್ಫೋಟನ ಕಾಂಕ್ಷರದ ಅನುವಾದವು.

ಫೆಬ್ರುವಾರಿ ತಿಂಗಳ ಕೊನೆಗೆ ಹೊರಬೀಳುವದು. ಬೇಕಾಗಿದ್ದವರು ಕೂಡಲೇ ತಮ್ಮ ಪೆಸರು ನೋಂದಾಯಿಸಬೇಕು.

ಸ್ವಾಮಿ. ರಾ. ಕೆರೂರ.
ಬಾಗಲಕೋಟೆ (ಜಿ! ವಿಜಾಪೂರ)

ಕೇಶರ, ಕಸ್ತೂರಿ, ಸುವರ್ಣಲೋಹಾದಿ ವೀರ್ಯವಾಹಿ ಪ್ರಯೋಗಿಸಿ ಅನುಭವಸಿದ್ಧ

ಬಾಣಂತಿಯ ಔಷಧ.

ಇದರಿಂದ ಗರ್ಭಾಶಯ ಶುದ್ಧಿ, ಅಕುಂಚನವಾಗಿ ಶರೀರವು ಗಟ್ಟಿ ಮತ್ತು ನಿರೋಗಿ ಯಾಗುವದು. ಮುಂದೆ ಬಾಣಂತಿ ಪೀಡೆಯ ಭೀತಿಯೇ ಉಳಿಯುವದಿಲ್ಲ. ಕಡೆದ ೧೦ ದಿನ, ಮುಂಡಿ ೪೦ ದಿನ ಕೂಡಿ ೫೦ ದಿನಗಳ ಔಷಧಕ್ಕೆ ಕೇವಲ ೬ ರೂ. ಕನ್ನಡಿಗನ ಚಂದಾದಾರರಿಗೆ ಮಾತ್ರ ೬ ರೂ. ಗಳಲ್ಲಿ ದೊರೆಯುವದು. ತ್ವರೆಮಾಡಿರಿ!

ವೈದ್ಯ:— ಪಾದಿರಾಜ ಜಹಾಗೀರದಾರ ಇಳಕಲ್ಲಿ.
ಜಿ|| ವಿಜಾಪೂರ

ಅತ್ಯಲ್ಪವಿವೆ! **ಉಚಿತ**

ಕೇವಲ ಉಚಿತ **ಕೇವಲ ಉಚಿತ**



"ತಾರಾ" ಲೀವರ್ ರಜಿಸ್ಟರ್ಡ್ ಪೊಕೆಟ್ ವಾಚ್ ೧೯ ನಂಬರ್ ರೋಲ್ಡ್ ಗೋಲ್ಡಿನದು ಮುಖವಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಜ್ಞಾಪಿಸಿದಿರುವರು. ಈ ಗಡಿಯಾರನನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳನ್ನು [illegible] ಉಚಿತವಾಗಿ ಸಿಗುವ ಹಾಗೆ "ತಾರಾ" ಲೀವರ್ ಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿಗೆ

ಕ್ಯಾಪ್ಟನ್ ವಾಚ್ ಕಂ ಪಿ. ಬಿ [illegible] ಮದ್ರಾಸ

The General Assurance Society Ltd, Ajmer.

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್.

ಹಿಂದುಸ್ಥಾನದ ಒಂದನೇ ತರಗತಿಯ

ಲೈಫ್ ಇನ್ಷೂರೆನ್ಸ್ ಕಂಪನಿ

ಚಾಲ್ತಿಗಿಳ್ಳಿರುವ ವಾರಸಿಗಳು. ರೂ. ೧೫೦,೦೨,೮೦೦

ಗಳು ನೇ ಇನ್ವೆಸ್ಟುಮೆಂಟ್ ಪಾಲಿಸಿಗಳು. ರೂಪಾಯಿಗಳು ೪೮೮೦೦

ನಫಾ – ೧೯೦೨/-ಕ್ಕೆ ೧ ವರ್ಷಕ್ಕೆ ೨೫/೧/೨ ರೂಪಾಯಿಗಳಂತೆ ಕೊಟ್ಟಿದೆ ಯಾವ ಕಂಪನಿಯೂ ೧೯೦೨ ರಲ್ಲಿ ಇಷ್ಟು ನಫಾ ಕೊಟ್ಟಿಲ್ಲ

ಹಿಂದುಸ್ಥಾನದ ಎಲ್ಲಾ ಮುಖ್ಯ ಪಟ್ಟಣಗಳಲ್ಲಿಯೂ ಆಫೀಸುಗಳು ಇವೆ.

ಇನ್ಷೂರೆನ್ಸು ಮಾಡಿಸುವದಕ್ಕೆ ಬೇಕಾದವರು ಮತ್ತು ಏಜಂಟರಾಗಿ ಕೆಲಸಮಾಡುವವರು ಈ ಕೆಳಗಿನ ಅಡ್ರೆಸ್ಸುಗಳಿಗೆ ಬರೆದು ತಿಳಿಯಬಹುದು.

೧. ಎಲ್ ವಿ ರಾಮುರ್ಡ್
ಚೀಫ್ ಏಜಂಟ್ ಹೈದ್ರಾಬಾದ್.

೨. ಡಾ ಆರ್. ಪಿ ಅಯ್ಯರ್
ಸಬ್‌ಏಜಂಟ್ (ಮದ್ರಾಸ್ ಡಿವಿಜನ್)
೪೪ ಲಿಂಗಪಟ್ಟಿ ಬೀದಿ ಮದ್ರಾಸು.

ದಿ ಏಶಿಯಾಟಿಕ್ ಗೌರ್ನಮೆಂಟಿ ಸೆಕ್ಯೂರಿಟಿ

ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಿನಿಟಿ.

ಪ್ರಕಟನೆ.

ಈ ಕಂಪನಿಯು ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೦೨ ನೇ ಇಸ್ವಿಯ ಜನೇವರಿ ೩೧ ನೇ ಕಾಲಿ ದಿನದ ೬ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡದು ಕೆಳಗ ಕಾಣಿಸಿದ ಸದ್ಗ್ರಹಸ್ತರಿಗೆ ಒಟ್ಟಿ ಮುಕ್ತು ಪತ್ತಿ ಇಲ್ಲದ ೧೦೦೦ ರೂ ಸಾಲತ್ತ ದೊರಯ ಬೇಕಂದು ನಿರ್ಣಯಿಸಲಾಯಿತು:—

(೧) ಎಲ್ ಬಿ ಸಿ. ನಂ. ೨೬೩೫ ವ್ಹಿ ವೀರಸ್ವಾಮಿ ಮುದಲಿಯಾರ ಸಾರಂಗರ ಅಲ್ ಎಮ್. ಎಸ್. ಎಮ್ ಡಿಪ್ಲೊಜಿನ್ ವ್ಹಸರಿ ಮಚ್ಯರಿ ರೂ ೧೦೦೦

(೨) ಎಲ್. ಬಿ. ಸಿ. ನಂ. ೧೦೬೮ ಆ ಸಿ ಎಮ್. ರಾಮ ಚಂದ್ರ ನಾಯುಡು ಎಫ್ ಆರ್. ಎಜ್. ಎಸ್. (ಲಂಡನ್, ಇನ್ಸ್ಪೆಕ್ಟರ ಸಿಲ್ಕ ವರ್ಕ್ಸ್ ಸಂಸ್ಥಾನ ಹೈದರಾಬಾದ (ದಕ್ಷಿಣ) ೧೦೦೦

(೩) ಎಲ್ ಬಿ. ಸಿ. ನಂ. ೧೯೧೩ ಗೋಪೀನಾಥ ನಾಗದಾಸ ಪೈ ಒಂಧ ಮರ್ಚಂಟ ಲಂ, ನುಂಬಪೂರ ರೋಡ ಡಾಕಾ ಈಸ್ಟರಗಾಲ ೧೦೦೦

(೪) ಬಾಂಡ ನಂಬರು ೧೩೬೪೫ ಶಮಾ . ಮುನಿಲಾಲ ಮೇಜಂದಮೆ ಬಗ್ರಾವಾಲ , ಕರಾಫ ಸಿರೋಡಿ ರಾಜ ಪ್ರತಾನಾ ರೂ ೧೦೦೦

(೫) ಬಾಂಡ ನಂಬರು ೧೩೬೫೫ ೧೯೦೨ ಜನವರಿ ೩೧ ನೇ ಕಾಲಿ ದಿನಾಂಕ, ಟಿವರ ನ್ಯೂ ಸ್ಕೂಲ್ ಕೊಲ್ಲಂ ಚಾರ ರೂ ೧೦೦೦

ಬಿ. ನ್. ಅರಿಂಧ್ಯ
ಜೀನಿಯರ್ ಓಫೀಸರ್ ಮೈಲಿ (ಮೂವರು ಇಲಿಟರಿ)

ಪುಸ್ತಕ! ಪುಸ್ತಕ!! ಪುಸ್ತಕ!!

ಒಂದು ರುಚಿಕರವಾದ ಪುಸ್ತಕ

ವೀರವಪುರ ರಾಜಾ

ಮತ್ತು

ಮಾಲಿನಿ.

ಪುಸ್ತಕವಾಗಿಯೂ ಬಂಗಲೆಯಲ್ಲವಿಲ್ಲದೆಯೂ ಕಳಿಸಲ್ಪಡುವದು.

ಬಿಂದು ಕಾರ್ಮಸ್ಸು ಬರೆಯಿರಿ.

ವಿಳಾಸ—

ಆತುರ ನಿಗ್ರಹ ಫಾರ್ಮಸಿ.

೨೬, ಬ್ರಾಡವೇ ಮದ್ರಾಸ

ದೀಪಕ್ಕೆ ತಗಲಿಸಿದ ನಿಮ್ಮ ಮನೆಯ ಕಾಜಿನ

ಗ್ಲಾಸುಗಳು

ಒಡೆಯುವಾರದೆಂದು ನಿಮ್ಮ ಇಚ್ಛೆ ಇದೆಯೆ? ಹಾಗಿದ್ದರೆ ನಮ್ಮಲ್ಲಿ ಬನ್ನಿ!! ನಾವು ಈ ಗ್ಲಾಸುಗಳಿಗೆ ತಂತಿಯ ಜಾಳಿಗೆಯನ್ನು ಹಾಕಿಕೊಡುವೆವು. ಇದರಿಂದ ಗ್ಲಾಸುಗಳು ಒಡೆಯುವದಿಲ್ಲ ಸ್ಟ್ಯಾಂಡು, ಗೋಡೆಗೆ ಹಾಕುವ ದೀಪ, ಗ್ಯಾಸದೀಪ, ಲಂದೀಲುಗಳು ಇವೇ ಮೊದಲಾದ ಎಲ್ಲ ದೀಪಗಳ ಗ್ಲಾಸುಗಳಿಗೂ, ಈ ಜಾಳಿಗೆಯನ್ನು ಹಾಕಿಕೊಡುವೆವು. ಹೀಗೆ ಜಾಳಿಗೆ ಹಾಕಿದ ಮಾದರಿಗಳನ್ನು ನಮ್ಮಲ್ಲಿ ಬೇಕಾದಾಗ ನೋಡಬಹುದು ಜಾಳಿಗೆ ಹಾಗಿದ ಗ್ಲಾಸುಗಳು, ವರ್ಷಾನುಗಟ್ಟಲೆ ಒಡೆಯುವದಿಲ್ಲವೆಂಬದನ್ನು ನಾವು ಅನುಭವದಿಂದ ಹೇಳಬಲ್ಲೆವು. ಗ್ರಾಹಕರಾದರೂ ಒಂದು ಸಲ ಅನುಭವ ಪಡೆದುಕೊಳ್ಳಬೇಕು.

ವ್ಯವಸ್ಥಾಪಕ ಬ್ಯೂಡಿಂಗಹೌತೆ

ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ

ಲಘುಕಾವ್ಯಮಾಲಾ.

ಸಂಪಾದಕರು— ಶ್ರೀ. ಎನ್. ವಿ. ಕುಲಕರ್ಣಿ ಬಿ. ಎ. ಗದಗ. ಈ ಮಾಲೆಯ ನಾಲ್ಕನೆಯ ಪುಷ್ಪವಾದ "ಪುಣ್ಯಶ್ಲೋಕ" ಎಂಬುದೊಂದೇ ಹೊಸ ವರ್ಷದ ಮೊದಲನೆಯ ಪುಷ್ಪವು. ವರ್ಷಕ್ಕೆ ಒಟ್ಟು ಆರು ಕುಸುಮಗಳು ವಾಚಕರಿಗರ್ಪಿಸಲ್ಪಡುವವು ಚಿಕ್ಕಮಕ್ಕಳಿಗೂ ಮಹಿಳೆಯರಿಗೂ ಸುವೇಧವಾಗಿ ತಿಳಿಯಬೇಕಾದರೆ ಇದೊಂದೇ ಕಾವ್ಯಮಾಲೆಯು. ವರ್ಷಿಕ ವರ್ಗಣಿ ಕೇವಲ ೦—೮—೦ ಮಾತ್ರ.

ಈ ಮಾಲೆಯ ಮೊದಲಿನ ಮೂರು ಪುಷ್ಪಗಳು ಮೂರಾಣೆ ಟಿಕೀಟು ಕಳಿಸಿದರೆ ದೊರಕುವವು.

ಕರ್ನಾಟಕ ಮಹಿಳಾವಿದ್ಯಾಲಯ ಧಾರವಾಡ.

ಈ ವಿದ್ಯಾಲಯದಲ್ಲಿ ಉತ್ತಮ ಗೃಹಿಣಿಯರಿಗೆ ಅವಶ್ಯವಾದ ಶಿಕ್ಷಣವನ್ನು ಕೊಡುವದಲ್ಲದೆ ವರ್ನಾಕ್ಯುಲರ ಫೈನಲ್ ಪರೀಕ್ಷೆಗಳಿಗೆ ಕೂಡ್ರುವದಕ್ಕೆ ಕರ್ನಾಟಕ ಪ್ರಾಂತದ ಉಪಜೀವನ ಮಾಡಿಕೊಳ್ಳಬಹುದಾದ ಹೊಲಿಗೆ, ಜರದೆ ಕೆಲಸ ಮುಂತಾದ ಕಲೆಗಳ ಶಿಕ್ಷಣವನ್ನೂ ದೊರೆಯುವದು. ಪರೀಕ್ಷೆಯಾದವರಿಗೆ ಅವಶ್ಯವಾದ ವಸತಿಗೃಹವೂ ಇರುವದು. ಯೋಗ್ಯರಾದ ಬಡವಿದ್ಯಾರ್ಥಿನಿಯರಿಗೆ ಅನ್ನವಸ್ತ್ರವನ್ನು ಸಹ ಕೊಟ್ಟು ಶಿಕ್ಷಣವನ್ನು ಕೊಡಲಾಗುವದು.

ವಿಜಾಪೂರ, ಧಾರವಾಡ, ಕಾರವಾರ ಮೊದಲಾದ ಜಿಲ್ಲೆಗಳಲ್ಲಿಯ ವಿದ್ಯಾರ್ಥಿನಿಯರು ಓದುತ್ತಿದ್ದಾರೆ.

ಸೌ॥ ಲಕ್ಷ್ಮೀ ಬಾಯಿ ಕುಂಭಕೋಣಿ,
ವ್ಯವಸ್ಥಾಪಕರು, ಕ. ಮ. ವಿದ್ಯಾಲಯ, ಧಾರವಾಡ

ನೋಟೀಸು

ಮುಂದಿನ ಸಂಗ್ರಾಮಿನಲ್ಲಿ ಡಾವಣಗೇರಿ, ವಿಜಾಪೂರ ಮತ್ತು ಇತರ ಭಾಗಗಳಿಂದ ಪತ್ರಿಕಾಕಾಳಗಾಗಿ 'ಆಯುಸನ್ನ' ಕೊಡಲಾಗುವದಿಲ್ಲ. ಇನ್ನು ಮುಂದೆ ಇಂಥ ಆಯುಸನ್ನ ಪಡೆಯಲಪೇಕ್ಷೆಯುಳ್ಳ ದಲಾಲರಾಗಲಿ, ಅಥವಾ ರೈತರಾಗಲಿ, ಇದೇ ಹಂಗಾಮದಲ್ಲಿ ಮುಂಗಡವಾಗಿಯೇ ತಮ್ಮ ತಮ್ಮ ದೊಡ್ಡ ಪೇಟೆಗಳಲ್ಲಿ ಪತ್ರಿಕಾಳುಗಳನ್ನು ಕೊಂಡು ಸಂಗ್ರಹಿಸುವದು ಲೇಸು. ಯಾಕಂದರೆ ದೊಡ್ಡ ದೊಡ್ಡ ವರ್ತಕರು ಪತ್ರಿಕಾಳುಗಳನ್ನು ಕೊಂಡು ಪರದೇಶಕ್ಕೆ ಕಳಿಸುವರಿಂದ ರೈತರಿಗೆ ಇದರ ಕೊರತೆಯಾಗಬಾರದೆಂದು ಇದನ್ನು ಮುಂಜಾಗ್ರತೆಯಿಂದ ಹೀಗೆ ತಿಳಿಸುವೆವು.

ಧಾರವಾಡ
೧೦—೩—೧೯೨೮ | ಎಸ್. ಎಸ್. ಸಾಲಿಮಠ
ಒಳ್ಳಲಶನಿದ ಜಿಪ್ಪಿದಾಯರೆಳ್ಳರ

ವಾಣಿದಯೆ

ಸಚಿತ್ರ ಮಾಸಪತ್ರಿಕೆ.

ಬಳ್ಳಾರಿ. ಜಂಗಳೂರು

ಅಹಿಂಸಾ ಪ್ರಚಾರಕ್ಕಾಗಿಯೇ ಕಂಕಣಬದ್ಧವಾಗಿ ವಾಣಿದಯಾ ಸಂಬಂಧವಾದ ಲೇಖಗಳನ್ನೇ ಸೇರಿಸಿ ಕರ್ನಾಟಕವಾಯ ಸೇವೆಮಾಡುವ ಮುಖೋದ್ದೇಶದಿಂದ ಹೊರಟಿರುವ ಕನ್ನಡ ಪತ್ರಿಕೆಯ, "ಇದು ಒಂದೇ."

ಸಮಸ್ತ ಕನ್ನಡಿಗರ ರಗತವಾಗಬೇಕೆಂಬ ಧ್ಯೇಯದಿಂದ ವಾರ್ಷಿಕ ಚಂದಾ ಎಂಟೇ ಆಣೆ ಇಟ್ಟಿರುತ್ತದೆ.

ವರ್ಷಕ್ಕೆ 5/- ರೂ ಪಾಯಿಗಳನ್ನು ಕೊಡುವವರನು ಪ್ರಧಾನ ಪೋಷಕರಾಗಿಯೂ 2/- ರೂಪಾಯಿ ಕೊಡುವವರನು ಪೋಷಕರಾಗಿಯೂ ಪರಿಗಣಿಸಲ್ಪಟ್ಟು, ಪ್ರತಿ ಸಂಚಿಕೆಯಲ್ಲಿಯೂ ಅವರ ಪೆಸರುಗಳು ಪ್ರಕಟಿಸಲ್ಪಡುವವು

ಶುದ್ಧವಾದ ಹಿಮಾಲಯದ

ಚೀನತುಪ್ಪ!

ನಮ್ಮಲ್ಲಿ ಶುದ್ಧ ಹಾಗೂ ವಿಮಿಶ್ರಿತವಲ್ಲದ ಚೀನತುಪ್ಪವು ಗ್ಯಾರಂಟಿ ಪತ್ರ ಸಹಿತವಾಗಿ ದೊಡ್ಡ ಪ್ರಮಾಣದಿಂದ ಅಗ್ಗವಾಗಿ ಮಾರುವದು ವ್ಯಾಪಾರಸ್ಥರು ತಮ್ಮ ರೆಯಾಡಬೇಕು, ಪತ್ರವ್ಯವಹಾರವನ್ನು ಇಂಗ್ಲಿಷ ಅಥವಾ ಹಿಂದಿಯಲ್ಲಿ ಮಾಡಬೇಕು

ನಿಳಾಸ— ಪಂಡಿತ ಘನಶ್ಯಾಮ ಪಾಂಡೆ
C/o ಲಾಲಾರಾಮ ಶರಣದಾಸ ಕಿಸನಸಹಾಯ
ನಜೀಬಾಬಾದ (ಜಿಲ್ಲಾ ಬಿಜನೋರ)

ಬೈಂಡಿಂಗದ

ಹೊಸ ಉತ್ತಮ ವ್ಯವಸ್ಥೆ

ನಾವು ಮಂಗಳೂರಿನಿಂದ ನುರಿತಂತಹ ಓರ್ವ ಬಾಯಿಂಡರನ್ನು ಕರೆಸಿದ್ದೇವೆ. ಮುಂಬೈ, ಮದ್ರಾಸ, ಮಂಗಳೂರ, ಬೆಂಗಳೂರಗಳಲ್ಲಾಗುವ ಎಲ್ಲ ನಮೂನೆಯ ಫುಲ್‌ಲೆದರ, ಹಾಫ್‌ಲೆದರ ಬುಲ್‌ಕಲಿಕೋ, ಹಾಫ್‌ಕಲಿಕೋ, ಸಿಫ್ಸ್ ಕವರ ಮುಂತಾದ ಇನ್ನೂ ಅನೇಕ ನಮೂನೆಯ ಬೈಂಡಿಂಗ ಕೆಲಸವು ನಮ್ಮಲ್ಲಿ ಒಳ್ಳೇ ಅಚ್ಚುಕಟ್ಟಾಗಿ ಮಾಡಲ್ಪಡುತ್ತದೆ. ಲದರ ಬೈಂಡಿನ ಮೇಲೆ ಎಲ್ಲ ಗೆಯ ಗೋಲ್ಡಗಿಲ್ಟ ಕೆಲಸವೂ ಮಾಡಲ್ಪಡುತ್ತದೆ.

ಪ್ರಯಾಣಿಕರಿಗೆ ಬೇಕಾಗುವ ಎಲ್ಲ ನಮೂನೆಯ ಟ್ರಾವ್ಹಲಿಂಗ ಬ್ಯಾಗುಗಳೂ (ಕೈಪೆಟ್ಟಿಗೆ) ಕಾಗದ ಪತ್ರಗಳನ್ನು ಇಡುವ ಮತ್ತು ದುಡ್ಡು ಹಾಕುವಂಥ ಪಾಕೀಟುಗಳೂ, ಲೆದರಿನಿಂದಲೂ ಒಟ್ಟಿಯಿಂದಲೂ, ಕೃಷ್ಣಾಂಜನದಿಂದಲೂ ನಮೂನೆವಾರು ತಯಾರ ಮಾಡಲ್ಪಡುವವು.

ನಾದುರಸ್ತಿಯಾದ ಹಾರ್ಮೋನಿಯಮ್ ಪೆಟ್ಟಿಗೆಯನ್ನು ದುರಸ್ತಿಮಾಡಿ ಒಳಗಿನ ಮತ್ತು ಹೊರಗಿನ ಗಾಳಿಯ ತಿದಿಯನ್ನು ಹೊಸದಾಗಿ ಕಂಪನಿಯ ನಮೂನೆಯಲ್ಲಿ ಹೆಚ್ಚು ಸಮಯ ಬಾಳಿಕೆ ಬರುವಂತೆ ತಯಾರುಮಾಡಿ ಚಲೋ ರೀತಿಯಿಂದ ದುರಸ್ತಿ ಮಾಡಲ್ಪಡುವದು.

ಇವೇ, ಕೋರ್ಟು ಮತ್ತು ಕಚೇರಿಗಳಿಗೆ ಬೇಕಾಗುವ ಎಲ್ಲ ನಮೂನೆಯ ಪೋರ್ಟಫೊಲಿಯೋಗಳನ್ನೂ, ಫೈಲುಗಳನ್ನೂ ತಯಾರುಮಾಡಿ ಕೊಡಲ್ಪಡುವದು.

ಇನ್ನು ಬೇಲೆ ಇತ್ಯಾದಿಯು ಜನರು ಮುಂಬೈ, ಬೆಂಗಳೂರ, ಅಥವಾ ಮಂಗಳೂರಿಗೆ ಹೋಗುವ ಕಾರಣವಿಲ್ಲ! ಒಮ್ಮೆ ಅನುಭವ ತೆಗೆದುಕೊಂಡು ನೋಡಬೇಕು.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಾಲಯ ಮಂದಿರ ಬಾಗಲಕೋಟೆ.

ಲಾವಣೀ ಪತ್ರಿಕೆಗಳು

ಕೊಲಗಟ್ಟನ್ನು ಲಾವಣೀ ಸಾಗಿಸುವ ಸಮಯವೆಂದರೆ ಇದೇ. ಲಾವಣೀ ಪತ್ರಿಕೆಗಳ ನಮೂನೆಗಳು ನಮ್ಮಲ್ಲಿ ವಾರಾಟಕ್ಕಾಗಿ ಮುದ್ರಿಸಿ ಇಡಲ್ಪಟ್ಟಿವೆ ಬೇಕಾದವರು ಅವಶ್ಯವಾಗಿ ಕೊಂಡುಕೊಳ್ಳಬಹುದು. ಬೆಲೆ ನೂರಕ್ಕೆ ರೂ. ೧—೮—೦

ಪರಸ್ಥಳಗಳಲ್ಲಿಯ ಗ್ರಹಕರು ಒಂದಾನೆ ತೀಟು ಕಳುಹಿಸಿದರೆ ಮಾತ್ರ ನಮೂನೆಗಳು ಮಾದರಿಗಾಗಿ ಕಳಿಸಲ್ಪಡುವವು.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಾಲಯ ಮಂದಿರ ಬಾಗಲಕೋಟೆ.

ದಾಸವರ್ಯ

ಪ್ರಸನ್ನವೆಂಕಟರ

ಗ್ರಂಥಗಳು

(ಅರ್ಥಸಹಿತವಾಗಿವೆ.)

(೧) ಭಾಗವತ ದಶಮಸ್ಕಂದ ಪೂರ್ವಾರ್ಧ— ಕಥಾಭಾಗ ೨— ಕೃಷ್ಣ ಜನ್ಮದಿಂದ ಕಂಸವಧ ಪೂರ್ಣ, ಗಂಭೀರವಾದ ಅಚ್ಚ ಕನ್ನಡ ಭಾಷೆ! ಮೂಲ ಭಾಗವತದ ಯಾವ ಭಾಗವನ್ನೂ ಬಿಟ್ಟಿಲ್ಲ. ಎಷ್ಟೋ ಕಡೆಗೆ ಮೂಲದ ಭಾಷಾಂತರವೇ ಇದೆ. ಪುಟ ೨೧೮ ಅಂದವಾದ ಮುದ್ರಣ!

ಬೆಲೆ. ಕಾಗದರಟ್ಟು ೧-೦-೦ ಬಟ್ಟೆನಕಟ್ಟು ೧-೨-೦

(೨) ಕೀರ್ತನೆಗಳು. ೧ನೇ ಭಾಗ— ಅರ್ಥಭಕ್ತಿಯ ಬಳಲಿಕೆ, ತತ್ವೋಪದೇಶವೆಂಬ ೨ ಭಾಗಗಳಲ್ಲಿ ಹಾಡುಗಳನ್ನು ಕೊಟ್ಟಿದೆ. ಪ್ರತಿಯೊಂದು ಹಾಡಿನಲ್ಲಿ, ಭಕ್ತಿರಸವು ಉಕ್ಕುತ್ತಿದೆ. ಪುಟ ೧೦೪ ಬೆಲೆ. ೦-೮-೦

ದಾಸರ ಭಕ್ತರು ತ್ವರೆಮಾಡಿರಿ!!

ವಿಳಾಸ— ಕರ್ಮವೀರ ಪುಸ್ತಕಾಲಯ ಧಾರವಾಡ

೮ ೧೬ ೩ ೪

೧೨ ೩ ೧೬ ೯ ೫ ೫

S.U.N.& CO.
BENARESCITY.

ಬನಾರಸ್ ರೇಶ್ಮೀ ಶಿರೆಗಳು

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೀ ಮ್ಯಾಲುಗಳನ್ನು ಕೋಡುವವರಿಗೆ ವಿ. ಪಿ. ಮೂಲಕ ಕಳುಹಿಸಲ್ಪಡುವದು. ಬಿಳೀ ರೇಶ್ಮೀ ಕೋಟಿಂಗ್ ಶಿಲ್ಕು ಉದ್ದಮೊಳಗಿಲ ಅಗಲಿಮೊಳ ೩, ಥಾನು ೧೫ ಕ್ಕೆ ೧೫ ರಿಂದ ೫೦. ಜರಿ ಶಿರೆಗಳು ೧೬ ಗಜ ಮೊಳ ಉದ್ದ ೧೫ ಕ್ಕೆ ರೂ. ೨೯ ರಿಂದ ೫೦ ರವರೆಗೆ. ಬುಟ್ಟಿದಾರ್ ಬನಾರಸ್ ಸೀರೆ ೧೬-೧೫ ಉದ್ದ ಮೊಳ ೬ ೧೫ಕ್ಕೆ ರೂ. ೫ ರಿಂದ ೫೧ ವರೆಗೆ ಉಡುವ ಮಗುಟ ಉದ್ದ ೬-೮ ಮೊಳ ೧೫ಕ್ಕೆ ರೂ. ೧೦ ರಿಂದ ೩೦ ರ ವರೆಗೆ ಜರೀದ್ದು ೬-೮ ಮೊಳ ಉದ್ದ ೧೫ಕ್ಕೆ ರೂ. ೧೧ ರಿಂದ ೪೦ ರ ವರೆಗೆ. ಬಿಳಿ ರೇಶ್ಮೆ ಜರೀಡಪ್ಪಟಿ ಮೊಳ ಉದ್ದ ೧೫ಕ್ಕೆ ರೂ. ೧೧ ರಿಂದ ೩೦ ರವರೆಗೆ ಸಾದಾ ಬಂಗಾಳಿ ರೇಶ್ಮೆ ಶಾಲು ೬ ಮೊಳ ಉದ್ದ ೩ ಮೊಳ ಅಗಲು ೧೫ಕ್ಕೆ ರೂ. ೬ ರಿಂದ ೧೫೦ ರವರೆಗೆ ಸ್ಪಟಿಕದ ೧೦೮ ರ ಸರ ೧೫ಕ್ಕೆ ರೂ. ೧ ರಿಂದ ೧೨ ರ ವರೆಗೆ ಸುದರ್ಶನ ೧೫ಕ್ಕೆ ಆಣೆ ಲರಿಂದ ರೂವಾಯಿ 1½ ರವರೆಗೆ ಜಗನ್ನಾಥಜಾಗಂಟಿ ೧೫ಕ್ಕೆ ರೂ. 2½ರಿಂದ 15 ರ ವರೆಗೆ ಮತ್ತು ದೇರೆ ಬೇರೆ ದವ್ಯಾ ಎಗಳ ಕೆಟಲಾಗಇನಾಂ

ವಿಳಾಸ—ಶಿರೋ ಎಣೆ ನಾರಾಯಣಾಚಾರ್ಯ
"ಂಪನಿ ಬೌಳಂಬಾ ಕಾಶಿ ಬನಾರಸ್

ಟೇಬಲ್ ಟೈಂಪೀಸ್ ಇನಾಂ.

ಈ ನಪ್ಪಿಯಲ್ಲಿ ಕಂಡ ಪೌಂಟೆನ್ ಪೇನಾವು ಇಂಗ್ಲೀಡಿನಲ್ಲಿ ತಯಾರಾದ ದ್ದು ಇದಕ್ಕೆ ೧೫ ಕೆರೆಟ್ ನ ಭುಗಾರದಂಥ ಸಿಬ್ಬು ಹಾಕಿದೆ ಈ ಪೇನಾವಿನಲ್ಲಿ ಬರೆಯುವದರಿಂದ ಈ ಕ್ಷರಗಳು ಬಹು ಚೆನ್ನಾ ಕಾಣುವವು. ಈ ತಿಂಗಳೊಳಗಾಗಿ ಈ ಪೇನಾವನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೇಬಲ್ ಟೈಂಪೀಸ್ ಸಹಿತ ಪೇನಾ ೧೫ ಕ್ಕೆ ೩-೮-೦
ವಿಳಾಸ- ಪೀಟರ್ ವಾಚ್ ಕಂಪನಿ
ಪೋ॥ ಬಾಕ್ಸ ನಂ. ೨೭, ಮದರಾಸು

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಆಂ. ಹಾಸಲು

ಉಳ್ಳದೆ ಸರ್ಕಾರ್ಕ ಉಚಿತವಾಗಿ ಕೊಡಲ್ಪಡುವ ಸಮ್ಮ

ವೈದ್ಯವಿದ್ಯ

ಯೆಂಬ ಆರೋಗ್ಯ ಮಾರ್ಗದರ್ಶನ ಅನೇಕ ರಹಸ್ಯ ವಾದ ವಿಷಯಗಳವೆ.

ಏಜಂಟರು:—ಜಂಬುಲಿಂಗಪ್ಪಾ ಜಾಲವಾದಿ.
ಕ್ಷೇತಸರ್ ಬಾಗಲಕೋಟೆ.
ರಾಜವೈದ್ಯ ನಾರಾಯಣಜಿ ಕೇತವಜಿ.
ಳಳ. ಚೀನಾಬಜಾರ್, ಮದ್ರಾಸು

ಲಗ್ನ ಕಾಲದ ಸಲುವಾಗಿ.

ಉತ್ತಮವಾದ ಹಣ್ಣು, ಕಾಯಿಪಲ್ಯಗಳು, ಹೂವು, ಪಾಕಗಳು, ಮತ್ತು ಕುಂತಲರಂಜನಿಯವ ತಯಾರಿಕೆಯ ಕಶ್ರೇಷ್ಯತಕ ಗಂಧ, ಊದುಬತ್ತಿ, ಇವುಗಳನ್ನು, ಉತ್ತಮವಾದ ಸ್ಪಾಂಡರ್ ಕಾಫಿ ಪುಡಿಯನ್ನೂ ಸಕಾಲಕ್ಕೆ ಕಳುಹಿಸಿಕೊಡುತ್ತೇವೆ.

ಅಡ್ವಾನ್ಸಿಲ್ಲದ ಆರ್ಡರುಗಳಿಗೆ ಗಮನಕೊಡುವದಿಲ್ಲ

Fruit and Vegetible Supplying Company. 14 Obiale's lane Cottonpet

ಬಾಗಲಕೋಟೆ, ವಿಜಾಪುರ್ತನೋಟಾರ ಸರ್ವೀಸ ಪ್ರಾರಂಭವಾಗಿದೆ!

ಬೆಳಗಾವಿಗೆ ಬಾಗಲಕೋಟೆಯಿಂದ ೩೫ ರೂ. ಹಾಸಲು ಮುದ್ದಾಂ ಮಾಡಲ್ಪಟ್ಟಿದೆ.



ವಿಜಾಪೂರ ಜಿಲ್ಲೆಯಲ್ಲಿಯು ಮತ್ತು ಸುತ್ತು ಮೊತ್ತಲಿನ ಹಾಸಿಗೆ ಸರ್ವೀಸಿಗೆ ಮೋಟಾರ ಮಾಲಕರ ಗೈರಸೆಂಯು ದಯವಿಟ್ಟಾಗಬೇಕೆಂದು

ಆರ್. ಜಿ. ಚವ್ಹಾಣ ಎಂಡ ಸನ್ಸ, ಬೆಳಗಾವ. ಇವರು ತಮ್ಮ

ಜನರಲ ಮೋಟಾರ ಅಕ್ಸೆಸರಿ ಸ್ಟೋರಿನ ಶಾಖೆಯನ್ನು

ತಾ॥ ೧೦ ಸಪ್ಟೆಂಬರ ೧೯೬೭ನೇ ಇಸ್ವಿಯಿಂದ ಬಾಗಲಕೋಟೆಯಲಿ

ಸುರು ಮಾಡಿರುವರು.

ನಮ್ಮಲ್ಲಿ ಲ್ಲ ಕರದ ಸಾಯಿಜಿನ ಅಂದರೆ ಮುಖ್ಯವಾಗಿ ಡಾಜ್, ಫೋಡ, ಶೆವ್ರಲೇಟ, ಓವ್ಹರಲೇಂಡ ಮುಂತಾದ ಮೋಟಾರಗಳಿಗೆ ಹತ್ತುವ ಸಾಮಾನು, ಮತ್ತು ಟಾಯರ್ಸ, ಟ್ಯೂಬ್ಸ, ಗ್ರೀಸ, ಪೇಂಟಿಲ ಆಯಿಲ, ಪೆಟ್ರೋಲ ಮುಂತಾದ ಸಾಮಾನುಗಳು ಯೋಗ್ಯ ದರದಿಂದ ಸಿಗುವವು. ಒಂದು ವೇಳೆ ವ್ಯಾಪಾರಸ್ಥರು ಖಾತ್ರಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರವಿಂದ.

ಬಾಲಕಃ— ವಾಯ್. ಜಿ. ಚವ್ಹಾಣ.

ನಮ್ಮಲ್ಲಿ ಟಾಯರ್ ಮತ್ತು ಟ್ಯೂಬ್ಸ ಉತ್ತಮ ಪ್ರಕಾರದಿಂದ ಮತ್ತು ಯೋಗ್ಯ ದರದಿಂದ ವ್ಯವಸ್ಥಿತವಾಗಿ ಮಾಡಿ ಕೊಡುತ್ತೆವು

ಬಾಗಲಕೋಟೆ-ಜೆಳಗಾವಿ, ಬಾಗಲಕೋಟೆ-ಇಲಕಲ್ ಸರ್ವೀಸ ೧೫ಫಾಸ್ಟ್‌ಚಾರ ಸಪ್ಟೆಂಬರ

ಭದ್ರವಾದ ಧನವಿನಿಯೋಗ ಮತ್ತೂ

ಮನೆತನಕ್ಕೆ ಭೂಷಣವಾದ ಆಸ್ತಿ!



ಶ್ರೀಕೃಷ್ಣ, ಶ್ರೀರಾಮ, ಮಾ
ಸಂಸ್ಕೃತಿ ಇವೇ ಮೊದಲಾದ ದೇ
ಬುದ್ಧದೇವ, ನಾಯಕಿ, ಶಂಕರಾ
ರಾಮಾನುಜಾ, ಬಸವಾದಿ ಧಾ
ಶರ ರಾಜರು ಮಹಾರಾಜರುಗಳ
ಟಿಳಕ, ಗೋಖಲೆ, ದಾಸ ಗಾಂಧಿ
ಕಹ ವಿಭೂತಿಗಳ ಅತ್ಯುತ್ತಮವಾ
ತೆಗೆದ ಹಾಗೂ ಒಳ್ಳೇ ಲಲಿತವಾ
ಹಾಕಿದ ಶುದ್ಧ ಬೆಳ್ಳಿಯ ಎದು
ವ ಚಿತ್ರಗಳನ್ನು (Relief Pic

ನಾವು ಸಿದ್ಧ ಪಡಿಸಿರುತ್ತೇವೆ. ಪ್ರತಿಯೊಂದು ಕುಟುಂಬಕ್ಕೆ ಇವು ನಿಜವಾಗಿಯೂ ಅಲಂಕಾರಗಳೇ ಸರಿ. ಆದರಿಂದಲ್ಲೇ
ಮನೆ, ಪಡಸಾಲೆಗಳನ್ನೂ, ದಿವಾಣಖಾನೆಯನ್ನೂ ಶೃಂಗರಿಸಲು ಇವು ಶಕ್ತ. ವಸ್ತುಗಳಾಗಿವೆ. ಅಲ್ಲದೆ, ಶುದ್ಧವಾದ ಬೆ
ಮಾಡಿದ, ಎಲ್ಲ ಹಿಂದೂ ದೇವರುಗಳ ಗಟ್ಟಿ ವಿಗ್ರಹಗಳು ನಮ್ಮಲ್ಲಿ ದೊರೆಯುತ್ತವೆ. ಹೆಚ್ಚಿನ ಸಂಗತಿಗಳಿಗಾಗಿಯೂ, ಬೆ
ಯೂ ಬರೆದುಕೊಳ್ಳಿ!

ದಿ ಇಂಡಿಯನ್ ಜ್ಯುವೆಲರಿ ಮಾರ್ಟ್ ನಗರ್ತಪೇಟೆ, ಬೆಂಗಳೂರ ಸಿಟಿ.

ಲಿಪ್ಟನ್ ಓರಿಯಂಟಲ್ ಬಾಮು.

ಸೊಳ್ಳೆ ಬಾಧೆಗಳ ನಿವಾರಣಾರ್ಥ

ಳ ವರ್ಷಗಳಿಂದ ಜಗತ್ತಿನ ಕುಂಬ ಪ್ರಖ್ಯಾತಿಯನ್ನು ಪಡೆದ ಉಪಾಯ
ವೆಂದರೆ ಇದೆ.

ಹಿಂದುಸ್ಥಾನದ ಅದ್ಭುತವಾದ
ವೇದನಾಶಾಮಕವಾದ ಉಪಾಯವು!

ಕೆಳಗಿನ ವ್ಯಾಧಿಗಳಿಗೆ ತತ್ಕಾಲಿಕ ಗುಣ ಬರುವಾಗಿದ್ದರೆ, ಇದನ್ನೇ ಉ
ಯೋಗಿಸಿರಿ—

ತಲೆಶೂಲಿ, ಸಂಧಿವಾತ, ಎಲ್ಲ ತರದ ಕಡ, ನರ ನೋವುಗು, ಹರಿವಾಣ
ಟೂಂಕನೆನೋವು, ಅಜೀರ್ಣಾಂಗವಾಯು ಉಳುಕು ಮೊದಲಾದ್ದು

ಸ್ವಲ್ಪೇ ಮಟ್ಟಿನಿಂದ ಒಡನೆಯೇ ಗುಣ. ಉಂಟು ಇಲ್ಲವೆಯೆಲ್ಲ. ಗು
ಗಳೂ ಏಳೆವಿಲ್ಲ ಸುಖವಾಗಿ ಗುಣ ಕೊಡುತ್ತದೆ.

ಹಿಂದುಸ್ಥಾನದಲ್ಲಯೇ ಹಿಂದೀಯರಿಂದ ತಯಾರಾದದ್ದು.

ನಣ ಮೊದಲಾದ ಅಪವಿತ್ರ ಪದಾರ್ಥಗಳಿಲ್ಲವೇಯಿಲ್ಲ.

ಈ ದಿವಸವೇ
ಒಂದು ಬಾಟ್ಲಿ ಕೊಳ್ಳಿ.

ಪ್ರತಿಯು ಮಂಗಳವೇಢ ಬಾದಾಮಿಯಿಂದ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ
ಅವರ ಸ್ವಂತ ವಿದ್ಯಾರಣ್ಯ ಮುದ್ರಾ ಯಂತ್ರದಲ್ಲಿ ಮುದ್ರಿಸಿ ಪ್ರಕಟವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.